
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಕೋಲ್ಕತ್ತಾದ ಈಡನ್ ಗಾರ್ಡನ್ ಮೈದಾನದಲ್ಲಿ ಸೋಮವಾರ ನಡೆಯುತ್ತಿದ್ದ ಪಂಜಾಬ್ ಕಿಂಗ್ಸ್ ಮತ್ತು ಕೆಕೆಆರ್ ನಡುವಿನ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿದೆ.

07 ಏಪ್ರಿಲ್ 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 28 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ರಾಜ್ಯ ಶಿಕ್ಷಣ ಪದ್ಧತಿ ಬದಲಾವಣೆ ಇದು ಸಕಾಲ » 2


ಬೊಮ್ಮೇನಹಳ್ಳಿ ಸುತ್ತ ಕಾಡಾನೆಗಳ ಹಿಂಡು ಪ್ರತ್ಯಕ್ಷ » 3


ಅಮೇರಿಕಾ-ಇರಾನ್ ಮಧ್ಯೆ ಕದನ ವಿರಾಮ ಪ್ರಸ್ತಾಪ » 4

# ಜನರಿಂದ ದೇವೇಗೌಡರ ಕುಟುಂಬ ತಿರಸ್ಕಾರ

## ಅಸ್ತಿತ್ವ ಉಳಿಸಿಕೊಳ್ಳಲು ಬಿಜೆಪಿ ಜೊತೆ ಮೈತ್ರಿ: ಸಿದ್ದರಾಮಯ್ಯ ಟೀಕೆ

• ಪ್ರಜೋದಯ ವರದಿ

**ಬೆಂಗಳೂರು:** ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ಬಯಸಿದರೆ ರಾಜಕಾರಣಕ್ಕೆ ಬರುವುದು ತಪ್ಪಲ್ಲ. ಜನ ತಿರಸ್ಕರಿಸಿದ ಬಳಿಕವೂ ಕುಟುಂಬ ರಾಜಕಾರಣ ಸಮರ್ಥನೆ ಮಾಡಿಕೊಳ್ಳುವುದು ಸರಿಯಲ್ಲವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಸೋಮವಾರ ದಾವಣಗೆರೆಯಲ್ಲಿ ಚುನಾವಣಾ ಪ್ರಚಾರದ ವೇಳೆ ಮಾತನಾಡಿದ ಅವರು, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡ ಅವರ ಇಬ್ಬರು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ರಾಜಕಾರಣದಲ್ಲಿದ್ದಾರೆ. ಚನ್ನಪಟ್ಟಣ ಉಪಚುನಾವಣೆಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಪುತ್ರನ ಸ್ಪರ್ಧೆಯನ್ನು ಕ್ಷೇತ್ರದ ಜನರೇ ಬಯಸಿರಲಿಲ್ಲ. ಮತದಾರರು ತಿರಸ್ಕರಿಸಿದ ಬಳಿಕವೂ ಪಾಠ ಕಲಿತಿಲ್ಲವೆಂದು ಟೀಕಿಸಿದರು.



2004ರಲ್ಲಿ ನಾನು ಅಧ್ಯಕ್ಷನಾಗಿದ್ದಾಗ ಜೆಡಿಎಸ್ ರಾಜ್ಯದ 59 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಅಲ್ಲಿಂದ ಈಚೆಗೆ ಎಂದಿಗೂ ಇಷ್ಟು ಸ್ಥಾನಗಳನ್ನು ಗೆಲ್ಲಲು ಜೆಡಿಎಸ್‌ಗೆ ಸಾಧ್ಯವಾಗಿಲ್ಲ. 2023ರಲ್ಲಿ ಈ ಪಕ್ಷದ ಸಾಮರ್ಥ್ಯ 19ಕ್ಕೆ ಕುಸಿದಿದೆ. ಅಸ್ತಿತ್ವ ಉಳಿಸಿಕೊಳ್ಳಲು ಅಪ್ಪ-ಮಕ್ಕಳು ಬಿಜೆಪಿ ಜೊತೆ ಕೈಜೋಡಿಸಿದ್ದಾರೆ. ನನ್ನನ್ನು ಟೀಕಿಸುವ ನೈತಿಕತೆಯನ್ನು ಅವರು ಉಳಿಸಿಕೊಂಡಿಲ್ಲವೆಂದು ಕಿಡಿಕಾರಿದರು.

ವಿ.ಸೋಮಣ್ಣ ರೈಲ್ವೆ ಖಾತೆಯ ರಾಜ್ಯ ಸಚಿವರು. ಅವರು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶವಿಲ್ಲ. ನನಗೆ ಗೊತ್ತಿರುವ ಮಟ್ಟಿಗೆ ಅವರ ಬಳಿಗೆ ಯಾವುದೇ ಕಡತಗಳು ಬರುವುದಿಲ್ಲ. ವಿಧಾನ

» ನಾಲ್ಕನೇ ಪುಟದಲ್ಲಿ

### ಯಡಿಯೂರಪ್ಪಗೆ ಅರುಳು ಮರುಳು

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಭ್ರಷ್ಟಾಚಾರದ ಬಗ್ಗೆ ಬಿಜೆಪಿಯ ಯತ್ನಾಳ್ ಮತ್ತು ವಿಶ್ವನಾಥ್ ಅವರೇ ಬಹಿರಂಗವಾಗಿ ಹೇಳಿದ್ದಾರೆ. ನಾನು ಯಾರಿಗೆ ವಿಶ್ವಾಸದ್ರೋಹ ಮಾಡಿದ್ದೇನೆ ಎನ್ನುವುದನ್ನು ಅರುಳು ಮರುಳು ಯಡಿಯೂರಪ್ಪ ಅವರು ಆಧಾರ ಸಹಿತವಾಗಿ ಮಾತನಾಡಬೇಕೆಂದು ಸಿದ್ದರಾಮಯ್ಯ ಅವರು ಹೇಳಿದರು.

ತಮ್ಮ ಜಾತಿಯ ಅಭ್ಯರ್ಥಿ ಆದ ಕಾರಣ ಸಿದ್ದರಾಮಯ್ಯ ಅವರು ಬಾಗಲಕೋಟೆಯಲ್ಲಿ ಠಿಕಾಣಿ ಹೂಡಿದ್ದಾರೆ ಎನ್ನುವ ಯಡಿಯೂರಪ್ಪ ಅವರ ಆರೋಪಕ್ಕೆ ಪ್ರತಿಕ್ರಿಯಿಸಿ, ದಾವಣಗೆರೆ ದಕ್ಷಿಣದಲ್ಲಿ ನಮ್ಮ ಅಭ್ಯರ್ಥಿ ಸಮರ್ಥ್ ಶಾಮನೂರು ಪರವಾಗಿ ಅಲ್ಲೇ ಠಿಕಾಣಿ ಹೂಡಿ ಪ್ರಚಾರ ಮಾಡಿದ್ದೇನೆ. ಅವರು ಯಾವ ಜಾತಿ ಎಂದು ಪ್ರಶ್ನಿಸಿದರು.

# ಹೊಗೆಸೊಪ್ಪು ಖರೀದಿಗೆ ಆಗ್ರಹಿಸಿ ಅಹೋರಾತ್ರಿ ಧರಣಿ

• ಪ್ರಜೋದಯ ವರದಿ

**ಅರಕಲಗೂಡು:** ಹೊಗೆಸೊಪ್ಪು ಬೆಲೆ ಕುಸಿತ ಖಂಡಿಸಿ ಹಾಗು ಎಲ್ಲಾ ಗ್ರೇಡ್ ಬೇಲ್‌ಗಳನ್ನು ಅಧಿಕ ದರದೊಂದಿಗೆ ಖರೀದಿಸಬೇಕೆಂದು ಆಗ್ರಹಿಸಿ ಭಾರತೀಯ ಕಿಸಾನ್ ಸಂಘದ ಕಾರ್ಯಕರ್ತರು ಸೋಮವಾರ ತಾಲ್ಲೂಕಿನ ರಾಮನಾಥಪುರ ತಂಬಾಕು ಮಾರು ಕಟ್ಟೆ ಆವರಣದಲ್ಲಿ ಅಡುಗೆ ತಯಾರಿಸಿ ಆಹೋರಾತ್ರಿ ಧರಣಿ ಆರಂಭಿಸಿದರು.



ತಂಬಾಕಿಗೆ ವೈಜ್ಞಾನಿಕ ಬೆಲೆ ನೀಡಿ ಸ್ಥಿರ ದರ ಕಾಪಾಡಿಕೊಳ್ಳುವಲ್ಲಿ ನಿರ್ಲಕ್ಷ್ಯ ವಹಿಸಲಾಗಿದೆ. ಆರಂಭದಲ್ಲಿ 320 ರೂ. ದರ ನೀಡಿ, ತದನಂತರ ಹರಾಜಿನಲ್ಲಿ ಬೇಕಾಬಿಟ್ಟಿ ಬೆಲೆ ನೀಡಿ ರೈತರಿಗೆ ಮೋಸ ಮಾಡಲಾಗುತ್ತಿದೆ. ಕೆಳ ದರ್ಜೆಯ ಬೇಲ್‌ಗಳನ್ನು ಖರೀದಿಸದೆ ರೈತರಿಗೆ ಕಿರುಕುಳ ನೀಡಲಾಗುತ್ತಿದೆ. ಒಮ್ಮೆ ಮಾರುಕಟ್ಟೆಗೆ ತಂದ ಬೇಲ್‌ಗಳನ್ನು ಬಿಡ್ ಮಾಡದೆ ತಿರಸ್ಕರಿಸಿ ವಾಪಾಸ್ ಕಳುಹಿಸಲಾಗುತ್ತಿದೆ. ರೈತರು ಮತ್ತೆ ಬೇಲ್‌ಗಳನ್ನು ಮಾಡಿ ಮಾರುಕಟ್ಟೆಗೆ ತಂದು ಬೇಕಾಬಿಟ್ಟಿ ಬೆಲೆಗೆ ಮಾರಾಟ ಮಾಡುವಷ್ಟರಲ್ಲಿ ಹೈರಾಣಾಗುತ್ತಿದ್ದು, ಮಾರುಕಟ್ಟೆಯಲ್ಲಿ ಬೆಳೆಗಾರರು ಅನುಭವಿಸುತ್ತಿರುವ ಕಷ್ಟ ಕೇಳುವವರೇ ಇಲ್ಲವಾಗಿದ್ದಾರೆ. ಬೆಳೆಗಾರರ ಹಿತ ಕಾಯಬೇಕಿದ್ದ ತಂಬಾಕು ಮಂಡಳಿ ನಿಷ್ಕ್ರೀಯವಾಗಿದ್ದು, ಶ್ರೀಮಂತ ಕಂಪನಿಗಳ ವರ್ತಕರ ಕೈಗೊಂಬೆಯಾಗಿ ವರ್ತಿಸಿ ಅನ್ನದಾತರನ್ನು ಶೋಷಣೆ ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಹಾಗು ಸಂಸದ ಶ್ರೇಯಸ್ ಪಟೇಲ್, ಶಾಸಕರು ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿದರೂ ಪ್ರಯೋಜನವಾಗಿಲ್ಲ. ಸಂಸತ್ ಅಧಿವೇಶನದಲ್ಲಿ ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಶ್ರೇಯಸ್ ಪಟೇಲ್ ಅವರು ಹೊಗೆಸೊಪ್ಪು

» ನಾಲ್ಕನೇ ಪುಟದಲ್ಲಿ

# 7ನೇ ದಿನಕ್ಕೆ ಅಹೋರಾತ್ರಿ ಧರಣಿ : ಸಮಸ್ಯೆ ಆಲಿಸಿದ ಸಿಮೆಂಟ್ ಮಂಜು



• ಪ್ರಜೋದಯ ವರದಿ

**ಹಾಸನ:** ಸ್ಥಗಿತಗೊಳಿಸಿರುವ ಕಲ್ಲು ಗಣಿಗಾರಿಕೆ ಪ್ರಾರಂಭಿಸಲು ಅನುಮತಿ ನೀಡಬೇಕೆಂದು ಒತ್ತಾಯಿಸಿ ಆಲೂರು ತಾಲ್ಲೂಕಿನ ಕಾರಗೋಡು ಗ್ರಾಮದ ಭೋವಿ ಸಮುದಾಯದವರು ನಡೆಸುತ್ತಿರುವ ಪ್ರತಿಭಟನೆ 7ನೇ ದಿನವೂ ಮುಂದುವರೆದಿದ್ದು, ಸ್ಥಳಕ್ಕೆ ಶಾಸಕ ಸಿಮೆಂಟ್ ಮಂಜು ಅವರು ಭೇಟಿ ನೀಡಿ ಮನವಿ ಸ್ವೀಕರಿಸಿ, ಜಿಲ್ಲಾಧಿಕಾರಿ ಜೊತೆಗೆ ಚರ್ಚಿಸುವುದಾಗಿ ಭರವಸೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಎದುರು ನಡೆಸುತ್ತಿರುವ ಅಹೋರಾತ್ರಿ ಪ್ರತಿಭಟನೆ ಯನ್ನು ಅನು ಮತಿ ನೀಡುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲವೆಂದು ಪಟ್ಟು ಹಿಡಿದು ಕುಳಿತಿದ್ದಾರೆ. ಈ ವೇಳೆ ಮಾತನಾಡಿದ ಲತಾ ಅವರು, ಗ್ರಾಮದ ಸರ್ವೆ ನಂ. 151ರ ಸರ್ಕಾರಿ ಗೋಮಾಳದ 3 ಎಕರೆ ಪ್ರದೇಶದಲ್ಲಿ ನೂರಾರು ಕುಟುಂಬಗಳು ಗಣಿಗಾರಿಕೆ ನಡೆಸಿ ಕೊಂಡು ಜೀವನ ನಡೆಸುತ್ತಿದ್ದೇವೆ. ಇದು ಹಲವು ವರ್ಷಗಳಿಂದ ನಮ್ಮ ಕುಲ ಕಸುಬಾಗಿದೆ. ಆದರೆ, ಹೊಸಮತ ಗ್ರಾಮದ ಕೆಲವರು ಇಲ್ಲ ಸಲ್ಲದ ಆರೋಪ ಮಾಡಿ ಕಲ್ಲು ಗಣಿಗಾರಿಕೆಗೆ ತಡೆ ಒಡ್ಡುತ್ತಿದ್ದಾರೆ. ಹಿಂದೆಯೇ ತನಿಖೆ ನಡೆಸಿ ಯಾವುದೇ ತಪ್ಪಿಲ್ಲ ವೆಂದು ದೃಢಪಟ್ಟಿದ್ದರೂ, ಮತ್ತೆ ವರದಿ ಕೇಳುವುದು ಅನಾವಶ್ಯಕ, ಅವೈಜ್ಞಾನಿಕ ಕ್ರಮವೆಂದು ಆರೋಪಿಸಿದರು.

ಕಲ್ಲು ಗಣಿಗಾರಿಕೆಯನ್ನು ಪುನರಾಂಭಿಸ ಅಡ್ಡಿಪಡಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳ ಬೇಕೆಂದು ಆಗ್ರಹಿಸಿದ ಅವರು, ನಾವು ಯಾರ ಬಳಿಯೂ ಕೈ ಚಾಚದೆ ಸ್ವಾವಲಂಬಿಯಾಗಿ ಬದುಕಲು ಈ ಉದ್ಯೋಗ ಅವಲಂಬಿಸಿದ್ದೇವೆ. ಆದರೆ, ನಿರಂತರ ಅಡ್ಡಿಪಡಿಸುವಿಕೆ ಯಿಂದ ನಮ್ಮ ಜೀವನ ಅಸ್ಥಿರವಾಗಿದೆ. ಮಕ್ಕಳ ಭವಿಷ್ಯ ಕತ್ತಲೆಯಲ್ಲಿದೆ ಎಂದು ಅಳಲು ತೋಡಿಕೊಂಡರು. ತಕ್ಷಣ ತಾತ್ಕಾಲಿಕ ನಿಷೇಧ ಹಿಂಪಡೆಯಬೇಕೆಂದು ಮನವಿ ಮಾಡಿದರು. ಕಲ್ಲು ಕುಟಕರ ಸಂಘದ ಮಹದೇವ್, ನಂದೀಶ್, ಆರ್ಮುಗಂ, ಸರೋಜ, ಅಂಬಿಕಾ ಇದ್ದರು.

# ಕ್ಷೇತ್ರ ಪುನರ್ ವಿಂಗಡಣೆ: ಇನ್ನೆರಡು ಕ್ಷೇತ್ರದ ನಿರೀಕ್ಷೆ

## ಹಾಸನ ನಗರ-ಗ್ರಾಮಾಂತರ ಸಾಧ್ಯತೆ : ಈಡೇರಬೇಕಿದೆ ಆಲೂರು ಪ್ರತ್ಯೇಕ ಕ್ಷೇತ್ರದ ಕೂಗು

ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ದೇಶದ ಸಂಸತ್ ಮತ್ತು ಶಾಸನಸಭೆಗಳಲ್ಲಿ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ಕಲ್ಪಿಸುವ ನಾರಿಶಕ್ತಿ ವಂದನಾ ಕಾಯ್ದೆ ಜಾರಿಗೆ ಆಸಕ್ತಿ ತೋರಿರುವ ಕೇಂದ್ರ ಸರ್ಕಾರವು ಈ ಕುರಿತ ಸಮಗ್ರ ಚರ್ಚೆಗಾಗಿ ವಿಶೇಷ ಅಧಿವೇಶನದ ಸಿದ್ಧತೆ ಮಾಡಿಕೊಂಡಿದೆ. ಈ ಮಾಹಿತಿಯ ಬೆನ್ನಲ್ಲೇ ವಿಧಾನಸಭೆ ಹಾಗು ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಗೂ ಚಾಲನೆ ಸಿಗಲಿದೆ ಎಂಬ ನಿರೀಕ್ಷೆಯು ರಾಜಕೀಯ ವಲಯದಲ್ಲಿ ಹರಿದಾಡುತ್ತಿದೆ.

ಮಹಿಳಾ ರಾಜಕೀಯ ಪ್ರಾತಿನಿಧ್ಯ ಕಾಯ್ದೆ ಜಾರಿಯ ನಂತರದಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಲ್ಲೂ ಮಹಿಳೆಯರ ಪ್ರಾತಿನಿಧ್ಯದೊಂದಿಗೆ ಸಂಸತ್ ಮತ್ತು ಶಾಸನ ಸಭೆಗಳ ಮರು ವಿಂಗಡಣೆಯಾಗುವ ಸಾಧ್ಯತೆಗಳಿರುವುದರಿಂದ ಕರ್ನಾಟಕದ ಪ್ರಸಕ್ತ ವಿಧಾನಸಭೆ ಸದಸ್ಯರ ಸಂಖ್ಯೆಯು 224 ರಿಂದ 334ಕ್ಕೆ ಏರಿಕೆಯಾಗಲಿದೆ ಎಂಬ ಲೆಕ್ಕಾಚಾರ ಚರ್ಚೆಯಲ್ಲಿದೆ. ಪ್ರಸ್ತುತ 7 ಕ್ಷೇತ್ರಗಳನ್ನು ಹೊಂದಿರುವ ಹಾಸನ ಜಿಲ್ಲೆಯಲ್ಲೂ ಒಂದು ಅಥವಾ ಎರಡು ಕ್ಷೇತ್ರಗಳನ್ನು ಹೆಚ್ಚುವರಿಯಾಗಿ ಆಗಬಹುದೆಂದು ಹೇಳಲಾಗುತ್ತಿದೆ.

ಮಹಿಳಾ ಮೀಸಲಾತಿ, ಕ್ಷೇತ್ರ ವಿಂಗಡಣೆಯ ನಂತರ ಸಂಸತ್ ಹಾಗು ಇಡೀ ದೇಶದ ಶಾಸನ ಸಭೆಗಳಿಗೆ ಏಕ ಕಾಲಕ್ಕೆ ಚುನಾವಣೆ ನಡೆಸಬೇಕೆಂಬ ಚರ್ಚೆ ಬಹಳ ವರ್ಷಗಳಿಂದಲೂ ಆಗುತ್ತಲೇ ಬಂದಿದೆ. ಆದರೆ, ಈ ತನಕ ರಾಜಕೀಯ ಸಾಮ್ಯತೆಯ ಕೊರತೆಯ ಕಾರಣದಿಂದಾಗಿ ಅದು ಸಾಧ್ಯವಾಗಿಲ್ಲ. ಮುಂದಿನ 2028 ರ ವಿಧಾನಸಭೆ ಹಾಗು 2029 ರಲ್ಲಿ ಎದುರಾಗಲಿ ರುವ ಲೋಕಸಭೆ ಚುನಾವಣೆ ಹೊತ್ತಿಗೆ ಮಹಿಳಾ ಮೀಸಲಾತಿ ಅಸ್ತಿತ್ವಕ್ಕೆ ತರುವ ಉದ್ದೇಶದಿಂದಲೇ ಕೇಂದ್ರ ಸರ್ಕಾರ ವಿಶೇಷ ಅಧಿವೇಶನ ಕರೆದಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಪ್ರತಿ ಮೂರು ಅವಧಿಗೆ ಒಮ್ಮೆ ಮೀಸಲಾತಿ ಬದಲಾಗಬೇಕೆಂಬ ನಿಯಮ ಇದೆ. ಅದರ ಅನ್ವಯ ಈಗಾಗಲೇ ಮೀಸಲಾತಿ ಬದಲಾದ ಕ್ಷೇತ್ರಗಳಲ್ಲಿ ಮುಂದಿನ ಚುನಾವಣೆ ಹೊತ್ತಿಗೆ ಮತ್ತೆ ಹೊಸ ಮೀಸಲಾತಿ ಜಾರಿಯಾಗಬೇಕಿದೆ.

2013ಕ್ಕೂ ಮೊದಲು ವಿಧಾನಸಭಾ ಕ್ಷೇತ್ರವಾರು ಮರು ವಿಂಗಡಣೆಗೂ ಮೊದಲು ಹಾಸನ ಜಿಲ್ಲೆಯಲ್ಲಿ 8 ವಿಧಾನಸಭಾ ಕ್ಷೇತ್ರಗಳಿದ್ದವು. ಮರು ವಿಂಗಡಣೆ ನಂತರ ಹಾಸನ ತಾಲ್ಲೂಕಿನ ದುದ್ದ, ಸಾಲಗಾಮೆ, ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿ ಒಳಗೊಂಡು ಅಸ್ತಿತ್ವದಲ್ಲಿದ್ದ ಗಂಡಸಿ ಕ್ಷೇತ್ರವು ನೆಲೆ ಕಳೆದು ಕೊಂಡು ಏಳು ಕ್ಷೇತ್ರಗಳು ರಚಿಸಲ್ಪಟ್ಟವು. ಜೊತೆಗೆ ಹಾಸನ ಲೋಕಸಭಾ ಕ್ಷೇತ್ರಕ್ಕೆ ಚಿಕ್ಕಮಗಳೂರು ಜಿಲ್ಲೆಯ ಕಡೂರು ವಿಧಾನ ಸಭಾ ಕ್ಷೇತ್ರ ಕೂಡ ಸೇರ್ಪಡೆ ಯಾಯಿತು.

ಹಲವು ವರ್ಷಗಳ ಕಾಲ ಬೇಲೂರು ವಿಧಾನಸಭಾ ಕ್ಷೇತ್ರವು ಮೀಸಲಾತಿಯ ವ್ಯಾಪ್ತಿಯಲ್ಲಿತ್ತು. ನಂತರ ಆ ಕ್ಷೇತ್ರವು ಸಾಮಾನ್ಯ ಕ್ಷೇತ್ರವಾಗಿ ಪರಿವರ್ತನೆಗೊಂಡು ಸಕಲೇಶಪುರ ವಿಧಾನಸಭಾ ಕ್ಷೇತ್ರವು ಮೀಸಲಾತಿಯ ತೆಕ್ಕೆಗೆ ಬಂತು. ಸಕಲೇಶಪುರ-ಆಲೂರು ತಾಲ್ಲೂಕಿಗಷ್ಟೇ ಸೀಮಿತಗೊಂಡಿದ್ದ ಸಕಲೇಶಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಕಟ್ಟಾಯ ಹೋಬಳಿ ಸೇರ್ಪಡೆ ಬಳಿಕ ಭೌಗೋಳಿಕವಾಗಿ ಬಹುದೊಡ್ಡ ಕ್ಷೇತ್ರವಾಗಿ ಗುರುತಿಸಲ್ಪಡುವಂತಾಗಿದೆ.

ಅರಕಲಗೂಡು ತಾಲ್ಲೂಕಿಗೆ ಸೀಮಿತಗೊಂಡಿದ್ದ ಅರಕಲಗೂಡು ಕ್ಷೇತ್ರಕ್ಕೆ ಹಳ್ಳಿ ಮೈಸೂರು ಹೋಬಳಿ ಸೇರ್ಪಡೆಯಾದದ್ದಲ್ಲದೆ, ಗಂಡಸಿ ಕ್ಷೇತ್ರದಲ್ಲಿದ್ದ ದುದ್ದ ಹೋಬಳಿ, ಹಾಸನ ಕ್ಷೇತ್ರದಲ್ಲಿದ್ದ ಶಾಂತಿಗ್ರಾಮ ಹೋಬಳಿಯು ಹೊಳೆನರಸೀಪುರ ಕ್ಷೇತ್ರದ ವ್ಯಾಪ್ತಿಗೆ ಒಳ ಪಟ್ಟವು. ಸದ್ಯದ ಚರ್ಚೆಯ ಪ್ರಕಾರ ಹಾಸನ ನಗರವು ಬಹು ವಿಸ್ತಾರವಾಗಿ ಬೆಳೆದು ನಗರಪಾಲಿಕೆಯ ಸ್ವರೂಪವನ್ನು ಪಡೆದುಕೊಂಡಿರುವುದರಿಂದ ಹಾಸನ ನಗರ ಕ್ಷೇತ್ರ ಹೊಸದಾಗಿ ರೂಪುಗೊಳ್ಳಲಿದೆ ಎಂಬ ಅಭಿಪ್ರಾಯಗಳಿವೆ. ಪ್ರಸ್ತುತ ಹೊಳೆನರಸೀಪುರ ಕ್ಷೇತ್ರದಲ್ಲಿರುವ ದುದ್ದ, ಶಾಂತಿಗ್ರಾಮ, ಹೋಬಳಿ ಜೊತೆಗೆ ಸಾಲಗಾಮೆ ಹಾಗು ಕಟ್ಟಾಯ ಹೋಬಳಿಯ ಕೆಲ ಭಾಗವನ್ನು ಸೇರ್ಪಡೆ ಮಾಡಿಕೊಂಡು ಹಾಸನ ಗ್ರಾಮಾಂತರ ಕ್ಷೇತ್ರ ಅಸ್ತಿತ್ವಕ್ಕೆ ಬರಬಹುದೆಂಬ ಚರ್ಚೆಗಳು ಆಗುತ್ತಿವೆ.

ಸಕಲೇಶಪುರ ವಿಧಾನಸಭಾ ಕ್ಷೇತ್ರದಿಂದ ಆಲೂರು ತಾಲ್ಲೂಕನ್ನು ಬೇರ್ಪಡಿಸಿ ಪ್ರತ್ಯೇಕ ವಿಧಾನಸಭಾ ಕ್ಷೇತ್ರವಾಗಿ ಮಾರ್ಪಡಿಸಬೇಕೆಂಬ ಕೂಗಿಗೆ ಮನ್ನಣೆ ಸಿಕ್ಕಲ್ಲಿ ಆಲೂರು, ಹಾಸನ ತಾಲ್ಲೂಕಿನ ಕಟ್ಟಾಯ ಹೋಬಳಿ ಜೊತೆಗೆ ಆಲೂರು ತಾಲ್ಲೂಕಿಗೆ ಹೊಂದಿಕೊಂಡ ಸಾಲಗಾಮೆ ಹೋಬಳಿಯ ಕೆಲ ಭಾಗವನ್ನು ಸೇರ್ಪಡೆ ಮಾಡಿಕೊಂಡು ಪ್ರತ್ಯೇಕ ಆಲೂರು ವಿಧಾನಸಭಾ ಕ್ಷೇತ್ರ ಅಸ್ತಿತ್ವಕ್ಕೆ ಬರುವ ಸಾಧ್ಯತೆಗಳು ಇವೆ ಎಂದು ಹೇಳಲಾಗುತ್ತಿದೆ.

### ದೇವೇಗೌಡರ ಪಾತ್ರದ ನಿರೀಕ್ಷೆ

ಈ ಹಿಂದೆ ಕ್ಷೇತ್ರ ವಿಂಗಡಣಾ ಸಮಿತಿಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಇದ್ದರು. ಈ ಬಾರಿಯೂ ಸಮಿತಿಯಲ್ಲಿ ಸ್ಥಾನ ಪಡೆದು ಮಹತ್ವದ ಪಾತ್ರ ನಿರ್ವಹಿಸುವ ಸಾಧ್ಯತೆ ಇದೆ. ಈಗಾಗಲೇ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್, ಎನ್‌ಡಿಎ ಮಿತ್ರಕೂಟವಾಗಿರುವು ದರಿಂದ ದೇವೇಗೌಡರು ಇಲ್ಲವೇ ಹೆಚ್.ಡಿ.ಕುಮಾರಸ್ವಾಮಿ ಅವರು ಸಮಿತಿಯಲ್ಲಿ ಸ್ಥಾನ ಪಡೆಯುವುದರಿಂದ ಹಾಸನ ಜಿಲ್ಲೆಯ ಸಂಪೂರ್ಣ ಚಿತ್ರಣ ತಿಳಿದಿರುವ ಅವರು ಜಿಲ್ಲೆಯ ಕ್ಷೇತ್ರಗಳ ಮರು ವಿಂಗಡಣೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಲಿದ್ದಾರೆಂದು ಹೇಳಲಾಗುತ್ತಿದೆ.

### ಆದಲು-ಬದಲಾಗಿರುವ ಕ್ಷೇತ್ರಗಳು

- ಹಾಸನ ತಾಲ್ಲೂಕಿನ ಶಾಂತಿಗ್ರಾಮ, ದುದ್ದ ಹಾಗು ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿಯನ್ನು ಹೊಳೆನರಸೀಪುರ ಕ್ಷೇತ್ರಕ್ಕೆ ಸೇರಿಸಲಾಗಿದೆ.
- ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿಯು ಅರಕಲಗೂಡು ಕ್ಷೇತ್ರಕ್ಕೆ ಸೇರಿದೆ.
- ಹಾಸನ ತಾಲ್ಲೂಕಿನ ಕಟ್ಟಾಯ ಹೋಬಳಿಯನ್ನು ಸಕಲೇಶಪುರ ಕ್ಷೇತ್ರಕ್ಕೆ ಸೇರಿಸಲಾಗಿದೆ.
- ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿ ಬೇಲೂರು ಕ್ಷೇತ್ರಕ್ಕೆ ಒಳಪಟ್ಟಿದೆ.

### ಬೇರ್ಪಡಲಿದೆ ಕಡೂರು ಕ್ಷೇತ್ರ

ರಾಜ್ಯದಲ್ಲಿ ಈಗಿರುವ 28 ಲೋಕಸಭೆ ಕ್ಷೇತ್ರಗಳು ಮಹಿಳಾ ಮೀಸಲಾತಿ ಜಾರಿಯಿಂದ 42ಕ್ಕೆ ಹೆಚ್ಚಲಿದೆ. ಹೀಗಾಗಿ ಹಾಸನ ಲೋಕಸಭೆ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು ಹಾಸನ ಕ್ಷೇತ್ರದಿಂದ ಬೇರ್ಪಡಲಿದೆ. ಪ್ರಸ್ತುತ ಇರುವ ಉಡುಪಿ-ಚಿಕ್ಕಮಗಳೂರು ಕ್ಷೇತ್ರ ವಿಂಗಣೆಯಲ್ಲಿ ಚಿಕ್ಕಮಗಳೂರು ಪ್ರತ್ಯೇಕ ಕ್ಷೇತ್ರವಾಗಿ ರೂಪುಗೊಳ್ಳಲಿರುವುದರಿಂದ ಕಡೂರು ತಾಲ್ಲೂಕು ಚಿಕ್ಕಮಗಳೂರು ವ್ಯಾಪ್ತಿಗೆ ಸೇರ್ಪಡೆಗೊಳ್ಳಲಿದೆ. ಹಾಸನ ಕ್ಷೇತ್ರ ಸ್ವತಂತ್ರಗೊಳ್ಳುವುದರಿಂದ ಜಿಲ್ಲೆಗೆ ಮತ್ತಷ್ಟು ಅನುಕೂಲವಾಗಲಿದೆ.

## ಕಪ್ಪು-ಬಿಳುಪು ಛಾಯಾಚಿತ್ರಗಳ ಮಾಹಿತಿಗಾಗಿ ಡಾ.ಕೃಷ್ಣ ಕೋರಿಕೆ

# ದೇವೇಗೌಡರ ಸಂಗ್ರಹಾಲಯಕ್ಕೆ ಹುಟ್ಟೂರಿನಲ್ಲಿ ಸಿದ್ಧತೆ

• ಪ್ರಜೋದಯ ವರದಿ


**ಹಾಸನ :** ದೇಶದ ರಾಜಕೀಯ ಚರಿತ್ರೆಯಲ್ಲಿ ದಕ್ಷಿಣ ಭಾರತದ ಅಪ್ಪಟ ರೈತ ಕುಟುಂಬದ ನಾಯಕರೊಬ್ಬರು ಈ ದೇಶದ ಪ್ರಧಾನಿಯಾಗುವುದರೊಂದಿಗೆ ಹೊಸ ರಾಜಕೀಯ ಮೈಲಿಗಲ್ಲು ಸ್ಥಾಪಿಸಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ 75 ವರ್ಷಗಳ ಸಾರ್ವಜನಿಕ ಬದುಕಿನ ಸಮಗ್ರ ಚಿತ್ರಣಗಳನ್ನೊಳಗೊಂಡ ಅಪರೂಪದ ಸಂಗ್ರಹಾಲಯವೊಂದನ್ನು ಅವರ ಹುಟ್ಟೂರಿನಲ್ಲಿ ಸ್ಥಾಪಿಸುವ ಕುರಿತು ಚಿಂತನೆಗಳು ನಡೆದಿವೆ.

ದೇವೇಗೌಡ ಅವರ ಬಹುಕಾಲದ ಒಡನಾಡಿ ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷರಾದ ಡಾ.ಹೆಚ್.ಎನ್.ಕೃಷ್ಣ ಅವರು ಈ ಹೊಣೆಗಾರಿಕೆಯ ಮುಂಚೂಣಿಯಲ್ಲಿದ್ದಾರೆ. ದೇವೇಗೌಡರ ಬಾಲ್ಯದ ದಿನಗಳಿಂದ ಈ ತನಕದ ಛಾಯಾಚಿತ್ರಗಳು, ಹಳೆಯ ಕಪ್ಪು-ಬಿಳುಪು ಚಿತ್ರಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ಅವರು ತೊಡಗಿಕೊಂಡಿದ್ದಾರೆ. ಅನೇಕ ಹಳೆಯ ಛಾಯಾಚಿತ್ರಗಳು ಈಗಾಗಲೇ ಸಂಗ್ರಹ ಆಗಿವೆ.

ತಾವು ಕಂಡ ಅಥವಾ ಯಾರ ಬಳಿಯಲ್ಲಾದರೂ ದೇವೇಗೌಡರ ಸಾರ್ವಜನಿಕ ಬದುಕಿನ ವಿಶೇಷ ಸಂದರ್ಭಗಳಲ್ಲಿನ ಛಾಯಾಚಿತ್ರಗಳಿದ್ದಲ್ಲಿ ತಮಗೆ ತಲುಪಿಸಿ ಸ್ಕ್ಯಾನ್ ಆದ ನಂತರ ವಾಪಾಸ್ ಪಡೆದುಕೊಳ್ಳ ಬಹುದೆಂದು ಕೃಷ್ಣ ಅವರು ತಿಳಿಸಿದ್ದಾರೆ.

ಈಗಾಗಲೇ ಸಂಗ್ರಹಗೊಂಡ ಭಾವಚಿತ್ರಗಳ ಪೈಕಿ 1961 ರಲ್ಲಿ ತೆಗೆದಂತಹ ತಾಲ್ಲೂಕು ಬೋರ್ಡ್ ಸದಸ್ಯರನ್ನೊಳಗೊಂಡ ಕಪ್ಪು-ಬಿಳುಪಿನ ಚಿತ್ರದಲ್ಲಿ ಜಿಲ್ಲೆಯ ಹಾಗು ರಾಜ್ಯದ ವಿವಿಧೆಡೆಯ ಅನೇಕ ಹಿರಿಯ ರಾಜಕಾರಣಿಗಳು ಇದ್ದಾರೆ.

1961 ರಲ್ಲಿ ನಂಜನಗೂಡಿನಲ್ಲಿ ನಡೆದ ತಾಲ್ಲೂಕು ಬೋರ್ಡ್ ಸದಸ್ಯರ ಅಧ್ಯಯನ ಕೇಂದ್ರದಲ್ಲಿ ತೆಗೆದ ಬಲು ಅಪರೂಪದ ಛಾಯಾಚಿತ್ರ.



ಸಂಗ್ರಹ -ಡಾ.ಹೆಚ್.ಎನ್.ಕೃಷ್ಣ
ಮೊ.ನಂ : 9844088832

**ಎಡದಿಂದ ಬಲಕ್ಕೆ ಕುರ್ಚಿ ಮೇಲೆ ಕುಳಿತವರು :** ಡಿ.ಗೋವಿಂದ ದಾಸ್ (ಚನ್ನರಾಯಪಟ್ಟಣ), ಚಿಕ್ಕೇಗೌಡ (ಚನ್ನರಾಯಪಟ್ಟಣ), ಎಲ್.ವಿ. ಗೋವಿಂದಗೌಡ (ಕೃಷ್ಣರಾಜ ಪೇಟೆ), ಹೆಚ್.ಸಿ.ಶ್ರೀಕಂಠಯ್ಯ (ಚನ್ನರಾಯ ಪಟ್ಟಣ), ಎಸ್.ವಿ.ಕುಮಾರ್ (ಸಂಚಾಲಕ), ಎಸ್.ಎಂ.ಲಿಂಗಪ್ಪ (ಕೃಷ್ಣರಾಜ ಪೇಟೆ), ಜಿ.ಚನ್ನಬಸಪ್ಪ (ಅರಸೀಕೆರೆ), ಹೆಚ್.ಆರ್.ವೆಂಕಟಸುಬ್ಬು (ಹಾಸನ), ಬಿ.ವಿ.ಅಶ್ವತ್ಥ ನಾರಾಯಣ ಶೆಟ್ಟಿ (ಅರಸೀಕೆರೆ), ಶ್ರೀಮತಿ ಕಾಂತಮ್ಮ (ಚನ್ನರಾಯಪಟ್ಟಣ).

**ಎಡದಿಂದ ಬಲಕ್ಕೆ ನಿಂತಿರುವವರು ಒಂದನೇ ಸಾಲು :** ಹೆಚ್.ಎಸ್. ಮಲ್ಲೇಗೌಡ (ಸಕಲೇಶಪುರ), ತಿಮ್ಮಯ್ಯ (ಹಾಸನ), ಬೋರೇಗೌಡ (ಕೃಷ್ಣರಾಜ ಪೇಟೆ), ಈರಯ್ಯ (ಹೊಳೆನರಸೀಪುರ), ಎಸ್.ಜೆ.ಕಾಂತರಾಜಗೌಡ (ಚನ್ನರಾಯಪಟ್ಟಣ), ಎಂ.ಕೆ.ಸಂಜೀವಯ್ಯ (ಚನ್ನರಾಯಪಟ್ಟಣ), ಎಂ.ಕೆ. ಶಿವಪ್ಪ (ಅರಕಲಗೂಡು), ನಾಗರಾಜು (ಚನ್ನರಾಯಪಟ್ಟಣ), ಆರ್. ಲಚ್ಚಾನಾಯಕ್ (ಅರಸೀಕೆರೆ), ಹೆಚ್.ಪಾಪಯ್ಯ(ಅರಸೀಕೆರೆ), ಕೆ.ಆರ್. ಬಸವೇಗೌಡ (ಅರಸೀಕೆರೆ), ಈರೇಗೌಡ(ಅರಸೀಕೆರೆ).

**ನಿಂತಿರುವವರು ಎರಡನೇ ಸಾಲು :** ಆರ್.ಎಂ.ದಾಸಪ್ಪ (ಸಕಲೇಶಪುರ), ಕರಿಯಯ್ಯ (ಅರಕಲಗೂಡು), ಸಣ್ಣ ಜವರಯ್ಯ (ಆಲೂರು), ಚನ್ನಯ್ಯ (ಹಾಸನ), ಬೈಕಯ್ಯ (ಆಲೂರು), ಕುಳ್ಳಯ್ಯ (ಕೃಷ್ಣರಾಜ ಪೇಟೆ), ಮೈಲಾರಯ್ಯ (ಕೃಷ್ಣರಾಜ ಪೇಟೆ), ಕೆ.ಹೆಚ್.ಜವರಯ್ಯ(ಅರಕಲಗೂಡು), ಹೆಚ್.ಕೆ.ಅಣ್ಣಯ್ಯ (ಅರಕಲಗೂಡು), ಎ.ಬಿ.ಜವರಪ್ಪ (ಕೃಷ್ಣರಾಜ ಪೇಟೆ), ಜೆ.ಹೆಚ್.ಸಿದ್ದಪ್ಪ(ಅರಸೀಕೆರೆ), ಎಂ.ಎಂ.ವೆಂಕಟಯ್ಯ, ಎಂ.ಎಲ್. ಗಂಗಾಧರಯ್ಯ (ಹಾಸನ), ಎಂ.ಹಲಗಪ್ಪ(ಅರಸೀಕೆರೆ).

**ನೆಲದ ಮೇಲೆ ಕುಳಿತಿರುವವರು :** ಡಿ.ಕೆ.ಸುಬ್ಬಯ್ಯ (ಹೊಳೆನರಸೀಪುರ), ಹೆಚ್.ಡಿ.ದೇವೇಗೌಡ (ಹೊಳೆನರಸೀಪುರ), ಡಿ.ಬಿ.ರಂಗೇಗೌಡ (ಹಾಸನ), ಎಂ.ಟಿ.ನಾರಾಯಣ ಗೌಡ, ಟಿ.ದೇವರಸೇಗೌಡ (ಕೃಷ್ಣರಾಜ ಪುರ).

# ಅಕಾಡೆಮಿ ಪ್ರಶಸ್ತಿಯಿಂದ ಕೃತಿಗೆ ಮಾನ್ಯತೆ: ಡಾ.ತಿಮ್ಮೇಗೌಡ



• ಪ್ರಜೋದಯ ವರದಿ

**ಹಾಸನ:** ಜಾನಪದ ವಿದ್ವಾಂಸ, ಸಂಶೋಧಕ ಡಾ.ಹಂಪನಹಳ್ಳಿ ತಿಮ್ಮೇಗೌಡ ಅವರ ದಾಸ ಒಕ್ಕಲಿಗ ಸಂಶೋಧನಾ ಕೃತಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿರುವ ಹಿನ್ನಲೆ ಜಿಲ್ಲಾ ಸಾಹಿತ್ಯ ಬಳಗದ ವತಿಯಿಂದ ಸನ್ಮಾನಿಲಾಯಿತು.

ಈ ವೇಳೆ ಸನ್ಮಾನ ಸ್ವೀಕರಿಸಿ ಮಾತನಾಡಿದ ಹಂಪನಹಳ್ಳಿ ತಿಮ್ಮೇಗೌಡ ಅವರು, ನನ್ನ ದಾಸ ಒಕ್ಕಲಿಗ ಕೃತಿ ಯಾವುದೇ ಒಂದು ಜಾತಿಗೆ ಸೀಮಿತವಲ್ಲ. ಒಳ ಪಂಗಡದ ಸಂಸ್ಕೃತಿ ಮತ್ತು ಪರಂಪರೆಯ ಅಧ್ಯಯನದ ಪ್ರತೀಕವಾಗಿದೆ. ಈ ಕೃತಿಯನ್ನು ಆದಿಚುಂಚನಗಿರಿ ವಿಶ್ವವಿದ್ಯಾಲಯದ ಪ್ರೇರಣೆಯಿಂದ ಕಡಿಮೆ ಅವಧಿಯಲ್ಲಿ ಸಿದ್ಧಪಡಿಸಿದ್ದೆ. ಆ ಕೃತಿಗೆ ರಾಜ್ಯಮಟ್ಟದ ಗೌರವ ದೊರೆತಿರುವುದು ಸಂತೋಷ ತಂದಿದೆ ಎಂದು ಹೇಳಿದರು.

ಜಿಲ್ಲಾ ಕಸಾಪ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಅವರು ಮಾತನಾಡಿ, ಹಂಪನಹಳ್ಳಿ ತಿಮ್ಮೇಗೌಡ ಅವರು ಜನಪದ ಹಾಗು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ. ಅವರಿಗೆ ಲಭಿಸಿದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇಡೀ ಜಿಲ್ಲೆಗೆ ಗೌರವ ತಂದಿದೆ. ಇಂತಹ ಸಾಧಕರನ್ನು ಗೌರವಿಸುವುದು ನಮ್ಮ ಕರ್ತವ್ಯವೆಂದು ತಿಳಿಸಿದರು.

ಪತ್ರಕರ್ತ ಚಲಂ ಹಾಡ್ಲಹಳ್ಳಿ ಅವರು ಮಾತನಾಡಿ, ಹಂಪನಹಳ್ಳಿ ತಿಮ್ಮೇಗೌಡ ಅವರು ಜಿಲ್ಲೆಯ ಸಾಹಿತ್ಯ ಬೇರುಗಳನ್ನು ಗಟ್ಟಿಗೊಳಿಸಿದ ಪ್ರಮುಖರಲ್ಲಿ ಒಬ್ಬರು. ಅವರು ಯುವ ಸಾಹಿತಿಗಳಿಗೆ ಪ್ರೇರಣೆಯಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪ್ರಶಸ್ತಿ ಪ್ರದಾನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಹೆಚ್ಚಾಗಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಕೇಂದ್ರ ಸಾಹಿತ್ಯ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಉಪ್ಪಾರ್ ಅವರು ಮಾತನಾಡಿ, ಜಿಲ್ಲೆಯ ಸಾಹಿತ್ಯ ವಲಯಕ್ಕೆ ಮತ್ತೊಂದು ಕಿರೀಟ ತಂದು ಕೊಟ್ಟ ಸಾಧನೆ ಇದಾಗಿದ್ದು, ಜನಪದ ಕ್ಷೇತ್ರದಲ್ಲಿ ಮಹತ್ವದ ಕೆಲಸ ಮಾಡಿದ ತಿಮ್ಮೇಗೌಡರಿಗೆ ಲಭಿಸಿದ ಪ್ರಶಸ್ತಿ ಜಿಲ್ಲೆಯ ಹೆಮ್ಮೆ ಹೆಚ್ಚಿಸಿದೆ. ಈ ಕೃತಿ ಒಂದು ಜಾತಿಗೆ ಸೀಮಿತವಾಗದೇ, ಅದರ ಸಂಸ್ಕೃತಿ, ಪರಂಪರೆ ಹಾಗು ಜೀವನ ಶೈಲಿಯನ್ನು ಆಳವಾಗಿ ಪ್ರತಿಬಿಂಬಿಸುವ ಸಂಶೋಧನಾ ಕೃತಿ ಎಂದು ಪ್ರಶಂಸಿಸಿದರು. ಯೋಗ ಶಿಕ್ಷಕ ಸುರೇಶ್ ಗುರೂಜಿ, ಚುಸಾಪ ಜಿಲ್ಲಾಧ್ಯಕ್ಷ ಬಾ.ನಂ. ಲೋಕೇಶ್ ಮಾತನಾಡಿದರು.

ಸಾಹಿತಿಗಳಾದ ಚಿನ್ನೇನಹಳ್ಳಿ ಸ್ವಾಮಿ, ಎಂಸಿಇ ಪ್ರಾಧ್ಯಾಪಕ ಪ್ರೊ.ಜಿ.ಮಂಜುನಾಥ್, ಬನವಾಸಿ ರುದ್ರಪ್ಪ, ಎವಿಕೆ ಕಾಲೇಜಿನ ನಿವೃತ್ತ ಉಪನ್ಯಾಸಕ ಚನ್ನರಾಯಪಟ್ಟಣ ಪ್ರಕಾಶ್, ಶಿಕ್ಷಕ ಸೋಮಶೇಖರ್ ಇದ್ದರು.

# ಪತಿಗೆ ರಕ್ಷಣೆ ಕೊಟ್ಟ ಪೊಲೀಸರ ವಿರುದ್ಧ ಮಹಿಳೆ ರಾದ್ಧಾಂತ

• ಪ್ರಜೋದಯ ವರದಿ

**ಹಾಸನ:** ಪತ್ನಿ ಹಾಗು ಆಕೆಯ ಸಂಬಂಧಿಕರಿಂದ ಪತಿಯನ್ನು ರಕ್ಷಿಸಿದ್ದಕ್ಕೆ ಮಹಿಳೆಯೊಬ್ಬರು ಪೊಲೀಸರನ್ನೇ ಆರೋಪಿ ಸ್ಥಾನದಲ್ಲಿರಿಸಿ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿರುವ ಘಟನೆ ನಗರದಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ವಿಜಯ ನಗರದ ನಿವಾಸಿ ರಾಜು ಹಾಗು ಆತನ ಪತ್ನಿ ನಡುವೆ ಕೆಲವು ವರ್ಷಗಳಿಂದ ವೈಮನಸ್ಸು ಏರ್ಪಟ್ಟಿದೆ.

» ನಾಲ್ಕನೇ ಪುಟದಲ್ಲಿ



# ರಾಜ್ಯ ಶಿಕ್ಷಣ ಪದ್ಧತಿ ಬದಲಾವಣೆಗೆ ಇದು ಸಕಾಲ

ಒಡಲಾಳ ರಾಜ್ಯದಲ್ಲಿ ಈಗಾಗಲೇ ಹತ್ತನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ತೃತೀಯ ಭಾಷೆಯ ಅಂಕಗಳಿಗೆ ಪ್ರತಿಯಾಗಿ ಗ್ರೇಡ್ ನೀಡುವ ಘೋಷಣೆಯಾಗಿದೆ. ಹಿಂದಿ ಕಲಿಕೆಯು ಕಡ್ಡಾಯವಾಗಬಾರದು ಎಂಬ ನಿಟ್ಟಿನಲ್ಲಿ ದ್ವಿಭಾಷಾ ನೀತಿಗೆ ಇಂಬು ನೀಡುವ ಕ್ರಮ ಎಲ್ಲರೂ ಸ್ವಾಗತಿಸಿದ್ದಾರೆ. ಆದರೆ, ಪ್ರಸ್ತುತ ವರ್ಷದಿಂದಲೇ ತೃತೀಯ ಭಾಷೆಯ ಅಂಕಗಳನ್ನು ಒಟ್ಟು ಅಂಕಗಳಿಗೆ ಪರಿಗಣಿಸದಿರುವ ವಿಷಯದಲ್ಲಿ ಕೊಂಚ ಭಿನ್ನಾಭಿಪ್ರಾಯವಿದೆ. ಅದು ಸಹ ವಿದ್ಯಾರ್ಥಿಗಳ ವರ್ಷಪೂರ್ತಿ ಪರಿಶ್ರಮ ಹಾಗೂ ತರಾತುರಿಯ ನಿರ್ಧಾರದ ಕುರಿತಾದ ಕಾಳಜಿಯೇ ವಿನಃ ಹಿಂದಿ ಭಾಷೆಯನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ ಮಾಡಿದ್ದರ ವಿರುದ್ಧದ ಮನಸ್ಥಿತಿಯಲ್ಲ ಎಂಬ ಸೂಕ್ಷ್ಮತೆ ಮನಗಾಣಬೇಕಿದೆ.

ರಾಜ್ಯದಲ್ಲಿ ಪ್ರಸುತ್ತ ಪರೀಕ್ಷಾ ನೀತಿಯ ಬದಲಾವಣೆಗೆ ಅಂದರೆ ತೃತೀಯ ಹಿಂದಿ ವಿಷಯ ಅಂಕಗಳ ಬದಲಿಗೆ ಗ್ರೇಡ್ ನೀಡುವುದು ಹಾಗೂ 675ರ ಬದಲು 525 ಅಂಕಗಳನ್ನು ಪರಿಗಣಿಸುವುದರ ಹಿಂದಿನ ಮೂರು ಪ್ರಮುಖ ಕಾರಣವನ್ನು ಒಮ್ಮೆ ಗಮನಿಸೋಣ.

ಮಕ್ಕಳ ತೃತೀಯ ಭಾಷೆಯ ಮೇಲಿನ ಕಲಿಕಾ ಹೊರೆಯನ್ನು ಇಳಿಸುವುದು. ಇದರೊಂದಿಗೆ ಕಳೆದ ವರ್ಷ 90510 ವಿದ್ಯಾರ್ಥಿಗಳು ತೃತೀಯ ಹಿಂದಿ ಭಾಷೆಯಲ್ಲಿ ಅನುತೀರ್ಣರಾಗಿದ್ದರು. ಹಾಗಾಗಿ ಒಂದು ವಿಷಯದಲ್ಲಿ ಫೇಲ್ ಆದ ಕಾರಣ ಮತ್ತೆ ಮರುಪರೀಕ್ಷೆ ಎದುರಿಸಬೇಕಾದ ಅನಿವಾರ್ಯತೆ. ಇದರಿಂದ ಮಕ್ಕಳ ಒಂದು ಕಲಿಕಾ ವರ್ಷ ಹಾಳಾಗುತ್ತದೆ ಎಂಬ ಕಾಳಜಿ.

ಕೊನೆಯದಾಗಿ ಕರ್ನಾಟಕದಲ್ಲಿ ದ್ವಿಭಾಷಾ ನೀತಿಯ ಅನುಷ್ಠಾನ ಹಾಗೂ ಹಿಂದಿ ಭಾಷೆಯ ಹೇರಿಕೆಯ ವಿರೋಧ. ಈಗಾಗಲೇ ಬ್ಯಾಂಕ್, ರೈಲ್ವೆ ಇಲಾಖೆ, ಪೋಸ್ಟ್ ಆಫೀಸ್ ಇನ್ನಿತರ ಸಾರ್ವಜನಿಕ ಸೇವಾ ಕೇಂದ್ರಗಳಲ್ಲಿ ಹಿಂದಿ ಭಾಷಿಗರಿಗೆ ನೀಡಲಾಗುವ ಆದ್ಯತೆ ಹಾಗೂ ಕನ್ನಡವನ್ನು ಗೌಣವನ್ನಾಗಿಸಿದ್ದರ ಕುರಿತಾದ ಅಸಮಾಧಾನ. ಈ ಮೂರು ಅಂಶಗಳು ನಿಜಕ್ಕೂ ಗಂಭೀರವಾಗಿ ಪರಿಗಣಿಸಲೇಬೇಕಿತ್ತು.

ಆ ನಿಟ್ಟಿನಲ್ಲಿ ಪ್ರಸುತ್ತ ಶಿಕ್ಷಣ ಇಲಾಖೆ ಹಾಗೂ ಕನ್ನಡಪರ ಸಂಘಟನೆ ಸೇರಿದಂತೆ ಇನ್ನಿತರ ಸಂಘಟನೆಗಳ ಹೋರಾಟಕ್ಕೆ ಜಯ ಸಿಕ್ಕಿದ್ದು ಸಂತಸದ ಸಂಗತಿ. ಆದರೆ, ಈ ಸಂತಸದ ನಡುವೆಯೇ ನಾವು ಎರಡು ಪ್ರಮುಖ ಅಂಶಗಳನ್ನು ಕನ್ನಡ ಭಾಷೆಯ ಉಳಿವಿಗಾಗಿ ಈ ಕ್ಷಣದಿಂದಲೇ ಅತ್ಯಂತ ಗಂಭೀರವಾಗಿ ಚಿಂತಿಸಬೇಕಿದೆ.

ಶಿಕ್ಷಣ ತಜ್ಞರೊಂದಿಗೆ ಚರ್ಚಿಸಿ ಮುಂದಿನ ಶೈಕ್ಷಣಿಕ ವರ್ಷದಿಂದಲೇ ರಾಜ್ಯ ಪರೀಕ್ಷಾ ಪದ್ಧತಿ ಮಾತ್ರವಲ್ಲ ಶಿಕ್ಷಣ ಪದ್ಧತಿಯಲ್ಲೂ ಬದಲಾವಣೆಗೆ ಮುನ್ನುಡಿ ಬರೆಯುವ ಕೆಲಸವಾಗಬೇಕಿದೆ. ಪ್ರಸುತ್ತ ತೃತೀಯ ಐಚ್ಛಿಕ ಭಾಷೆಯ ಅಂಕಗಳನ್ನು ಕೈಬಿಟ್ಟ ಸಮಯದಲ್ಲಿ ಬೇರೆ ರಾಜ್ಯದವರು ಹಾಗೂ ಯಾರೆ ಕನ್ನಡವನ್ನು ತೃತೀಯ ಭಾಷೆಯನ್ನಾಗಿ ಆಯ್ಕೆ ಮಾಡಿ ಕೊಂಡು ಪ್ರೀತಿಯಿಂದ ಕಲಿಯುತ್ತಿದ್ದರೋ ಅವರಿಗೆ ಕನ್ನಡ ಕಲಿಯಲು ಅವಕಾಶ ನೀಡುವ ಒಂದು ಯೋಜನೆ ರೂಪಿಸಬೇಕಿದೆ.

ಅದು ಸಾಧ್ಯವನ್ನಾಗಿಸಲು ದೊಡ್ಡ ಬದಲಾವಣೆಯೇನು ಮಾಡಬೇಕಿಲ್ಲ. ಪ್ರಸುತ್ತ ಶಿಕ್ಷಣ ಸಚಿವರ ಘೋಷಣೆಯಂತೆ ವಿದ್ಯಾರ್ಥಿಗಳು ಎರಡು ಕಡ್ಡಾಯ ಭಾಷಾ ವಿಷಯ ಅಂದರೆ ಪ್ರಥಮ ಭಾಷೆ ಕನ್ನಡ, ದ್ವಿತೀಯ ಭಾಷೆ ಇಂಗ್ಲೀಷ್ ಅಥವಾ ಇವೆರಡರಲ್ಲಿ ಒಂದನ್ನು ಪ್ರಥಮ ಭಾಷೆಯನ್ನಾಗಿ, ಇನ್ನೊಂದನ್ನು ದ್ವಿತೀಯ ಭಾಷೆಯನ್ನಾಗಿ ಕಲಿಯಬೇಕು.

ಇದರೊಂದಿಗೆ ಕಡ್ಡಾಯ ಮುಖ್ಯ ವಿಷಯಗಳಾದ ಗಣಿತ, ವಿಜ್ಞಾನ ಹಾಗೂ ಸಮಾಜ-ವಿಜ್ಞಾನವನ್ನು ಕಲಿಯಬೇಕು. ಅಲ್ಲಿಗೆ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗೆ 5 ಕಡ್ಡಾಯ ವಿಷಯಗಳು. ಆದರೆ, ಕಳೆದ ವರ್ಷ ಎಸ್ಎಸ್ಎಲ್‌ಸಿ ಪರೀಕ್ಷೆಗೆ ಹಾಜರಾದ 8,42,173 ವಿದ್ಯಾರ್ಥಿಗಳಲ್ಲಿ ಕೇವಲ 5,24,984, ಶೇ.62.34 ಪ್ರತಿಶತ ಪಾಸ್ ಆಗಿದ್ದಾರೆ.

ಇನ್ನು 3,17,189 ಶೇ.37.66 ಮಕ್ಕಳು ಅನುತೀರ್ಣರಾಗಿದ್ದರು. ಅದರಲ್ಲಿ ಅತಿ ಹೆಚ್ಚು ಪ್ರಥಮ ಭಾಷೆ ಕನ್ನಡದಲ್ಲಿ 1,65,080 ವಿದ್ಯಾರ್ಥಿಗಳು ಹಾಗೂ ದ್ವಿತೀಯ ಭಾಷೆ ಇಂಗ್ಲೀಷ್‌ನಲ್ಲಿ ಶೇ.20 ರಷ್ಟು ವಿದ್ಯಾರ್ಥಿಗಳಿದ್ದರು. ಅವರೆ ಮೂರು ಬಾರಿ ಪರೀಕ್ಷೆ ಬರೆದರೂ ಸಹ 1,67,289 ವಿದ್ಯಾರ್ಥಿಗಳು ಫೇಲಾದರು. ಅವರಲ್ಲಿ 90,334 ವಿದ್ಯಾರ್ಥಿಗಳು ಮಾತ್ರ ಈ ಬಾರಿ ಪರೀಕ್ಷೆಗೆ ನೋಂದಣಿಯಾಗಿದ್ದಾರೆ.

ಅಂದರೆ ಕಳೆದ ವರ್ಷ ಮೂರು ಪರೀಕ್ಷೆಯಲ್ಲೂ ಫೇಲ್ ಆದವರ ಪೈಕಿ ಬರೋಬ್ಬರಿ 70,955 ವಿದ್ಯಾರ್ಥಿಗಳು ಈ ಬಾರಿ ಎಸ್ಎಸ್ಎಲ್‌ಸಿ ಪರೀಕ್ಷೆಗೆ ನೋಂದಣಿ ಮಾಡಿಸಿಲ್ಲ. ಅರ್ಥಾತ್ ತಮ್ಮ ಕಲಿಕೆಯನ್ನು ಕೈಬಿಟ್ಟಿದ್ದಾರೆ. ಇನ್ನೂ 2023-24ನೇ ಸಾಲಿನಲ್ಲಿ 8,59,967 ವಿದ್ಯಾರ್ಥಿಗಳ ಪೈಕಿ 6,31,204 ಶೇ.73.40ರಷ್ಟು ಪಾಸಾಗಿದ್ದರು. ಇನ್ನುಳಿದ 2,28,763 ಮಕ್ಕಳು ಫೇಲಾಗಿದ್ದರು. ಈ ಅಂಕಿಅಂಶಗಳು ಪ್ರತಿವರ್ಷವೂ ಪರೀಕ್ಷೆಯ ಫಲಿತಾಂಶ ಬಂದಾಗ ಕಾಣ ಸಿಗುತ್ತದೆ.

ಅದೆಷ್ಟೋ ಮಕ್ಕಳು ಭಾಷಾ ವಿಷಯದ, ಮುಖ್ಯ ವಿಷಯದ ಫೇಲಾಗಿ ತಮ್ಮ ಶಿಕ್ಷಣವನ್ನು ಅರ್ಧದ ಮೊಟಕುಗೊಳಿಸುತ್ತಾರೆ. ಹೀಗೆ ಪ್ರತಿ ವರ್ಷವೂ ಲಕ್ಷಾಂತರ ವಿದ್ಯಾರ್ಥಿಗಳು ಫೇಲಾದರೂ ಸಹ ಅವರ ಭವಿಷ್ಯದ ನಿಟ್ಟಿನಲ್ಲಿ ರಾಜ್ಯ ಶಿಕ್ಷಣ ಇಲಾಖೆಯ ಯಾವೊಬ್ಬ ಸಚಿವರು ಸೂಕ್ತ ಪರೀಕ್ಷಾ ನೀತಿ ಹಾಗೂ ಶಿಕ್ಷಣ ನೀತಿಯ ಬದಲಾವಣೆಗೆ ಯಾವ ಕ್ರಮವನ್ನು ಕೈಗೊಂಡಿಲ್ಲ. ಇದರ ಬಗ್ಗೆ ಸರಳವಾದ ಪರಿಹಾರ ಮಾರ್ಗವನ್ನು ಅಳವಡಿಸಿ ಕೊಳ್ಳುವ ಅವಕಾಶ ಇದ್ದರೂ ಸಹ ಅದರ ಬಗ್ಗೆ ಚಿಂತಿಸಿಲ್ಲ.


ಪ್ರಸ್ತುತ ಹಿಂದಿ ವಿಷಯದ ಅಂಕ ಲೆಕ್ಕಕ್ಕಿಲ್ಲದ ಕಾರಣ 2-3ಲಕ್ಷದಲ್ಲಿ ಒಂದಿಷ್ಟು ಸಾವಿರ ವಿದ್ಯಾರ್ಥಿಗಳು ಹಿಂದಿ ವಿಷಯದಲ್ಲಿ ಫೇಲ್ ಆಗುವ ಭಯದಿಂದ ಪಾರಾದರು. ಆದರೆ, ಇನ್ನುಳಿದ ಲಕ್ಷಾಂತರ ವಿದ್ಯಾರ್ಥಿಗಳು ಒಂದೊಮ್ಮೆ ಕನ್ನಡ, ಇಂಗ್ಲೀಷ್ ಭಾಷಾ ವಿಷಯಗಳ ಪೈಕಿ ಒಂದನ್ನು ಅಥವಾ ಗಣಿತ, ವಿಜ್ಞಾನ, ಸಮಾಜ-ವಿಜ್ಞಾನ ಮುಖ್ಯ ವಿಷಯಗಳ ಪೈಕಿ ಒಂದನ್ನು ಫೇಲ್ ಆದರೆ ಅದಕ್ಕೆ ಕ್ರಮವೇನು? ಈ ಬಾರಿ ಏನೋ ಒಟ್ಟಾರೆ 33 ಪಾಸ್ ಅಂಕ ನಿಯಮ ಜಾರಿಗೆ ಬಂದ ಕಾರಣ 35-40 ಸಾವಿರ ಜನರು ಪಾಸ್ ಆಗಬಹುದು. ಆದರೂ ಒಂದೂವರೆ -ಎರಡು ಲಕ್ಷ ವಿದ್ಯಾರ್ಥಿಗಳ ಕಥೆ ಏನು?ಈ ಪ್ರಶ್ನೆಗೆ ಇದೀಗ ಸೂಕ್ತ ನಿರ್ಣಯ ಕೈಗೊಳ್ಳುವ ಸಕಾಲ ಒದಗಿ ಬಂದಿದೆ.

ಇದಕ್ಕೆ ಸುಲಭವಾದ ವಿದ್ಯಾರ್ಥಿ ಸ್ನೇಹಿ ಒಂದು ಮಾರ್ಗವಿದೆ. ಯಾರೆ ವಿದ್ಯಾರ್ಥಿಗಳು ಕನ್ನಡ, ಇಂಗ್ಲೀಷ್ ಕಡ್ಡಾಯ ಭಾಷಾ ವಿಷಯದಲ್ಲಿ ಫೇಲ್ ಆಗುತ್ತಾರೋ ಅವರು ಒಂದು ವೇಳೆ ತೃತೀಯ ಭಾಷೆಯ ಐಚ್ಛಿಕ ವಿಷಯದಲ್ಲಿ ಉತ್ತೀರ್ಣರಾಗಿದ್ದರೆ ಆ ಅಂಕಗಳನ್ನು ಫೇಲ್ ಆದ ಒಂದು ಕಡ್ಡಾಯ ಭಾಷಾ ವಿಷಯದೊಂದಿಗೆ ಸಬ್ಸ್ಟಿಟ್ಯೂಟ್ ಮಾಡುವುದು.

ಉದಾಹರಣೆಗೆ ಕನ್ನಡದಲ್ಲಿ ವಿದ್ಯಾರ್ಥಿ ಫೇಲ್ ಆಗಿ ಇಂಗ್ಲೀಷ್‌ನಲ್ಲಿ ಪಾಸಾಗಿದ್ದರೆ, ಆತನ್ನು ಫೇಲ್ ಎಂದು ಘೋಷಿಸುವ ಬದಲು, ಆತ ಒಂದು ವೇಳೆ ಏನಾದರೂ ತೃತೀಯ ಭಾಷೆಯಲ್ಲಿ ಒಂದು (ಆತನ ಆಯ್ಕೆಯ) ಸಂಸ್ಕೃತದಲ್ಲಿ ಪಾಸಾಗಿದ್ದರೆ ಆ ಅಂಕಗಳನ್ನು ಕನ್ನಡ ಅಂಕದೊಂದಿಗೆ ಬದಲಿಸಿ ಪಾಸ್ ಎಂದು ಘೋಷಣೆ ಮಾಡುವುದು.

ಆಗ ಕೆಲವೊಂದಿಷ್ಟು (ಸಂಸ್ಕೃತ, ತುಳು, ಕೊಂಕಣಿ, ಕನ್ನಡ, ಮರಾಠಿ, ಹಿಂದಿ) ವಿಷಯಗಳನ್ನು 6ನೇ ಐಚ್ಛಿಕ ವಿಷಯವನ್ನಾಗಿ ಕಲಿಯಲು ವಿದ್ಯಾರ್ಥಿಗಳಿಗೆ ಆಯ್ಕೆ ನೀಡಬೇಕು. ಹಾಗೆಯೇ ವಿದ್ಯಾರ್ಥಿ ಕಡ್ಡಾಯ ಮುಖ್ಯ ವಿಷಯವಾದ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ವಿಷಯಗಳ ಪೈಕಿ ಒಂದನ್ನು ಫೇಲ್ ಆದರೆ ಅಂತಹ ವಿದ್ಯಾರ್ಥಿ ಒಂದೊಮ್ಮೆ 7ನೇ ಐಚ್ಛಿಕ ಭಾಷೆಯಾಗಿ ಸ್ಕಿಲ್ ಸಬ್ಜೆಕ್ಟ್ ಅಂದರೆ ಕೌಶಲ್ಯಾಧಾರಿತ ವಿಷಯಗಳಾದ ಸೆಕ್ಯೂರಿಟಿ, ಕಂಪ್ಯೂಟರ್ ಅಪ್ಲಿಕೇಶನ್, ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ಹಣಕಾಸು, ಕೃಷಿ, ಆಹಾರ, ಆರೋಗ್ಯ, ಮಾರ್ಕೆಟಿಂಗ್, ಮಲ್ಟಿಮೀಡಿಯಾ ಹೀಗೆ ವಿದ್ಯಾರ್ಥಿ ಆಯ್ಕೆ ಮಾಡಿ ಕೊಂಡ ಒಂದು ವಿಷಯದಲ್ಲಿ ಪಾಸ್ ಆಗಿದ್ದರೆ ಆ ಅಂಕಗಳನ್ನು ಫೇಲ್ ಆಗಿರುವ ಒಂದು ಕಡ್ಡಾಯ ಮುಖ್ಯ ವಿಷಯದೊಂದಿಗೆ ಸಬ್ಸ್ಟಿಟ್ಯೂಟ್ ಮಾಡುವುದು.



ಈ ವಿಷಯಕ್ಕೆ 80 ಅಂಕದ ಬದಲು 50 ಅಂಕ ನಿಗದಿಪಡಿಸಿ ಇನ್ನುಳಿದ 50 ಅಂಕವನ್ನು ಪ್ರಾಯೋಗಿಕ ಅಂಕವನ್ನಾಗಿ ನಿಗದಿ ಪಡಿಸುವುದು. ಇದರಿಂದ ವಿದ್ಯಾರ್ಥಿಗಳು ಒಂದೊಮ್ಮೆ ವಾರ್ಷಿಕ ಪರೀಕ್ಷೆಯಲ್ಲಿ ಒಂದು ಭಾಷಾ ವಿಷಯ ಹಾಗೂ ಒಂದು ಕಡ್ಡಾಯ ವಿಷಯದಲ್ಲಿ ಫೇಲ್ ಆದರೂ ಸಹ ಆ ವಿದ್ಯಾರ್ಥಿ 6 ಐಚ್ಛಿಕ ಹಾಗೂ 7ನೇ ಸ್ಕಿಲ್ ವಿಷಯವನ್ನು ಆಯ್ಕೆ ಮಾಡಿಕೊಂಡ ಕಾರಣ ಪಾಸಾಗಿದ್ದರೆ ಎಂದರೆ ಅಂತಹ ಲಕ್ಷಾಂತರ ಮಕ್ಕಳು ಫೇಲ್ ಅಗುವುದು ತಪ್ಪುತ್ತದೆ.

ಹೀಗೆ ಮಾಡುವುದರಿಂದ ರಾಜ್ಯ ಶಿಕ್ಷಣ ಇಲಾಖೆಯ ಗುಣಮಟ್ಟದ ಶಿಕ್ಷಣಕ್ಕಾಗಲಿ, ವಿದ್ಯಾರ್ಥಿಯ ಕಲಿಕಾ ವಿಷಯದ ಜ್ಞಾನ ಹಾಗೂ ಆಯ್ಕೆಗಾಗಲಿ ಯಾವುದೇ ಧಕ್ಕೆ ಬರುವುದಿಲ್ಲ. ಏಕೆಂದರೆ ಎಸ್ಎಸ್ಎಲ್‌ಸಿ ಪರೀಕ್ಷೆಗೆ 5 ಕಡ್ಡಾಯ ವಿಷಯ ಇದ್ದರೂ ಸಹ 6ನೇ ಭಾಷಾ ವಿಷಯ ಹಾಗೂ 7ನೇ ಸ್ಕಿಲ್ ಸಬ್ಜೆಕ್ಟ್ ಆಯ್ಕೆ ಕಡ್ಡಾಯವಾಗಬಾರದು.

ಅದು ವಿದ್ಯಾರ್ಥಿಯ ಆಯ್ಕೆ ಮಾತ್ರ ಆಗಿರಬೇಕು. ಅದು ವಿದ್ಯಾರ್ಥಿ ಸ್ನೇಹಿ ಆಗಿರಬೇಕು. ಜತೆಗೆ ಫೇಲ್ ಪ್ರಮಾಣ ಕಡಿಮೆ ಆಗುವ ಹಾಗೂ ಹೊಸದೊಂದು ವಿಷಯವನ್ನು ಕಲಿಯುವ ವೇದಿಕೆಯಾಗಿರಬೇಕು. ಇಲ್ಲಿ ಸರಕಾರ ಯಾವ ವಿಷಯಗಳು 6ನೇ ಐಚ್ಛಿಕ ಭಾಷಾ ವಿಷಯ ಇರಬೇಕು ಹಾಗೂ 7ನೇ ಸ್ಕಿಲ್ ಸಬ್ಜೆಕ್ಟ್ ಇರಬೇಕೆಂದು ತಜ್ಞರೊಂದಿಗೆ ಚರ್ಚಿಸಿ, ಪ್ರಸುತ್ತ ಲಭ್ಯವಿರುವ ಮಾನವ ಸಂಪನ್ಮೂಲ ಗಮನದಲ್ಲಿಟ್ಟುಕೊಂಡು ತೀರ್ಮಾನ ಕೈಗೊಳ್ಳಲಿ. ಇಲ್ಲೂ ಸಹ ಹಿಂದಿ ಹೇರಿಕೆಯ ಮಾತೇ ಇಲ್ಲ.

ಬದಲಾಗಿ ನಮ್ಮ ರಾಜ್ಯದ ಇತರ ಭಾಷೆಯ ಕಲಿಕೆಗೆ ಮಾನ್ಯತೆ ದೊರಕುತ್ತದೆ. ಜತೆಗೆ ವಿದ್ಯಾರ್ಥಿ 8ನೇ ತರಗತಿಯಿಂದಲೇ ಒಂದೊಂದು ಕೌಶಲ ವಿಷಯ ಕಲಿಯುವುದರಿಂದ ಭವಿಷ್ಯದಲ್ಲಿ ಮಕ್ಕಳಿಗೂ ಅಗಾಧ ಉದ್ಯೋಗಾವಕಾಶವು ಲಭಿಸುತ್ತದೆ. ಶಿಕ್ಷಣ ಇಲಾಖೆಯ ಫಲಿತಾಂಶವು ಹೆಚ್ಚುತ್ತದೆ.

ಇದನ್ನು ಕಡ್ಡಾಯ ಮಾಡದೇ, ಆಸಕ್ತಿ ಇರುವ ಶಾಲೆಯವರು ತಮ್ಮ ಮಕ್ಕಳಿಗೆ ಕಲಿಸುವಂತಾಗಬೇಕು. ಸರಕಾರಿ ಶಾಲೆಗೆ ಇದನ್ನು ಕಡ್ಡಾಯಗೊಳಿಸಲು ಇರುವ ಬಹುದೊಡ್ಡ ತೊಡಕು ಶಿಕ್ಷಕರ ನೇಮಕಾತಿ.

ಅಂತಹ ಸಂದರ್ಭದಲ್ಲಿ ಅತಿಥಿ ಶಿಕ್ಷಕರಿಂದ ಬೋಧನೆ ಮಾಡಿಸಬಹುದು. ಇಷ್ಟು ಸರಳ ಪರಿಹಾರವನ್ನು ರಾಜ್ಯ ಶಿಕ್ಷಣ ಇಲಾಖೆ ಮುಂದಿನ ವರ್ಷದಿಂದಾದರೂ ಅನುಷ್ಠಾನಕ್ಕೆ ತಂದರೆ ಖಂಡಿತವಾಗಿಯೂ ರಾಜ್ಯ ಶಿಕ್ಷಣ ದೇಶದ ಕ್ರಾಂತಿ ಮಾಡುವುದರಲ್ಲಿ ಎರಡು ಮಾತಿಲ್ಲ.

ಕೊನೆಯದಾಗಿ ಕನ್ನಡಪರ ಸಂಘಟನೆಗಳು ಸೇರಿದಂತೆ ಎಲ್ಲರ ಒಕ್ಕೊರಲಿನ ಮಾತು ಕೇಂದ್ರ ಸರಕಾರದ ಬಹುತೇಕ ಎಲ್ಲಾ ಹುದ್ದೆಗಳಲ್ಲೂ ಹಿಂದಿಯವರಿಗೆ ಹೆಚ್ಚು ಅವಕಾಶ ಎಂದು. ನಿಜ ಎಡೆ ಅವರೇ ತುಂಬಿದ್ದಾರೆ ಹೌದು. ಒಮ್ಮೆ ಯೋಚಿಸಿ ಕೆಪಿಎಸ್ಇ ವತಿಯಿಂದ ನಡೆಯುವ ನೇಮಕಾತಿಯಲ್ಲಿ ನಮ್ಮ ರಾಜ್ಯದವರಿಗೆ ಮಾತ್ರ ಅವಕಾಶ. ಆಯಾಯ ಹುದ್ದೆಗೆ ಬೇಕಾದ ಒಂದಿಷ್ಟು ತರಬೇತಿ ಕೇಂದ್ರಗಳು ಅಂದು, ಇಂದು ಕಾಣಬಹುದು.

» ಮಕ್ಕಳ ತೃತೀಯ ಭಾಷೆಯ ಮೇಲಿನ ಕಲಿಕಾ ಹೊರೆಯನ್ನು ಇಳಿಸುವುದು. ಇದರೊಂದಿಗೆ ಕಳೆದ ವರ್ಷ 90510 ವಿದ್ಯಾರ್ಥಿಗಳು ತೃತೀಯ ಹಿಂದಿ ಭಾಷೆಯಲ್ಲಿ ಅನುತೀರ್ಣರಾಗಿದ್ದರು. ಹಾಗಾಗಿ ಒಂದು ವಿಷಯದಲ್ಲಿ ಫೇಲ್ ಆದ ಕಾರಣ ಮತ್ತೆ ಮರುಪರೀಕ್ಷೆ ಎದುರಿಸಬೇಕಾದ ಅನಿವಾರ್ಯತೆ. ಇದರಿಂದ ಮಕ್ಕಳ ಒಂದು ಕಲಿಕಾ ವರ್ಷ ಹಾಳಾಗುತ್ತದೆ ಎಂಬ ಕಾಳಜಿ.

ಆದರೆ, ಕೇಂದ್ರ ಸರಕಾರದ ಹಲವು ಹುದ್ದೆಗಳಿಗೆ ಎಸ್ಎಸ್ಎಲ್‌ಸಿ, ಪಿಯುಸಿ ವಿದ್ಯಾರ್ಹತೆಯೇ ಶೈಕ್ಷಣಿಕ ಮಾನದಂಡ. ಆದರೆ, ನಾವು ಮಾತ್ರ ನಮ್ಮ ಮಕ್ಕಳಿಗೆ ಹುಟ್ಟುವಾಗಲೇ ಡಾಕ್ಟರ್, ಎಂಜಿನಿಯರ್ ಮಾತ್ರ ಆಗಬೇಕು. ಅದಕ್ಕೆ ಪೂರಕವಾಗಿ 6ನೇ ತರಗತಿಯಿಂದಲೇ ಕೋಚಿಂಗ್ ನೀಡಬೇಕೆಂಬ ಧೋರಣೆ ಹೊಂದಿದ್ದೇವೆ.

ಆ ನಿಟ್ಟಿನಲ್ಲಿ ಅಷ್ಟೇ ಪ್ರಯತ್ನಿಸುತ್ತಿದ್ದೇವೆ. ಆದರೆ, ಉತ್ತರ ಭಾರತದಲ್ಲಿ ಹತ್ತನೇ ತರಗತಿಯಿಂದಲೇ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಯ ಕೋಚಿಂಗ್ ನೀಡಲಾಗುತ್ತದೆ. ನಾವಿಲ್ಲಿ ಹೇಗೆ ನೀಟ್, ಸಿಇಟಿ ಪರೀಕ್ಷೆಗೆ ಹೆಚ್ಚು ಒತ್ತು ನೀಡುತ್ತೇವೋ ಅದೇ ರೀತಿ ಅಲ್ಲಿ ಕೇಂದ್ರ ಸರಕಾರದ ಎಲ್ಲಾ ಸ್ಪರ್ಧಾತ್ಮಕ ಹುದ್ದೆಗೆ ವಿದ್ಯಾರ್ಥಿಗಳನ್ನು ತಯಾರು ಮಾಡಲಾಗುತ್ತದೆ. ಅಲ್ಲಿಯ ಗಲ್ಲಿ-ಗಲ್ಲಿಯಲ್ಲೂ ಕೋಚಿಂಗ್ ಸೆಂಟರ್ ಇದೆ. ಶಾಲೆಯಲ್ಲೂ ವಿಶೇಷ ತರಬೇತಿ ನೀಡುತ್ತಾರೆ. ಪಕ್ಕದ ತೆಲಂಗಾಣ, ಆಂಧ್ರಪ್ರದೇಶದಲ್ಲಿ ನೋಡಿ ಅಲ್ಲೂ ಸಾವಿರಾರು ಬ್ಯಾಂಕಿಂಗ್ ಪರೀಕ್ಷಾ ಕೋಚಿಂಗ್ ಸೆಂಟರ್ ಇವೆ. ಇಂದು ನಮ್ಮ ರಾಜ್ಯದಲ್ಲಿರುವ ಬಹುತೇಕ ಬ್ಯಾಂಕ್ ಉದ್ಯೋಗಿಗಳಲ್ಲಿ ನಮ್ಮ ಅಕ್ಕ ಪಕ್ಕದ ರಾಜ್ಯದವರೇ ಹೆಚ್ಚು. ನಮ್ಮ ಮಕ್ಕಳು ಸಹ ಐಬಿಪಿಎಸ್ ಬ್ಯಾಂಕಿಂಗ್ ಪರೀಕ್ಷೆಗೆ ತಯಾರಿ ನಡೆಸಲು ಅ ಹೋಗಬೇಕು.

ಹಾಗಾಗಿ ನಮ್ಮ ರಾಜ್ಯದಲ್ಲಿ ಕನ್ನಡಿಗರು ಅಂತಹ ಹುದ್ದೆಗಳನ್ನು ಪಡೆಯಲು ಸೋಲುತ್ತಿದ್ದಾರೆ. ಅಬ್ಬಬ್ಬಾ ಎಂದು ಲೆಕ್ಕ ಹಾಕಿದರೂ 3-4 ಪ್ರಮಾಣೀಕೃತ ಕೋಚಿಂಗ್ ಸೆಂಟರ್ ಬಿಟ್ಟರೆ ನಮ್ಮ ರಾಜ್ಯದಲ್ಲಿ ಎಲ್ಲಾ ಮಕ್ಕಳಿಗೂ ಕಡಿಮೆ ಖರ್ಚಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರು ಮಾಡುವ ಕೇಂದ್ರವಿಲ್ಲ.

ನಮ್ಮ ಪಾಲಕರಿಗೂ, ಸರಕಾರಕ್ಕೂ, ಸಂಘಟನೆಗಳಿಗೂ ಇದರ ಬಗ್ಗೆ ಉತ್ಸಾಹವಿಲ್ಲ. ಕನ್ನಡಿಗರು ಕೇಂದ್ರ ಸರಕಾರದ ಹುದ್ದೆಗೆ ಅರ್ಜಿ ಹಾಕುವ ಪ್ರಮಾಣ ಹಾಗೂ ತೇರ್ಗಡೆಯಾಗುವ ಪ್ರಮಾಣವನ್ನೊಮ್ಮೆ ಅವಲೋಕಿಸಿದಾಗ ನಾವೆಲ್ಲಿ ಎಡವುತ್ತಿದ್ದೇವೆ ಎಂಬ ಸ್ಪಷ್ಟ ಚಿತ್ರಣ ಸಿಗುತ್ತದೆ.


ಇನ್ನಾದರೂ ಸರಕಾರ ಹಾಗೂ ಶಿಕ್ಷಣ ಇಲಾಖೆ ರಾಜ್ಯದಲ್ಲಿ ಇಂತಹ ಸರಳ ಬದಲಾವಣೆಯನ್ನು ಪಕ್ಷಾತೀತವಾಗಿ ಚಿಂತಿಸಿ, ಚರ್ಚಿಸಿ ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಿದರೆ ಕನ್ನಡವನ್ನು ಮಾತ್ರವಲ್ಲ ಕನ್ನಡಿಗರನ್ನು ಸುಭದ್ರವನ್ನಾಗಿಸಲು ಸಾಧ್ಯ. ಮುಂದಿನ ಶೈಕ್ಷಣಿಕ ವರ್ಷದಿಂದಲೇ ಇದು ಕಾರ್ಯರೂಪಕ್ಕೆ ಬಂದರೆ ಇಷ್ಟು ದಿನದ ಹೋರಾಟಕ್ಕೆ ನಿಜವಾದ ಜಯ ಸಿಕ್ಕಂತೆ. ಯೋಚಿಸಿ!

**- ಸುರೇಂದ್ರ ಪೈ, ಭಟ್ಕಳ,** (ಲೇಖಕರು ಹವ್ಯಾಸಿ ಬರಹಗಾರರು)



## ಪ್ರತಿಕ್ರಿಯಾತ್ಮಕ ಚಿಕಿತ್ಸೆಯಿಂದ ಮುನ್ಸೂಚಕ ತಡೆಗಟ್ಟುವ ಆರೋಗ್ಯ ರಕ್ಷಣೆಗೆ ಬದಲಾವಣೆ

### ವಿಶ್ವ ಆರೋಗ್ಯ ದಿನ



ವೈದ್ಯರನ್ನು ಭೇಟಿ ಮಾಡುವ ಮೊದಲು ತೀವ್ರ ಹೃದಯಾಘಾತಕ್ಕಾಗಿ ಕಾಯುವುದು ಇಂದು ಭಯಾನಕ ಜೈವಿಕ ಫಲಿತಾಂಶಗಳನ್ನು ಖಾತರಿಪಡಿಸುತ್ತದೆ. ಸಾಂಪ್ರದಾಯಿಕ ಔಷಧವು ತೀವ್ರವಾಗಿ ಮುರಿದುಹೋದ ವ್ಯವಸ್ಥೆಗಳನ್ನು ಸರಿಪಡಿಸುವತ್ತ ಸಂಪೂರ್ಣವಾಗಿ ಗಮನಹರಿಸುತ್ತದೆ. ನಾವು ದುರಂತ ವೈಫಲ್ಯಕ್ಕಾಗಿ ಕಾಯುತ್ತೇವೆ. ಏಪ್ರಿಲ್ 7, 2026 ರಂದು ವಿಶ್ವ ಆರೋಗ್ಯ ದಿನ 2026 ಅನ್ನು ಸಕ್ರಿಯವಾಗಿ ಗುರುತಿಸುವುದು ಸಂಪೂರ್ಣವಾಗಿ ಹೊಸ ವೈದ್ಯಕೀಯ ತತ್ವಶಾಸ್ತ್ರವನ್ನು ಬಯಸುತ್ತದೆ. ನಾವು ರೋಗವನ್ನು ಊಹಿಸಬೇಕು.

ಪ್ರಮುಖ ಅಂಗಗಳು ವಾಸ್ತವವಾಗಿ ಕುಸಿಯುವ ಮೊದಲೇ ಮಾನವ ದೇಹವು ಸೂಕ್ಷ್ಮ ಜೈವಿಕ ಸುಳಿವುಗಳನ್ನು ನಿರಂತರವಾಗಿ ಬಿಡುತ್ತದೆ. ಆಧುನಿಕ ವಿಜ್ಞಾನವು ಈ ಸಣ್ಣ ಸೂಕ್ಷ್ಮ ಎಚ್ಚರಿಕೆಗಳನ್ನು ಸಂಪೂರ್ಣವಾಗಿ ಓದುತ್ತದೆ. ನಿಜವಾದ ತಡೆಗಟ್ಟುವ ಆರೋಗ್ಯ ರಕ್ಷಣೆಯು ದೈಹಿಕ ಲಕ್ಷಣಗಳು ಕಾಣಿಸಿಕೊಳ್ಳುವ ವರ್ಷಗಳ ಮೊದಲೇ ಮೌನ ಹಾನಿಯನ್ನು ತಡೆಯುತ್ತದೆ. ಅಸಮರ್ಪಕ ಕಾರ್ಯವನ್ನು ಮೊದಲೇ ಪತ್ತೆಹಚ್ಚುವುದು ನಿಮ್ಮ ಜೀವವನ್ನು ಸಂಪೂರ್ಣವಾಗಿ ಉಳಿಸುತ್ತದೆ.

**ಸಾಂಪ್ರದಾಯಿಕ ಅನಾರೋಗ್ಯ ಆರೈಕೆ ಮಾದರಿಯಿಂದ ತಪ್ಪಿಸಿಕೊಳ್ಳುವುದು:** ವೈದ್ಯರು ಸಾಮಾನ್ಯವಾಗಿ ಪ್ರತಿದಿನ ತುರ್ತು ಅಗ್ನಿಶಾಮಕ ದಳದವರಂತೆಯೇ ವರ್ತಿಸುತ್ತಾರೆ. ಅವರು ನಿಮ್ಮ ದೇಹವನ್ನು ನಾಶಮಾಡುವ ಉರಿಯುತ್ತಿರುವ ವೈದ್ಯಕೀಯ ಜ್ವಾಲೆಗಳನ್ನು ನಂದಿಸಲು ಧಾವಿಸುತ್ತಾರೆ. ಜೀವಕೋಶಗಳಿಗೆ ಈಗಾಗಲೇ ಹಾನಿಯಾಗಿದೆ. ಟ್ರೂ ಪ್ರಿವೆಂಟಿವ್ ಹೆಲ್ತ್‌ಕೇರ್ ಈ ಭಯಾನಕ ಚಲನಶೀಲತೆಯನ್ನು ಸಂಪೂರ್ಣವಾಗಿ ತಿರುಗಿಸುತ್ತದೆ. ವೈದ್ಯರು ಸುರಕ್ಷಿತವಾಗಿ ಬದಲಾಗಿ ಜೈವಿಕ ಕಟ್ಟಡವನ್ನು ಅಗ್ನಿ ನಿರೋಧಕವಾಗಿಸುವುದರ ಮೇಲೆ ಹೆಚ್ಚು ಗಮನಹರಿಸುತ್ತಾರೆ.

ಮುಂದುವರಿದ ಉರಿಯೂತದ ಗುರುತುಗಳನ್ನು ಅಳೆಯುವುದರಿಂದ ಮೌನ ಆಂತರಿಕ ವಿನಾಶವನ್ನು ನಿಖರವಾಗಿ ಬಹಿರಂಗಪಡಿಸುತ್ತದೆ. ಪ್ರಮಾಣಿತ ವಾರ್ಷಿಕ ದೈಹಿಕ ಪರೀಕ್ಷೆಯು ಈ ಹೆಚ್ಚು ನಿರ್ದಿಷ್ಟವಾದ ಸೂಕ್ಷ್ಮ ಎಚ್ಚರಿಕೆ ಚಿಹ್ನೆಗಳನ್ನು ಸಂಪೂರ್ಣವಾಗಿ ತಪ್ಪಿಸುತ್ತದೆ. ನಿಮ್ಮ ಸೂಕ್ಷ್ಮ ಅಪಧಮನಿಗಳು ನಿಧಾನವಾಗಿ ಗಟ್ಟಿಯಾಗುತ್ತಿರುವಾಗ ನೀವು ಸಂಪೂರ್ಣವಾಗಿ ಆರೋಗ್ಯವಾಗಿರುತ್ತೀರಿ. ಇಂದು ನಾವು ಮೂಲಭೂತ ರಕ್ತದೊತ್ತಡ ವಾಚನಗಳಿಗಿಂತ ಗಮನಾರ್ಹವಾಗಿ ಆಳವಾಗಿ ನೋಡಬೇಕು.

**ಭವಿಷ್ಯದ ರೋಗ ಮುನ್ಸೂಚನೆಗಾಗಿ ಜೆನೆಟಿಕ್ ಡೇಟಾವನ್ನು ಡಿಕೋಡಿಂಗ್ ಮಾಡುವುದು:** ನಿಮ್ಮ ವಿಶಿಷ್ಟ ಡಿಎನ್ಎ ನಿಮ್ಮ ಭವಿಷ್ಯದ ಜೈವಿಕ ದುರ್ಬಲತೆಗಳ ನಿಖರವಾದ ನೀಲನಕ್ಷೆಯನ್ನು ಹೊಂದಿದೆ. ಜೆನೆಟಿಕ್ ಪರೀಕ್ಷೆಯು ಹೆಚ್ಚು ನಿರ್ದಿಷ್ಟವಾದ ಆನುವಂಶಿಕ ರೂಪಾಂತರಗಳನ್ನು ನಿಖರವಾಗಿ ಬಹಿರಂಗಪಡಿಸುತ್ತದೆ. ಆಕ್ರಮಣಕಾರಿ ಸ್ತನ ಕ್ಯಾನ್ಸರ್ ಜೀನ್ ಅನ್ನು ಮೊದಲೇ ಕಂಡುಹಿಡಿಯುವುದು ನಿಮ್ಮ ದೀರ್ಘಕಾಲೀನ ಬದುಕುಳಿಯುವ ತಂತ್ರವನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ. ಕಚ್ಚಾ ಡೇಟಾವು ನಂಬಲಾಗದಷ್ಟು ಶಕ್ತಿಯುತ ವೈದ್ಯಕೀಯ ಮಾರ್ಗಸೂಚಿಯನ್ನು ಸುರಕ್ಷಿತವಾಗಿ ಒದಗಿಸುತ್ತದೆ.

ನಿಮ್ಮ ಸಂಪೂರ್ಣ ಆನುವಂಶಿಕ ಅಪಾಯಗಳನ್ನು ತಿಳಿದುಕೊಳ್ಳುವುದರಿಂದ ಭಯಾನಕ ವೈದ್ಯಕೀಯ ಆಶ್ಚರ್ಯಗಳು ಸಂಪೂರ್ಣವಾಗಿ ನಿವಾರಣೆಯಾಗುತ್ತವೆ. ನಿರ್ದಿಷ್ಟ ಆಲ್ಝೈಮರ್ ಗುರುತುಗಳನ್ನು ಹೊಂದಿರುವ ರೋಗಿಗಳು ತಕ್ಷಣವೇ ಹೆಚ್ಚು ರಕ್ಷಣಾತ್ಮಕ ನರವೈಜ್ಞಾನಿಕ ಆಹಾರಕ್ರಮಗಳನ್ನು ಅಳವಡಿಸಿಕೊಳ್ಳಬಹುದು. ನಿಮ್ಮ ದೈನಂದಿನ ಜೀವನಶೈಲಿಯನ್ನು ಮಾರ್ಪಡಿಸುವುದರಿಂದ ಅಪಾಯಕಾರಿ ಜೀನ್‌ಗಳು ಸಕ್ರಿಯಗೊಳ್ಳುವುದನ್ನು ಸಕ್ರಿಯವಾಗಿ ನಿಗ್ರಹಿಸುತ್ತದೆ. ನೀವು ಸಂಪೂರ್ಣ ಶಿಸ್ತಿನ ಮೂಲಕ ನಿಮ್ಮ ಸಂಪೂರ್ಣ ಜೈವಿಕ ಹಣೆಬರಹವನ್ನು ಪುನಃ ಬರೆಯುತ್ತೀರಿ.

**ಧರಿಸಬಹುದಾದ ತಂತ್ರಜ್ಞಾನ ಟ್ರ್ಯಾಕಿಂಗ್ ದೈನಂದಿನ ಜೈವಿಕ ಮಾಪನಗಳು:** ಸ್ಮಾರ್ಟ್‌ವಾಚ್‌ಗಳು ನಿಮ್ಮ ವಿಶ್ರಾಂತಿ ಹೃದಯ ಬಡಿತವನ್ನು ಪ್ರತಿ ನಿಮಿಷವೂ ಸಂಪೂರ್ಣವಾಗಿ ಮೇಲ್ವಿಚಾರಣೆ ಮಾಡುತ್ತವೆ. ನೀವು ಆಳವಾಗಿ ನಿದ್ರಿಸುವಾಗ ಡಿಜಿಟಲ್ ಸಂವೇದಕಗಳು ನಂಬಲಾಗದಷ್ಟು ಅಪಾಯಕಾರಿ ವಿದ್ಯುತ್ ಆರ್ಹೆತ್ಮಿಯಾಗಳನ್ನು ಪತ್ತೆ ಮಾಡುತ್ತವೆ. ಹೃತ್ಕರ್ಣದ ಕಂಪನವನ್ನು ಮೊದಲೇ ಹಿಡಿಯುವುದರಿಂದ ಬೃಹತ್ ದುರಂತದ ಪಾರ್ಶ್ವವಾಯುಗಳನ್ನು ಸಂಪೂರ್ಣವಾಗಿ ತಡೆಯುತ್ತದೆ. ನಿಮ್ಮ ಮಣಿಕಟ್ಟಿನ ಮೇಲಿರುವ ಸಣ್ಣ ಕಂಪ್ಯೂಟರ್ ನಿಮ್ಮ ಹೃದಯರಕ್ತನಾಳದ ವ್ಯವಸ್ಥೆಯನ್ನು ನಿರಂತರವಾಗಿ ಸಕ್ರಿಯವಾಗಿ ಕಾಪಾಡುತ್ತದೆ.

ನಿರಂತರ ಗ್ಲೂಕೋಸ್ ಮಾನಿಟರ್‌ಗಳು ಹಠಾತ್ ಮಧುಮೇಹ ತುರ್ತು ಪರಿಸ್ಥಿತಿಗಳನ್ನು ಸಂಪೂರ್ಣವಾಗಿ ನಿವಾರಿಸುತ್ತವೆ. ಸಣ್ಣ ಪ್ಯಾಚ್ ನಿರ್ದಿಷ್ಟ ಊಟಗಳಿಗೆ ನಿಮ್ಮ ನಿಖರವಾದ ರಕ್ತದಲ್ಲಿನ ಸಕ್ಕರೆ ಪ್ರತಿಕ್ರಿಯೆಗಳನ್ನು ತಕ್ಷಣವೇ ಟ್ರ್ಯಾಕ್ ಮಾಡುತ್ತದೆ. ಭಾರೀ ಪಾಸ್ತಾ ಭೋಜನವು ನಿಮ್ಮ ಚಯಾಪಚಯ ಸ್ಥಿರತೆಯನ್ನು ಹೇಗೆ ನಾಶಪಡಿಸುತ್ತದೆ ಎಂಬುದನ್ನು ನೀವು ನಿಖರವಾಗಿ ವೀಕ್ಷಿಸುತ್ತೀರಿ. ನೈಜ-ಸಮಯದ ಡೇಟಾವು ಕ್ಲಿನಿಕಲ್ ಕಿರುಕುಳದ ಅಗತ್ಯವಿಲ್ಲದೆ ತಕ್ಷಣದ ವರ್ತನೆಯ ಬದಲಾವಣೆಗಳನ್ನು ಒತ್ತಾಯಿಸುತ್ತದೆ.

**ದೀರ್ಘಾವಧಿಯ ಸ್ಥಿರತೆಗಾಗಿ ದೈನಂದಿನ ಪೌಷ್ಟಿಕಾಂಶದ ಅಭ್ಯಾಸಗಳನ್ನು ಮಾರ್ಪಡಿಸುವುದು.:** ಆಹಾರವು ಶಕ್ತಿಯುತವಾದ ದೈನಂದಿನ ಔಷಧ ಅಥವಾ ನಿಧಾನ ಜೈವಿಕ ವಿಷದಂತೆ ಕಾರ್ಯನಿರ್ವಹಿಸುತ್ತದೆ. ಭಾರೀ ಸಂಸ್ಕರಿಸಿದ ಸಕ್ಕರೆಗಳು ಪ್ರತಿಯೊಂದು ಅಂಗಾಂಶ ಪದರದಾದ್ಯಂತ ನಿರಂತರವಾಗಿ ಬೃಹತ್ ವ್ಯವಸ್ಥಿತ ಉರಿಯೂತವನ್ನು ಉಂಟುಮಾಡುತ್ತವೆ. ಈ ನಂಬಲಾಗದಷ್ಟು ವಿಷಕಾರಿ ರಾಸಾಯನಿಕ ಪರಿಸರವು ಕಾಲಾನಂತರದಲ್ಲಿ ಆಕ್ರಮಣಕಾರಿ ಕ್ಯಾನ್ಸರ್ ಕೋಶಗಳನ್ನು ಸಂಪೂರ್ಣವಾಗಿ ಕಾವುಕೊಡುತ್ತದೆ. ನಿಮ್ಮ ಆಹಾರಕ್ರಮವನ್ನು ಬದಲಾಯಿಸುವುದರಿಂದ ಈ ಉರಿಯೂತವು ತ್ವರಿತವಾಗಿ ಕಡಿಮೆಯಾಗುತ್ತದೆ.

ಹಸಿ ಎಲೆಗಳ ತರಕಾರಿಗಳನ್ನು ಸೇವಿಸುವುದರಿಂದ ಅಗತ್ಯವಾದ ಉತ್ಕರ್ಷಣ ನಿರೋಧಕಗಳು ಅಪಾರ ಪ್ರಮಾಣದಲ್ಲಿ ದೊರೆಯುತ್ತವೆ. ಈ ವಿಶೇಷ ಅಣುಗಳು ನಿಮ್ಮ ದುರ್ಬಲವಾದ ಡಿಎನ್ಎಯನ್ನು ಪ್ರತಿದಿನ ನಾಶಮಾಡುವ ಅಪಾಯಕಾರಿ ಸ್ವತಂತ್ರ ರಾಡಿಕಲ್‌ಗಳನ್ನು ಆಕ್ರಮಣಕಾರಿಯಾಗಿ ತಟಸ್ಥಗೊಳಿಸುತ್ತವೆ. ನಿಮ್ಮ ರೋಗನಿರೋಧಕ ವ್ಯವಸ್ಥೆಗೆ ರೋಗಕಾರಕಗಳನ್ನು ಸಂಪೂರ್ಣವಾಗಿ ಬೇಟೆಯಾಡಲು ಪ್ರೀಮಿಯಂ ಜೈವಿಕ ಇಂಧನದ ಅಗತ್ಯವಿದೆ. ಕೆಟ್ಟ ಪೋಷಣೆಯು ಈ ರಕ್ಷಣಾತ್ಮಕ ಸೈನ್ಯವನ್ನು ತೀವ್ರವಾಗಿ ದುರ್ಬಲಗೊಳಿಸುತ್ತದೆ.

ಮೌನ ಹೃದಯರಕ್ತನಾಳದ ಬೆದರಿಕೆಗಳನ್ನು ಮೊದಲೇ ಗುರುತಿಸುವುದು

ಯಾವುದೇ ದೈಹಿಕ ನೋವನ್ನು ಉಂಟುಮಾಡದೆ ಅಪಧಮನಿಯ ಪ್ಲೇಕ್ ಸಂಪೂರ್ಣವಾಗಿ ಸಂಗ್ರಹವಾಗುತ್ತದೆ. ನಿಮ್ಮ ಪರಿಧಮನಿಯ ನಾಳಗಳು ಮುಚ್ಚಿಹೋಗುವ ದಟ್ಟವಾದ ಕೊಲೆಸ್ಟ್ರಾಲ್ ಅನ್ನು ನೀವು ನಿಧಾನವಾಗಿ ಅನುಭವಿಸಲು ಸಾಧ್ಯವಿಲ್ಲ. ಸುಧಾರಿತ ಕ್ಯಾಲ್ಸಿಯಂ ಸ್ಕೋರಿಂಗ್ ಸ್ಕ್ಯಾನ್‌ಗಳು ಈ ಅತ್ಯಂತ ಅಪಾಯಕಾರಿ ಕ್ಯಾಲ್ಸಿಫಿಕೇಶನ್ ಅನ್ನು ಸಂಪೂರ್ಣವಾಗಿ ದೃಶ್ಯೀಕರಿಸುತ್ತವೆ. ಡಿಜಿಟಲ್ ಇಮೇಜಿಂಗ್ ಗುಪ್ತ ಜೈವಿಕ ಟೈಮ್ ಬಾಂಬ್ ಅನ್ನು ಮೌನವಾಗಿ ಟಿಕ್ ಮಾಡುವುದನ್ನು ಬಹಿರಂಗಪಡಿಸುತ್ತದೆ.


ತಜ್ಞರು ಈ ಅದ್ಭುತವಾದ ಮುಂದುವರಿದ ಇಮೇಜಿಂಗ್ ತಂತ್ರಗಳನ್ನು ದೋಷರಹಿತವಾಗಿ ಬಳಸುತ್ತಾರೆ. ಅವರು ಹಠಾತ್ ಮಾರಕ ಹೃದಯಾಘಾತದಿಂದ ಬಳಲುತ್ತಿರುವ ನಿಮ್ಮ ನಿಖರವಾದ ಗಣಿತದ ಅಪಾಯವನ್ನು ಲೆಕ್ಕ ಹಾಕುತ್ತಾರೆ. ಈ ನಿರಾಕರಿಸಲಾಗದ ದೃಶ್ಯ ಪುರಾವೆಯು ಮೊಂಡುತನದ ರೋಗಿಗಳು ಅಂತಿಮವಾಗಿ ತಮ್ಮ ದೈನಂದಿನ ಸ್ಟ್ಯಾಟಿನ್ ಔಷಧಿಗಳನ್ನು ವಿಶ್ವಾಸಾರ್ಹವಾಗಿ ನುಂಗಲು ಪ್ರೇರೇಪಿಸುತ್ತದೆ.

**ಆಧುನಿಕ ವೈದ್ಯಕೀಯ ಕಣ್ಗಾವಲು ವ್ಯವಸ್ಥೆಗಳನ್ನು ಮರು ವ್ಯಾಖ್ಯಾನಿಸುವುದು:** ದಿನನಿತ್ಯದ ಕೊಲೊನೋಸ್ಕೋಪಿಗಳು ಹೆಚ್ಚು ಅಪಾಯಕಾರಿಯಾದ ಕ್ಯಾನ್ಸರ್ ಪೂರ್ವದ ಪಾಲಿಪ್‌ಗಳನ್ನು ನಿಖರವಾಗಿ ಪತ್ತೆ ಮಾಡುತ್ತವೆ. ಶಸ್ತ್ರಚಿಕಿತ್ಸಕರು ಮಾಂಸಲ ಬೆಳವಣಿಗೆಗಳನ್ನು ಮಾರಕ ಮಾರಕ ಗೆಡ್ಡೆಗಳಾಗಿ ರೂಪಾಂತರಗೊಳ್ಳುವ ಮೊದಲು ಆಕ್ರಮಣಕಾರಿಯಾಗಿ ಕತ್ತರಿಸುತ್ತಾರೆ. ಈ ಸರಳ ತಡೆಗಟ್ಟುವ ವಿಧಾನವು ಭೌತಿಕವಾಗಿ ಮಾರಕ ಬೆದರಿಕೆಯನ್ನು ಸಂಪೂರ್ಣವಾಗಿ ತೆಗೆದುಹಾಕುತ್ತದೆ. ಈ ಹೆಚ್ಚು ಅನಾನುಕೂಲಕರ ಸ್ಕ್ರೀನಿಂಗ್ ಅನ್ನು ಬಿಟ್ಟುಬಿಡುವುದು ನಂತರ ಸುರಕ್ಷಿತವಾಗಿ ಸಂಪೂರ್ಣ ವಿಪತ್ತನ್ನು ಆಹ್ವಾನಿಸುತ್ತದೆ.

ಸುಧಾರಿತ ಪೂರ್ಣ-ದೇಹದ ಮ್ಯಾಗ್ನೆಟಿಕ್ ರೆಸೋನೆನ್ಸ್ ಇಮೇಜಿಂಗ್ ಸಣ್ಣ ಗುಪ್ತ ಗೆಡ್ಡೆಗಳನ್ನು ಸುಂದರವಾಗಿ ಪತ್ತೆ ಮಾಡುತ್ತದೆ. ಮಿಲಿಮೀಟರ್ ಗಾತ್ರದ ಶ್ವಾಸಕೋಶದ ದ್ರವ್ಯರಾಶಿಯನ್ನು ಕಂಡುಹಿಡಿಯುವುದರಿಂದ ಶಸ್ತ್ರಚಿಕಿತ್ಸಕರು ಅದನ್ನು ಸ್ವಚ್ಛವಾಗಿ ಹೊರತೆಗೆಯಲು ಅನುವು ಮಾಡಿಕೊಡುತ್ತದೆ. ಕ್ಯಾನ್ಸರ್ ನಿಮ್ಮ ದುರ್ಬಲವಾದ ದುಗ್ಧರಸ ವ್ಯವಸ್ಥೆಗೆ ಎಂದಿಗೂ ಹರಡುವುದಿಲ್ಲ. ಆಕ್ರಮಣಕಾರಿ ಆರಂಭಿಕ ಕಣ್ಗಾವಲು ರೋಗವು ದೈಹಿಕವಾಗಿ ವೇಗವನ್ನು ಪಡೆಯುವ ಮೊದಲು ಅದನ್ನು ಸಂಪೂರ್ಣವಾಗಿ ನಾಶಪಡಿಸುತ್ತದೆ.

**ಆರಂಭಿಕ ಹಸ್ತಕ್ಷೇಪದ ಮೂಲಕ ಅರಿವಿನ ಆರೋಗ್ಯವನ್ನು ರಕ್ಷಿಸುವುದು:** ಸ್ಮರಣಶಕ್ತಿಯ ನಷ್ಟ ಕಾಣಿಸಿಕೊಳ್ಳುವ ದಶಕಗಳ ಮೊದಲೇ ಬುದ್ಧಿಮಾಂದ್ಯತೆಯು ಭೌತಿಕ ಮೆದುಳನ್ನು ಅಕ್ಷರಶಃ ನಾಶಪಡಿಸುತ್ತದೆ. ವಿಷಕಾರಿ ಪ್ರೋಟೀನ್ ಪ್ಲೇಕ್‌ಗಳು ಸೂಕ್ಷ್ಮವಾದ ನರಕೋಶಗಳನ್ನು ನಿಧಾನವಾಗಿ ಸದ್ದಿಲ್ಲದೆ ಕತ್ತು ಹಿಸುಕುತ್ತವೆ. ಆರಂಭಿಕ ಅರಿವಿನ ತಪಾಸಣೆಯು ಈ ನಂಬಲಾಗದಷ್ಟು ಸೂಕ್ಷ್ಮವಾದ ಸಂಸ್ಕರಣಾ ವಿಳಂಬಗಳನ್ನು ಸುರಕ್ಷಿತವಾಗಿ ಪತ್ತೆ ಮಾಡುತ್ತದೆ. ನರವೈಜ್ಞಾನಿಕ ಕುಸಿತವನ್ನು ಪತ್ತೆಹಚ್ಚುವುದರಿಂದ ವೈದ್ಯರು ತಕ್ಷಣವೇ ಶಕ್ತಿಯುತವಾದ ನರರಕ್ಷಣಾತ್ಮಕ ಔಷಧಿಗಳನ್ನು ನಿಯೋಜಿಸಲು ಅನುವು ಮಾಡಿಕೊಡುತ್ತದೆ.

ದೈಹಿಕ ವ್ಯಾಯಾಮವು ಮೆದುಳನ್ನು ಸಂಪೂರ್ಣವಾಗಿ ಹೊಸ ನರ ಮಾರ್ಗಗಳನ್ನು ಆಕ್ರಮಣಕಾರಿಯಾಗಿ ಉತ್ಪಾದಿಸುವಂತೆ ಒತ್ತಾಯಿಸುತ್ತದೆ. ಭಾರವಾದ ತೂಕವನ್ನು ಎತ್ತುವ ರೋಗಿಗಳು ತಮ್ಮ ಮಾನಸಿಕ ತೀಕ್ಷ್ಣತೆಯನ್ನು ಗಮನಾರ್ಹವಾಗಿ ಹೆಚ್ಚು ಕಾಲ ಉಳಿಸಿಕೊಳ್ಳುತ್ತಾರೆ. ಈ ಅರಿವಿನ ಮೀಸಲು ನಿರ್ಮಿಸುವುದು ಭವಿಷ್ಯದ ನರವೈಜ್ಞಾನಿಕ ಕೊಳೆಯುವಿಕೆಯ ವಿರುದ್ಧ ಅದೃಶ್ಯ ಜೈವಿಕ ಗುರಾಣಿಯನ್ನು ಒದಗಿಸುತ್ತದೆ. ಬಲವಾದ ಸ್ನಾಯುಗಳು ವಯಸ್ಸಾದ ಮನಸ್ಸನ್ನು ರಕ್ಷಿಸುತ್ತವೆ.



**ಉರಿಯೂತದ ಗುರುತುಗಳಿಗಾಗಿ ಕರುಳಿನ ಸೂಕ್ಷ್ಮಜೀವಿಗಳನ್ನು ಪರೀಕ್ಷಿಸುವುದು:** ನಿಮ್ಮ ಜೀರ್ಣಾಂಗ ವ್ಯವಸ್ಥೆಯು ನಿಮ್ಮ ಬೃಹತ್ ರೋಗನಿರೋಧಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿಯಂತ್ರಿಸುತ್ತದೆ. ಲಕ್ಷಾಂತರ ಸೂಕ್ಷ್ಮ ಬ್ಯಾಕ್ಟೀರಿಯಾಗಳು ನಿಮ್ಮ ಮೂಲ ಶಾರೀರಿಕ ಉರಿಯೂತವನ್ನು ಸಂಪೂರ್ಣವಾಗಿ ನಿರ್ದೇಶಿಸುತ್ತವೆ. ತೀವ್ರವಾಗಿ ಅಸಮತೋಲಿತ ಕರುಳಿನ ಸೂಕ್ಷ್ಮಜೀವಿಯು ತೀವ್ರವಾದ ಸ್ವಯಂ ನಿರೋಧಕ ಕಾಯಿಲೆಗಳನ್ನು ಆಕ್ರಮಣಕಾರಿಯಾಗಿ ನಡೆಸುತ್ತದೆ. ಈ ಹೆಚ್ಚು ಸಂಕೀರ್ಣವಾದ ಬ್ಯಾಕ್ಟೀರಿಯಾದ ಪರಿಸರ ವ್ಯವಸ್ಥೆಯನ್ನು ಸುರಕ್ಷಿತವಾಗಿ ಡಿಕೋಡ್ ಮಾಡಲು ವೈದ್ಯರು ನಿಮ್ಮ ಮಲ ಮಾದರಿಗಳನ್ನು ವಿಶ್ಲೇಷಿಸುತ್ತಾರೆ.

ಉದ್ದೇಶಿತ ಪ್ರೋಬಯಾಟಿಕ್‌ಗಳನ್ನು ಬಳಸಿಕೊಂಡು ಜೀರ್ಣಾಂಗವ್ಯೂಹವನ್ನು ಪುನಃ ತುಂಬಿಸುವುದರಿಂದ ಹಾನಿಗೊಳಗಾದ ಕರುಳಿನ ಒಳಪದರವು ತ್ವರಿತವಾಗಿ ಗುಣವಾಗುತ್ತದೆ. ಸೂಕ್ಷ್ಮದರ್ಶಕ ಕೊಳಾಯಿಗಳನ್ನು ಸರಿಪಡಿಸುವುದರಿಂದ ಅಪಾಯಕಾರಿ ವಿಷಗಳು ನಿಮ್ಮ ರಕ್ತಪ್ರವಾಹಕ್ಕೆ ನೇರವಾಗಿ ಸೋರಿಕೆಯಾಗುವುದನ್ನು ತಡೆಯುತ್ತದೆ. ಈ ಅದ್ಭುತ ಜೈವಿಕ ಹಸ್ತಕ್ಷೇಪವು ದೀರ್ಘಕಾಲದ ವ್ಯವಸ್ಥಿತ ಕಾಯಿಲೆಗಳು ಎಂದಿಗೂ ಬೆಳೆಯದಂತೆ ಸಕ್ರಿಯವಾಗಿ ತಡೆಯುತ್ತದೆ. ಕರುಳು ಎಲ್ಲವನ್ನೂ ನಿಯಂತ್ರಿಸುತ್ತದೆ.

**ಗೆಡ್ಡೆಗಳನ್ನು ಪತ್ತೆಹಚ್ಚಲು ಸುಧಾರಿತ ಚಿತ್ರಣವನ್ನು ಬಳಸುವುದು:** ಸಣ್ಣ ಸ್ತನ ಅಸಹಜತೆಗಳನ್ನು ಮ್ಯಾಮೊಗ್ರಾಮ್‌ಗಳು ದೋಷರಹಿತವಾಗಿ ಪತ್ತೆ ಮಾಡುತ್ತವೆ. ಆಕ್ರಮಣಕಾರಿ ಕಾರ್ಸಿನೋಮಗಳಿಗೆ ಮುಂಚಿತವಾಗಿ ಹೆಚ್ಚಾಗಿ ಕಂಡುಬರುವ ಸೂಕ್ಷ್ಮ ಕ್ಯಾಲ್ಸಿಯಂ ನಿಕ್ಷೇಪಗಳನ್ನು ಡಿಜಿಟಲ್ ಯಂತ್ರವು ಗುರುತಿಸುತ್ತದೆ. ಶೂನ್ಯ ಹಂತದಲ್ಲಿ ಜೀವಕೋಶದ ರೂಪಾಂತರವನ್ನು ಹಿಡಿಯುವುದು ಇಂದು ಸಂಪೂರ್ಣ ಬದುಕುಳಿಯುವಿಕೆಯನ್ನು ಖಾತರಿಪಡಿಸುತ್ತದೆ. ಸ್ಕ್ರೀನಿಂಗ್ ಪ್ರಕ್ರಿಯೆಯನ್ನು ತಪ್ಪಿಸುವುದರಿಂದ ಸಣ್ಣ ದ್ರವ್ಯರಾಶಿಯು ಮಾರಕ ದೈತ್ಯನಾಗಲು ಅನುವು ಮಾಡಿಕೊಡುತ್ತದೆ.

ಕಡಿಮೆ-ಡೋಸ್ ಕಂಪ್ಯೂಟೆಡ್ ಟೊಮೊಗ್ರಫಿ ಸ್ಕ್ಯಾನ್‌ಗಳು ಹಿಂದಿನ ಭಾರೀ ಧೂಮಪಾನಿಗಳ ಸೂಕ್ಷ್ಮ ಶ್ವಾಸಕೋಶಗಳನ್ನು ಸಂಪೂರ್ಣವಾಗಿ ನಕ್ಷೆ ಮಾಡುತ್ತವೆ. ಈ ಯಂತ್ರವು ಗುಪ್ತ ಗಂಟುಗಳನ್ನು ಸುರಕ್ಷಿತವಾಗಿ ಬಹಿರಂಗಪಡಿಸುತ್ತದೆ. ಆರಂಭಿಕ ಶ್ವಾಸಕೋಶದ ಕ್ಯಾನ್ಸರ್ ಅನ್ನು ಕಂಡುಹಿಡಿಯುವುದರಿಂದ ಶಸ್ತ್ರಚಿಕಿತ್ಸೆಯ ಮುನ್ನರಿವು ಅಸಾಧ್ಯದಿಂದ ತಕ್ಷಣವೇ ಗುಣಪಡಿಸಬಹುದಾದ ಸ್ಥಿತಿಗೆ ಬದಲಾಗುತ್ತದೆ. ದೃಶ್ಯ ದತ್ತಾಂಶವು ಸಾವಿನ ವಿರುದ್ಧ ನಮ್ಮ ಅತ್ಯಂತ ಶಕ್ತಿಶಾಲಿ ತಡೆಗಟ್ಟುವ ಅಸ್ತ್ರವಾಗಿ ಉಳಿದಿದೆ.

**ಆಳವಾದ ವೈದ್ಯ-ರೋಗಿಯ ವೈದ್ಯಕೀಯ ಸಂಬಂಧಗಳನ್ನು ನಿರ್ಮಿಸುವುದು:** ವೈದ್ಯಕೀಯ ಯಶಸ್ಸನ್ನು ಸಂಪೂರ್ಣವಾಗಿ ನಂಬಿಕೆ ಮುನ್ನಡೆಸುತ್ತದೆ. ಸಮರ್ಪಿತ ಪ್ರಾಥಮಿಕ ಆರೈಕೆ ವೈದ್ಯರನ್ನು ಹೊಂದಿರುವುದು ನಿಮ್ಮ ಬದುಕುಳಿಯುವ ಸಾಧ್ಯತೆಗಳನ್ನು ತೀವ್ರವಾಗಿ ಬದಲಾಯಿಸುತ್ತದೆ. ಅವರು ಸತತ ಹಲವು ವರ್ಷಗಳಲ್ಲಿ ನಿಮ್ಮ ಸೂಕ್ಷ್ಮ ಚಯಾಪಚಯ ಬದಲಾವಣೆಗಳನ್ನು ಟ್ರ್ಯಾಕ್ ಮಾಡುತ್ತಾರೆ. ಈ ದೀರ್ಘಕಾಲೀನ ವೈದ್ಯಕೀಯ ಪರಿಚಿತತೆಯು ಅಪಾಯಕಾರಿ ಶಾರೀರಿಕ ವಿಚಲನಗಳನ್ನು ತಕ್ಷಣವೇ ಗುರುತಿಸಲು ಅವರಿಗೆ ಅನುವು ಮಾಡಿಕೊಡುತ್ತದೆ. ಸ್ಥಿರತೆಯು ರೋಗವನ್ನು ಸಕ್ರಿಯವಾಗಿ ತಡೆಯುತ್ತದೆ.

ಮುಕ್ತ ಸಂವಹನವು ಕುರುಡಾಗಿಸುವ ವೈದ್ಯಕೀಯ ಭಯವನ್ನು ಸಂಪೂರ್ಣವಾಗಿ ತೆಗೆದುಹಾಕುತ್ತದೆ. ರೋಗಿಯು ತಮ್ಮ ಗುಪ್ತ ಆಹಾರಕ್ರಮದ ಹೋರಾಟಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾರೆ. ವೈದ್ಯರು ಯಾವುದೇ ಕಠಿಣ ತೀರ್ಪು ನೀಡದೆ ತಡೆಗಟ್ಟುವ ತಂತ್ರವನ್ನು ಸಂಪೂರ್ಣವಾಗಿ ಸರಿಹೊಂದಿಸುತ್ತಾರೆ. ಈ ಪ್ರಬಲ ವೈದ್ಯಕೀಯ ಮೈತ್ರಿ ಇಂದು ಸಂಪೂರ್ಣವಾಗಿ ತಪ್ಪಿಸಬಹುದಾದ ದೀರ್ಘಕಾಲದ ಕಾಯಿಲೆಗಳ ವಿರುದ್ಧ ತೂರಲಾಗದ ಜೈವಿಕ ಗುರಾಣಿಯನ್ನು ರೂಪಿಸುತ್ತದೆ.




## ಕುಶಾಲನಗರದ ಕಾವೇರಿ ನಿಸರ್ಗಧಾಮ

ಸುತ್ತಲೂ ಹಾಸು ಸುತ್ತಿದಂತೆ ಹರಿದ ಕಾವೇರಿ ನದಿ, ನಡುವೆ ನಡುಗಡ್ಡೆ, ಆಕಾಶ ಚುಂಬಿಸುವಂತೆ ಬಿದಿರಿನ ಮೆಳೆಗಳ ಗುಂಪು ಅಲ್ಲಲ್ಲಿ ಬೃಹದಾಕಾರದಲ್ಲಿ ಬೆಳೆದು ನಿಂತ ವಿವಿಧ ಜಾತಿಯ ಮರಗಳು. ಒಳ ಹೊಕ್ಕರೆ ಕೆಲವು ಸಲ ಸೂರ್ಯನೇ ಕಾಣದಷ್ಟು ದಟ್ಟವಾಗಿ ಹೆಣೆದುಕೊಂಡ ಬಳ್ಳಿಗಳು, ಸಂಚರಿಸಲು ಸುತ್ತು ಬಳಸಿನ ದಾರಿಗಳು. ಕಬ್ಬಿಣದ ಮುಳ್ಳುಬೇಲಿಯ ಒಳಗಡೆ ಜಿಂಕೆಯ ಹಿಂಡು, ಮೊಲಗಳ ಗುಂಪು. ಮನಕ್ಕೆ ಮುದವನ್ನು ನೀಡುವ ಆನೆ ಸವಾರಿ.

ಕಾಡನ್ನು ಹೋಲುವ ಈ ಸ್ಥಳಕ್ಕೆ ಬರಬೇಕಾದರೆ ನದಿಯನ್ನು ದಾಟಲು ನೀರಿಗಿಳಿಯಬೇಕಾಗಿಲ್ಲ. ಉಕ್ಕಿನಿಂದ ಬಿಗಿದು ಕಟ್ಟಿದ ಮನಮೋಹಕವಾದ ತೂಗುಸೇತುವೆ ಇದೆ. ಅದರ ಮೂಲಕ ಬರುವಾಗ ತೂಗಾಡುವ ರೋಮಾಂಚಕಾರಿಯಾದ ಅವಿಸ್ಮರಣೀಯ ಅನುಭವ. ಸುತ್ತಲೂ ಕಣ್ಣಿಗೆ ಕಾಣುವ ಹಚ್ಚ ಹಸಿರು. ಇದು ಕರ್ನಾಟಕದ ಕಾಶ್ಮೀರವೆನಿಸಿದ ಕೊಡಗು ಜಿಲ್ಲೆಯ ಮಡಿಕೇರಿ ಕುಶಾಲನಗರಗಳ ನಡುವೆ ಇರುವ ಕಾವೇರಿ ನಿಸರ್ಗಧಾಮದ ನೈಜ ಚಿತ್ರಣ.

ಈ ನಿಸರ್ಗಧಾಮವು ಕುಶಲನಗರದಿಂದ ಮಡಿಕೇರಿಗೆ ಹೋಗುವ ದಾರಿಯಲ್ಲಿ 2-3 ಕಿ.ಮೀ. ದೂರದಲ್ಲಿದೆ. ಅರಣ್ಯ ಇಲಾಖೆ ಈ ಸ್ಥಳವನ್ನು 1989ರಲ್ಲಿ ತನ್ನ ಸುಪರ್ದಿಗೆ ತೆಗೆದುಕೊಂಡಿತು. ಕಾವೇರಿ ನದಿ ಇಲ್ಲಿ ಕವಲಾಗಿ ಹರಿದು ದ್ವೀಪವನ್ನು ನಿರ್ಮಿಸಿದೆ. ಇದು 65 ಎಕರೆ ವಿಸ್ತೀರ್ಣ ಹೊಂದಿದೆ. ನದಿಯ ದಡದಲ್ಲಿರುವುದರಿಂದ ಇದಕ್ಕೆ ಹಾವೇರಿ ನಿಸರ್ಗಧಾಮವೆಂದು ಹೆಸರು.

ನಿಸರ್ಗಧಾಮದ ಪ್ರವೇಶಕ್ಕೆ ಪ್ರವೇಶಧನವಿದೆ. ಉದ್ದವಾದ ತೂಗುಸೇತುವೆಯ ಮೂಲಕವೇ ಒಳಗೆ ಹೋಗಬೇಕು. ಕೆಳಗೆ ಹರಿಯುತ್ತಿರುವ ಕಾವೇರಿ ನದಿಯಲ್ಲಿ ದೋಣಿವಿಹಾರಕ್ಕೂ ಅವಕಾಶವಿದೆ. ನದಿ ದಂಡೆಯ ಮೇಲೆ ಕಟ್ಟಿಗೆಯಿಂದ ಮಾಡಿದ ರೆಸಾರ್ಟ್ ಮಾದರಿಯ ವಸತಿ ನಿಲಯಗಳಿವೆ. ಹೊರನೋಟಕ್ಕವು ಕಟ್ಟಿಗೆ ಮನೆಗಳಂತೆ ಕಂಡರೂ ಒಳಗೆ ವೈಭವಪೂರ್ಣವಾಗಿವೆ. ಈ ವಸತಿ ನಿಲಯಗಳ ಕಾರಿಡಾರಿನಲ್ಲಿ ನಿಂತರೆ ಜುಳು ಜುಳು ಹರಿಯುವ ನದಿ. ನಿಶ್ಯಬ್ದವನ್ನು ಬೇದಿಸಿ ಇಂಪು ನೀಡುವ ನೂರಾರು ಬಗೆಯ ಹಕ್ಕಿಗಳ ಇಂಚರದ ಧ್ವನಿ ಕೇಳಬಹುದು.

ಈ ಬಿದಿರಿನಿಂದ ಮಾಡಿದ ಎತ್ತರವಾದ ವೀಕ್ಷಣಾ ಅಟ್ಟಗಳು, ಹುಲ್ಲಿನಿಂದ ಮಾಡಿದ ವಿಶ್ರಾಂತಿ ಸ್ಥಳಗಳು ಮನಕ್ಕೆ ಮುದ ನೀಡುತ್ತವೆ. ಗದ್ದಲ, ಗೊಂದಲಗಳಿಲ್ಲದೆ ತನ್ನ ಆಕರ್ಷಣೆಯನ್ನು ಈ ನಿಸರ್ಗಧಾಮವು ಉಳಿಸಿಕೊಂಡಿದೆ. ನಿತ್ಯವೂ ಇಲ್ಲಿಗೆ ಬರುವ ಪ್ರವಾಸಿಗರಿಂದ ಹೊತ್ತೇರುತ್ತಿದ್ದಂತೆ ಇದು ರಂಗೇರುತ್ತದೆ.

ಒಂದು ದಿನದ ಪ್ರವಾಸಕ್ಕೆ ಇದು ಅಪ್ಯಾಯಮಾನವಾದ ಅನುಭವ ನೀಡುವ ಸ್ಥಳವಾಗಿದೆ. ಮಡಿಕೇರಿ ಕಡೆಗೆ ಹೋದರೆ ಈ ನಿಸರ್ಗಧಾಮವನ್ನು ನೋಡದೇ ಬರಬೇಡಿ. ಸ್ವಲ್ಪ ದೂರದಲ್ಲಿ ಆನೆ ಸಾಕುವ ದುಬಾರೆ. ಮತ್ತೊಂದೆಡೆ ಟಿಬೆಟಿಯನ್ನರ ಸ್ವರ್ಣಮಂದಿರವುಳ್ಳ ಬೈಲಕುಪ್ಪೆಯೂ ಇದೆ. ಪ್ರವಾಸ ಮನಸ್ಸಿಗೆ ಉಲ್ಲಾಸ ತರುತ್ತದೆ. ನಗು ಮತ್ತು ಸಂತೋಷ ಸ್ವಾಭಾವಿಕವಾಗಿ ಮೂಡುತ್ತದೆ. ಕಾವೇರಿಯ ವಿಹಂಗಮ ನೋಟ, ಹಸಿರು ಸಿರಿವನ, ತಂಪಾದ ವಾತಾವರಣ, ಕೊಡಗಿನ ನಾನಾ ಸಂಸ್ಕೃತಿಯ ನೆಲ, ಪ್ರಾಣಿ ಸಂಕುಲದ ಚಲನ ವಲನಗಳ ಕಾವೇರಿ ನಿಸರ್ಗಧಾಮ, ಕುಶಾಲನಗರವನ್ನು ನೋಡುವುದೆ ಚಂದ

**- ರಮೇಶ ನಾಯ್ಕ,** ಉಪ್ಪುಂದ, ಬೈಂದೂರು

## ಭಾರ

ಬೆನ್ನಿನ ಮೇಲೆ ಹೊತ್ತ ಭಾರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿತ್ತು. ಕಾಲುಗಳು ನಡುಗುತ್ತಿವೆ ಉಸಿರಾಟ ಏರುಪೇರಾಗುತ್ತಿದೆ ಆದರೂ ಅವನು ನಿಲ್ಲಲಿಲ್ಲ. ಹೆಚ್ಚು ಭಾರ ಹೊತ್ತಷ್ಟು ಸಂಪಾದನೆ ಹೆಚ್ಚು.ಇಲ್ಲ ಇನ್ನೂ ಸ್ವಲ್ಪ ದೂರ ನಡೆಯಬೇಕು, ಎಂದು ತನ್ನ ಮನಸ್ಸಿಗೆ ಹೇಳಿಕೊಂಡ. ಅವನ ಬೆನ್ನಿನ ಮೇಲೆ ಇದ್ದದ್ದು ಕೇವಲ ಹೊರೆ ಅಲ್ಲ. ಅದರೊಳಗೆ ಮನೆಯವರ ಬದುಕು ಇತ್ತು.

ತಾಯಿಯ ಆಸೆ, ಹೆಂಡತಿಯ ನಂಬಿಕೆ, ಮಗಳ ಮುದ್ದು ನಗು ಎಲ್ಲವೂ ಅದರಲ್ಲಿ ಸೇರಿಕೊಂಡಿದ್ದವು. ಪ್ರತಿ ಹೆಜ್ಜೆಯೂ ನೋವಿನಿಂದ ತುಂಬಿತ್ತು. ಆದರೂ ಪ್ರತಿಯೊಂದು ಹೆಜ್ಜೆಯಲ್ಲೂ ಒಂದು ಪ್ರೀತಿ ಇತ್ತು. ಅವನಿಗೆ ಗೊತ್ತು ತಾನು ಹೊತ್ತಿರುವ ಭಾರವನ್ನ ಸರಿಯಾದ ಸ್ಥಳದಲ್ಲಿ ಇಳಿಸಿದರೆ ಮಾತ್ರ, ಮನೆಯವರು ನೆಮ್ಮದಿಯಿಂದ ಉಸಿರಾಡುತ್ತಾರೆ ಎಂದು. ಅವನು ದುರ್ಬಲನಾಗಿರಬಹುದು.



ಆದರೆ ಅವನ ಹೊಣೆಗಾರಿಕೆ ಬಲವಾಗಿತ್ತು. ಕೊನೆಗೆ ಅವನು ನಿಂತು, ಆಕಾಶದ ಕಡೆ ನೋಡಿದ. ಒಂದು ನಗು ಮೂಡಿತು. ಈ ಭಾರವೇ ನನ್ನ ಶಕ್ತಿ ಎಂದು ಹೇಳಿ ಮತ್ತೆ ಮುಂದೆ ನಡೆಯಲು ಆರಂಭಿಸಿದ. ಹೆಜ್ಜೆ ದೃಢವಾಯಿತು

**- ಧೀರಜ್** ಬೆಳ್ಳಾರೆ

# ಬೊಮ್ಮೇನಹಳ್ಳಿ ಸುತ್ತ ಕಾಡಾನೆಗಳ ಹಿಂಡು ಪ್ರತ್ಯಕ್ಷ

## 28 ಆನೆಗಳ ಓಡಾಟ | ಸ್ಥಳೀಯರಲ್ಲಿ ಹೆಚ್ಚಿದ ಆತಂಕ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಅರೇಹಳ್ಳಿ ಹೋಬಳಿ ಬೊಮ್ಮೇನಹಳ್ಳಿ ಗ್ರಾಮ ಸಮೀಪ 28ಕ್ಕೂ ಹೆಚ್ಚು ಕಾಡಾನೆಗಳು ಪ್ರತ್ಯಕ್ಷವಾಗಿದ್ದು, ಸಾರ್ವಜನಿಕರು ಆತಂಕಪಡುವಂತಾಗಿದೆ. ಕಳೆದ ಮೂರು ತಿಂಗಳಿಂದ ಮೂಡಿಗೆರೆ ಭಾಗಕ್ಕೆ ತೆರಳಿದ್ದ ಆನೆಗಳು ವಾಪಾಸ್ಸಾಗಿವೆ.



ಅರೇಹಳ್ಳಿ ಹೋಬಳಿಯ ಚೀಕನಹಳ್ಳಿ, ಕುಪ್ಪಗೋಡು, ಹುನುಗನಹಳ್ಳಿ, ಬಂಡೆ. ಕೋಗೋಡು, ಮಲಸಾವರ, ಸಿರಗುರ, ಜಾಕನಹಳ್ಳಿ, ನೇರಲಮಕ್ಕಿ, ನಾಗೇನಹಳ್ಳಿ ಗಾಯಸ್ ಸಾಬ್ರು ಕಾಡು, ಹಿರಿಗದ್ದೆ, ಮುಜಾಹಿದ್ ಸಾಪ್ಕಾರ್, ಗುರಪ್ಪಗೌಡ, ಹನುಮಂತ ಅವರ ತೋಟದ ಹತ್ತಿರದ ನೆರಳಕಟ್ಟೆ, ಅನುಘಟ್ಟ, ಚಿದಾನಂದ ಅವರ ಕಾಡು ಮಡೇನಹಳ್ಳಿ (ಮಲಸಾವರ) ತೋಟ, ಕಿತ್ತಾವರ, ಬಂಡೆ ಕಿತ್ತಾವರ ಸುತ್ತಮುತ್ತ ಭುವನೇಶ್ವರಿ, ಓಲ್ಡ್ ಬೆಲ್ಟ್, ಓಲ್ಡ್ ಬೆಲ್ಟ್-1 ಗುಂಪಿಗೆ ಸೇರಿದ ಕಾಡಾನೆಗಳು ಕಂಡು ಬಂದಿದ್ದರೆ, ಇವುಗಳ ಪೈಕಿ 28ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಬೊಮ್ಮೇನಹಳ್ಳಿ ಗ್ರಾಮದ ಸಮೀಪ ಶನಿವಾರ ರಾತ್ರಿ ಆಹಾರಕ್ಕಾಗಿ ಅಲೆದಾಡಿವೆ. ಅಂತಿಮವಾಗಿ ಭಾನುವಾರ ಬೆಳಿಗ್ಗೆ ಬೊಮ್ಮೇನಹಳ್ಳಿ ಸಮೀಪದ ಡಿಸಿ ತೋಟದಲ್ಲಿ ವಿಶ್ರಾಂತಿಗಾಗಿ ಬೀಡು ಬಿಟ್ಟಿದ್ದವು. ಈ ಸಂದರ್ಭದಲ್ಲಿ ಕಾಡಾನೆಗಳು ಸಮೀಪದ ಗೌರಿ ಕೆರೆಯಲ್ಲಿ ನೀರು ಕುಡಿಯುವುದರ ಮೂಲಕ ದಾಹ ನೀಗಿಸಿಕೊಂಡು ಮತ್ತದೇ ತೋಟಕ್ಕೆ ತೆರಳಿ ಸೋಮವಾರವು ಅಲ್ಲಿಯೇ ಬೀಡು ಬಿಟ್ಟಿವೆ.

ಸೋಮವಾರ ಪ್ರತ್ಯೇಕವಾಗಿ ಇನ್ನೂ ಮೂರು ಕಾಡಾನೆಗಳು ಕಾನಹಳ್ಳಿ ಫಾರೆಸ್ಟ್ ಲಕ್ಷ್ಮಿಪುರದಲ್ಲಿ ಕಂಡು ಬಂದಿದ್ದು, ಜನರು ಆತಂಕ ಪಡುವಂತಾಗಿದೆ. ಜೊತೆಗೆ ಇನ್ನೊಂದು ಒಂಟಿ ಕಾಡಾನೆಯು ಸಹ ಕಿತ್ತಾವರ ಎಸ್ಟೇಟ್‌ನ ಬಿ ಬ್ಲಾಕ್‌ನಲ್ಲಿ ಕಾಣಿಸಿಕೊಂಡು ಜನರಲ್ಲಿ ಮತ್ತು ಕಾರ್ಮಿಕರಲ್ಲಿ ಆತಂಕ ಸೃಷ್ಟಿಸಿದೆ. ಇಟಿಎಫ್ ಸಿಬ್ಬಂದಿ ಕಾಡಾನೆಗಳ ಸಂಚಾರವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರೂ ಅವರ ಕಣ್ತಪ್ಪಿಸಿ ಆನೆಗಳ ಹಿಂಡು ಕಾಡು ಅಥವಾ ತೋಟದೊಳಕ್ಕೆ ತೆರಳಿ ಬೆಳೆ ನಷ್ಟ ಮಾಡುತ್ತಿವೆ. ಆದರೆ ಕಾಡಾನೆಗಳ ಚಲನವಲನ ಗಮನಿಸುತ್ತಿರುವ ಇಟಿಎಫ್ ಸಿಬ್ಬಂದಿ ಇಲ್ಲಿರುವ ಆನೆಗಳ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ತಿಳಿಸಿ, ಆನೆಗಳು ಓಡಾಡುವ ಸ್ಥಳದಲ್ಲಿ ರಾತ್ರಿ ಸಮಯದಲ್ಲಿ ಸಾರ್ವಜನಿಕರು ಯಾರೂ ಓಡಾಡಬಾರದೆಂದು ಧ್ವನಿವರ್ಧಕದ ಮೂಲಕ ಎಚ್ಚರಿಕೆ ನೀಡಲಾಗುತ್ತಿದೆ.

**ತೋಟದ ಕೆಲಸಕ್ಕೆ ಹೋಗಲು ಹಿಂದೇಟು:** ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳಿಂದಾಗಿ ಜನರು ತಮ್ಮ ಜಮೀನು, ತೋಟ ಗಳತ್ತ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಯಾವಾಗ ಕಾಡಾನೆಗಳು ತೋಟ ಹಾಗು ಮನೆಗಳ ಸಮೀಪ ಪ್ರತ್ಯಕ್ಷವಾಗುತ್ತವೆ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಕಾಡಾನೆಗಳನ್ನು ಸಾಧ್ಯವಾದಷ್ಟು ಬೇಗ ಕಾಡಿಗಟ್ಟಿ ಮಲೆನಾಡಿಗರು ನೆಮ್ಮದಿಯಾಗಿ ಜೀವನ ನಡೆಸಲು ಅನುವು ಮಾಡಿ ಕೊಡಬೇಕೆಂದು ಅರಣ್ಯ ಇಲಾಖೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

**ಮೂರು ತಂಡವಾಗಿ ಆನೆಗಳ ಓಡಾಟ:** ವಲಯ ಅರಣ್ಯಾಧಿಕಾರಿ ಯತೀಶ್ ಅವರು ಮಾತನಾಡಿ, ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಭುವನೇಶ್ವರಿ, ಓಲ್ಡ್ ಬೆಲ್ಟ್, ಓಲ್ಡ್ ಬೆಲ್ಟ್-1 ಗುಂಪಿಗೆ ಸೇರಿದ 48 ಕಾಡಾನೆಗಳಿದ್ದು, ಅವುಗಳಲ್ಲಿ ಒಂದು ಹಾಗು ಮೂರು ಕಾಡಾನೆಗಳು ಪ್ರತ್ಯೇಕವಾಗಿ ಓಡಾಡುತ್ತಿವೆ.

ಇನ್ನುಳಿದ ಆನೆಗಳು ಪ್ರತ್ಯೇಕ ಗುಂಪುಗಳಲ್ಲಿ ಸಮೀಪದ ಗ್ರಾಮಗಳ ಆಸುಪಾಸಿನ ತೋಟ ಮತ್ತು ಕಾಡುಗಳಲ್ಲೇ ಅತ್ತಿಂದಿತ್ತ ಓಡಾಡುತ್ತಿವೆ. ಆನೆಗಳ ಚಲನವಲನ ಅರಿತು ಸಾರ್ವಜನಿಕರಿಗೆ ಮಾಹಿತಿ ನೀಡಲಾಗುತ್ತಿದೆ. ಸಾರ್ವಜನಿಕರು ಸಾಕಷ್ಟು ಎಚ್ಚರಿಕೆಯಿಂದ ಇರಬೇಕು.

# ಗ್ಯಾಸ್ ಏಜೆನ್ಸಿಗಳು ಗ್ರಾಹಕರೊಂದಿಗೆ ಸ್ಪಂದಿಸಿ

## ನಿಯಂತ್ರಣ- ಮೇಲ್ವಿಚಾರಣೆ ಸಭೆಯಲ್ಲಿ ಡಿಸಿ

• ಪ್ರಜೋದಯ ವರದಿ

**ಹಾಸನ:** ಗೃಹ ಮತ್ತು ವಾಣಿಜ್ಯ ಬಳಕೆ ಗ್ಯಾಸ್ ಸಿಲಿಂಡರ್ ಗಳನ್ನು ವಿತರಣೆ ಮಾಡುವ ಏಜೆನ್ಸಿಗಳು ಸ್ಥಳೀಯವಾಗಿ ಯಾವುದೇ ಸಮಸ್ಯೆಗಳು ಉದ್ಭವಿಸದಂತೆ ಎಚ್ಚರಿಕೆ ವಹಿಸಿ ಗ್ರಾಹಕರೊಂದಿಗೆ ಸ್ಪಂದಿಸಿ ಶಾಂತಿಯುತವಾಗಿ ನಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದ್ದಾರೆ.




ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ವಾಣಿಜ್ಯ/ಗೃಹಬಳಕೆ ಎಲ್.ಪಿ.ಜಿ. ಸಿಲಿಂಡರ್‌ಗಳ ಪೂರೈಕೆಯಲ್ಲಿ ನಿಯಂತ್ರಣ ಮತ್ತು ಮೇಲ್ವಿಚಾರಣೆ ಕುರಿತು ಸಭೆ ನಡೆಸಿ ಮಾತನಾಡಿದ ಅವರು, ವಿತರಕರು ಸರ್ಕಾರ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವಂತೆ ಸೂಚಿಸಿದರು.

ಗೃಹ ಬಳಕೆ ಮತ್ತು ವಾಣಿಜ್ಯ ಬಳಕೆ ಗ್ಯಾಸ್ ಸಿಲಿಂಡರ್‌ಗೆ ಬುಕಿಂಗ್ ಮಾಡಿದಾಗ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿಗಧಿತ ಅವಧಿಯೊಳಗೆ ಗ್ಯಾಸ್ ಸಿಲಿಂಡರ್ ಒದಗಿಸಲು ಕ್ರಮ ವಹಿಸಲು ಸೂಚಿಸಿದರಲ್ಲದೆ ದುರ್ಬಳಕೆ ಕಂಡು ಬಂದಲ್ಲಿ ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕಂಪನಿ, ವಿತರಕರು, ಬುಕ್ಕಿಂಗ್, ದಾಸ್ತಾನು ಲಭ್ಯ, ಎಷ್ಟು ಗ್ಯಾಪ್ ಇದೆ ಎಂಬುದರ ಮಾಹಿತಿಯನ್ನು ಪ್ರತಿದಿನದ ಮಾಹಿತಿ ಒದಗಿಸುವಂತೆ ಆಹಾರ ನಾಗರೀಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕರಿಗೆ ಸೂಚನೆ ನೀಡಿದರು.

ಹೆಚ್ಚುವರಿ ಪೊಲೀಸ್ ಶ್ರೀನಿಧಿ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಆಹಾರ ಮತ್ತು ನಾಗರೀಕ ಸರಬ ರಾಜು ಇಲಾಖೆ ಜಂಟಿ ನಿರ್ದೇಶಕ ಅರುಣ್ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಅನಿಲ್ ಮತ್ತು ಗ್ಯಾಸ್ ಏಜೆನ್ಸಿ ಮಾಲೀಕರು ಹಾಗೂ ಹೋಟೇಲ್ ಮಾಲೀಕರು ಇನ್ನಿತರರು ಸಭೆಯಲ್ಲಿ ಭಾಗವಹಿಸಿದ್ದರು.

## ಸೋಮವಾರದ ಕಾಫಿ ಧಾರಣೆ (50 ಕೆಜಿಗೆ)



| | |
|---|---|
| ಅರೇಬಿಕಾ ಪಾರ್ಚ್‌ಮೆಂಟ್: | 23,500 |
| ಅರೇಬಿಕಾ ಚೆರಿ : | 12,150 |
| ರೊಬಸ್ಟಾ ಪಾರ್ಚ್‌ಮೆಂಟ್: | 17,850 |
| ರೊಬಸ್ಟಾ ಚೆರಿ : | 9,150 |
| ಕಾಳು ಮೆಣಸು- | 675 |

## ಕೊಬ್ಬರಿ ಧಾರಣೆ (ಕ್ವಿಂಟಾಲ್‌ಗೆ)



| | |
|---|---|
| ಕನಿಷ್ಠ: | 30,000 |
| ಗರಿಷ್ಠ: | 32,218 |
| ಮಾದರಿ: | 31,860 |

# ಡಾ.ಜಗಜೀವನ್‌ರಾಮ್ ಆದರ್ಶ ಅನುಕರಣೀಯ

## ಶಾಸಕ ಎ.ಮಂಜು ಅಭಿಮತ

• ಪ್ರಜೋದಯ ವರದಿ

**ಅರಕಲಗೂಡು:** ಸಮಾಜ ಸುಧಾರಣೆಗೆ ಶ್ರಮಿಸಿದ ಡಾ.ಬಾಬು ಜಗಜೀವನ್‌ರಾಮ್ ಅವರ ಆದರ್ಶಗಳು ಅನುಕರಣೀಯ ಎಂದು ಶಾಸಕ ಎ. ಮಂಜು ಅವರು ಹೇಳಿದರು.

ಪಟ್ಟಣದ ದೇವರಾಜ ಅರಸು ಭವನದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಏರ್ಪಡಿಸಿದ್ದ ಮಾಜಿ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಸಿರು ಕ್ರಾಂತಿಗೆ ಶ್ರಮಿಸಿದ ಡಾ. ಜಗಜೀವನ್ ರಾಮ್ ಅವರು ಎಲ್ಲ ವರ್ಗದ ಜನರ ಶ್ರೇಯೋಭಿದ್ಧಿಗೆ ಕಾರಣರಾಗಿದ್ದರು. ಇವರ ಆದರ್ಶ ಗುಣಗಳನ್ನು ಬದುಕಿನಲ್ಲಿ ಎಲ್ಲರೂ ಅಳವಡಿಸಿಕೊಂಡು ಮುನ್ನಡೆಯಬೇಕಿದೆ ಎಂದು ಸಲಹೆ ನೀಡಿದರು.



ತಹಸೀಲ್ದಾರ್ ಕೆ.ಸಿ.ಸೌಮ್ಯ, ಪಪಂ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರವಿಕುಮಾರ್, ಸಿಡಿಪಿಒ ವೆಂಕಟೇಶ್, ಬಿಇಒ ನಾರಾಯಣ, ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

# ನಾಳೆ ದ್ವಿತೀಯ ಪಿ.ಯು.ಸಿ. ಫಲಿತಾಂಶ?

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾತುರದಿಂದ ಕಾಯುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಮಹತ್ವದ ಮಾಹಿತಿಯೊಂದನ್ನು ನೀಡಿದೆ. 2026ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶವು ಏಪ್ರಿಲ್ 8ರಂದು ಪ್ರಕಟವಾಗುವ ಎಲ್ಲಾ ಸಾಧ್ಯತೆಗಳಿವೆ ಎಂದು ಇಲಾಖೆಯ ಉನ್ನತ ಮೂಲಗಳು ತಿಳಿಸಿವೆ.



ಈ ಹಿಂದೆ ಬಿಡುಗಡೆಯಾಗಿದ್ದ ಶಿಕ್ಷಣ ಇಲಾಖೆಯ ತಾತ್ಕಾಲಿಕ ವೇಳಾಪಟ್ಟಿಯ ಪ್ರಕಾರ ಏ.7 ರಂದು ಫಲಿತಾಂಶವನ್ನು ಪ್ರಕಟಿಸಲು ನಿರ್ಧರಿಸಲಾಗಿತ್ತು. ಆದರೆ, ಕೆಲವು ಆಡಳಿತಾತ್ಮಕ ಕಾರಣಗಳು ಹಾಗೂ ಅಂತಿಮ ಹಂತದ ಸಿದ್ಧತೆಗಳ ಹಿನ್ನೆಲೆಯಲ್ಲಿ ಫಲಿತಾಂಶ ಪ್ರಕಟಣೆಯ ದಿನಾಂಕವನ್ನು ಒಂದು ದಿನ ಮುಂದೂಡಲಾಗಿದೆ ಎನ್ನಲಾಗಿದೆ.

ಫಲಿತಾಂಶವನ್ನು ಬಿಡುಗಡೆ ಮಾಡುವ ಸಂಬಂಧ ಈಗಾಗಲೇ ರಾಜ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರಾದ ಮಧು ಬಂಗಾರಪ್ಪ ಅವರಿಗೆ ಇಲಾಖೆಯ ವತಿಯಿಂದ ಅಧಿಕೃತ ಪತ್ರವನ್ನು ಬರೆಯಲಾಗಿದೆ. ಸಚಿವರ ಲಭ್ಯತೆ ಹಾಗೂ ಅವರ ಸಮಯವನ್ನು ನೋಡಿಕೊಂಡು ಏಪ್ರಿಲ್ 8 ರಂದು ಸರಿಯಾದ ಸಮಯಕ್ಕೆ ಫಲಿತಾಂಶವನ್ನು ಪ್ರಕಟಿಸಲಾಗುವುದು ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದ್ದಾರೆ.

ರಾಜ್ಯಾದ್ಯಂತ ಮಾರ್ಚ್ ತಿಂಗಳಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳಿಂದ ಸುಮಾರು 7 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಜರಾಗಿದ್ದರು. ಮೌಲ್ಯಮಾಪನ ಪ್ರಕ್ರಿಯೆಯು ಈಗಾಗಲೇ ಸಂಪೂರ್ಣವಾಗಿ ಮುಕ್ತಾಯಗೊಂಡಿದ್ದು, ಅಂಕಗಳನ್ನು ಗಣಕೀಕರಣಗೊಳಿಸುವ (ಕಂಪ್ಯೂಟರೈಸೇಶನ್) ಕಾರ್ಯವೂ ಅಂತಿಮ ಘಟ್ಟದಲ್ಲಿದೆ. ಯಾವುದೇ ರೀತಿಯ ತಾಂತ್ರಿಕ ದೋಷಗಳು ಉಂಟಾಗದಂತೆ ಎಚ್ಚರ ವಹಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ.

# ಒಳ ಮೀಸಲಾತಿ ಜಾರಿಗೆ ಒತ್ತಾಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಒಳ ಮೀಸಲಾತಿ ಯೋಜನೆಯನ್ನು ಕೂಡಲೇ ಜಾರಿಗೆ ತರಬೇಕು ಎಂದು ಮಾದಿಗ ದಂಡೂರ ಸಮಿತಿಯ ಅಧ್ಯಕ್ಷ ದಂಡೂರ ಮಂಜುನಾಥ್ ಅವರು ಒತ್ತಾಯಿಸಿದ್ದಾರೆ.



ಪಟ್ಟಣದ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ತಾಲ್ಲೂಕು ಆಡಳಿತ ವತಿಯಿಂದ ಆಯೋಜಿಸಿದ್ದ ಡಾ. ಬಾಬುಜಗಜೀವನ್ ರಾಮ್ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಬಹಿಷ್ಕರಿಸಿ ಮಾತನಾಡಿ, ಕಳೆದ 30 ವರ್ಷಗಳಿಂದ ಒಳ ಮೀಸಲಾತಿ ಯೋಜನೆಯನ್ನು ಜಾರಿಗೆ ತರದೆ ಮಾದಿಗ ಸಮಾಜಕ್ಕೆ ಅನ್ಯಾಯ ಮಾಡಿದ್ದಾರೆ. ಸರ್ಕಾರದಿಂದ ಅಂಗೀಕಾರವಾಗಿದೆ ಹಾಗೂ ರಾಜ್ಯಪಾಲರ ಅನುಮೋದನೆಯೂ ದೊರೆತಿದೆ ಎಂದರು.

ರಾಜ್ಯ ಸರ್ಕಾರ ಇದಕ್ಕೆ ಅನುಮೋದನೆ ನೀಡುತ್ತಿಲ್ಲ. ಈಗಾಗಲೇ ಜಾರಿಗೆ ತರಬೇಕಾದ ಮಾದಿಗರ ಮೀಸಲಾತಿಯನ್ನು ಜಾರಿಗೆ ತಂದಿಲ್ಲ ಇಂದಿನಿಂದಲೇ ಒಳ ಮೀಸಲಾತಿ ಜಾರಿಗೆ ತಂದರೆ ಎಲ್ಲಾ ಮಹನೀಯರ ಜನ್ಮದಿನಾಚರಣೆಯನ್ನು ಆಚರಿಸಲು ಮುಂದಾಗುತ್ತೇವೆ. ಶೇಕಡ 16ರಷ್ಟು ಒಳ ಮೀಸಲಾತಿ ಜಾರಿಯಲ್ಲಿದ್ದು, ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರಿಗೆ ಶೇಕಡ 6%ರಷ್ಟು ನೀಡಲಿ ಇನ್ನು ಉಳಿದ 9% ರಷ್ಟು ಮೀಸಲಾತಿಯನ್ನು ಬೇರೆ ಸಮುದಾಯದ ಜನರಿಗೆ ನೀಡಲಿ. ಅದರಲ್ಲೂ ನಮ್ಮ ಸಮುದಾಯದ ಜನರಿಗೆ ಬಹಳಷ್ಟು ಅನ್ಯಾಯವಾಗಿದೆ. ಆದ್ದರಿಂದ ನಮ್ಮ ಸಮುದಾಯಕ್ಕೆ ಮೊದಲು ನ್ಯಾಯ ಒದಗಿಸಿ ಕೊಡಬೇಕೆಂಬುದು ಒತ್ತಾಯ ಆಗಿದೆ ಎಂದರು.

ಮಾಜಿ ಪುರಸಭಾ ಸದಸ್ಯ ಪರಶುರಾಮ್, ಮುಖಂಡರುಗಳಾದ ನಂಜುಂಡಪ್ಪ, ಪುನೀತ್, ಗಣೇಶ್ ಮುಂತಾದವರು ಹಾಜರಿದ್ದರು.

# ಆಟೋ ಎಲ್‌ಪಿಜಿ ಪೂರೈಕೆ ಸಮಸ್ಯೆ ಬಗೆಹರಿಸಲು ಏ.10ಕ್ಕೆ ಸಭೆ

• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕದಲ್ಲಿ ಆಟೋ ಎಲ್‌ಪಿಜಿ ಪೂರೈಕೆ ಸಮಸ್ಯೆಯನ್ನು ಪರಿಹರಿಸುವ ಉದ್ದೇಶದಿಂದ ಏಪ್ರಿಲ್ 10 ರಂದು ಸಭೆ ಕರೆಯುವುದಾಗಿ ಸಚಿವ ಕೆ.ಎಚ್. ಮುನಿಯಪ್ಪ ಸೋಮವಾರ ಹೇಳಿದ್ದಾರೆ.

ಕೆಲವು ಖಾಸಗಿ ತೈಲ ಕಂಪನಿಗಳು ವಾಹನಗಳಿಗೆ ಎಲ್‌ಪಿಜಿ (ದ್ರವೀಕೃತ ಪೆಟ್ರೋಲಿಯಂ ಅನಿಲ) ಬೆಲೆಯನ್ನು ಹೆಚ್ಚಿಸಿವೆ. ಖಾಸಗಿ ಇಂಧನ ಕೇಂದ್ರಗಳಲ್ಲಿ ಬೆಲೆಗಳು ಹೆಚ್ಚಾದ ಕಾರಣ, ಹೆಚ್ಚಿನ ಜನರು ಇಂಧನ ತುಂಬಲು ಸಾರ್ವಜನಿಕ ವಲಯದ ಇಂಧನ ಕೇಂದ್ರಗಳಿಗೆ ಹೋಗುತ್ತಿದ್ದಾರೆ. ಇದರಿಂದಾಗಿ ಅಲ್ಲಿ ಸರತಿ ಸಾಲುಗಳು ಕಂಡುಬರುತ್ತವೆ ಎಂದು ಹೇಳಿದರು.

ಸೋಮವಾರ, ಆಟೋ ಚಾಲಕರ ಸಂಘಗಳ ಪ್ರತಿನಿಧಿಗಳನ್ನು ಭೇಟಿ ಮಾಡಿ ಅವರ ಸಮಸ್ಯೆಗಳನ್ನು ಸಚಿವರು ಆಲಿಸಿದರು.



ಆಟೋ ಚಾಲಕರು ಸಂಕಷ್ಟದಲ್ಲಿದ್ದಾರೆಂದು ನಮಗೆ ತಿಳಿದಿದೆ. ಕೇಂದ್ರ ಸರ್ಕಾರವು ಪ್ರತಿದಿನ ಸುಮಾರು 3,000 ಆಟೋ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪೂರೈಸುತ್ತಿದೆ. ಆದರೆ, ಖಾಸಗಿ ಪೂರೈಕೆದಾರರು ಬೆಲೆಯನ್ನು ಹೆಚ್ಚಿಸಿದ್ದಾರೆ. ಇದು ಆಟೋ ಚಾಲಕರಿಗೆ ಅನಾನುಕೂಲತೆಯನ್ನು ಉಂಟುಮಾಡುತ್ತಿದೆ. ಸಮಸ್ಯೆಯನ್ನು ಪರಿಹರಿಸಲು ನಾನು ತಕ್ಷಣ ಸಭೆ ಕರೆಯುತ್ತೇನೆ' ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆಗಳನ್ನು ಹೊಂದಿರುವ ಮುನಿಯಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸರ್ಕಾರ ಪ್ರತಿದಿನ ಸುಮಾರು 3,000 ಆಟೋ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪೂರೈಸುತ್ತದೆ. ಖಾಸಗಿ ಕಂಪನಿಗಳು ಸಹ ಸಮಾನ ಸಂಖ್ಯೆಯ ಸಿಲಿಂಡರ್‌ಗಳನ್ನು ಪೂರೈಸುತ್ತವೆ. ಖಾಸಗಿ ಕಂಪನಿಗಳು ಬೆಲೆಗಳನ್ನು ಹೆಚ್ಚಿಸಿವೆ ಎಂದು ನನಗೆ ತಿಳಿದುಬಂದಿದೆ. ನಾನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡುತ್ತೇನೆ ಎಂದು ಹೇಳಿದರು.

ಏಪ್ರಿಲ್ 10 ರಂದು ಸಭೆ ಕರೆದು ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುತ್ತೇನೆ. ಆಟೋ ಚಾಲಕರ ಜೀವನವು ಈ ಎಲ್‌ಪಿಜಿ ಸರಬರಾಜುಗಳನ್ನು ಅವಲಂಬಿಸಿದೆ. ಆದ್ದರಿಂದ ನಾನು ಆದ್ಯತೆಯ ಆಧಾರದ ಮೇಲೆ ಈ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುತ್ತೇನೆ ಎಂದು ಅವರು ಹೇಳಿದರು.

ಖಾಸಗಿ ಕಂಪನಿಗಳ ಪ್ರತಿನಿಧಿಗಳು, ಕೇಂದ್ರ, ಸರ್ಕಾರಿ ಅಧಿಕಾರಿಗಳು, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಸಂಯೋಜಕರು, ಪೊಲೀಸರು ಮತ್ತು ಹಿರಿಯ ರಾಜ್ಯ ಸರ್ಕಾರಿ ಅಧಿಕಾರಿಗಳನ್ನು ಸಹ ಸಭೆಗೆ ಕರೆಯಲಾಗುವುದು ಎಂದು ಹೇಳಿದರು.

ಅಧಿಕೃತ ಮೂಲಗಳ ಪ್ರಕಾರ, ಐಒಸಿ ಸೇರಿದಂತೆ ಪಿಎಸ್‌ಯು ನಿರ್ವಹಿಸುವ ಔಟ್‌ಲೆಟ್‌ಗಳು ಬೆಂಗಳೂರಿನಲ್ಲಿ ಆಟೋ ಎಲ್‌ಪಿಜಿಯನ್ನು ಲೀಟರ್‌ಗೆ ಸುಮಾರು ₹89.52 ಗಳಿಗೆ ಮಾರಾಟ ಮಾಡುತ್ತಿದ್ದರೆ, ಖಾಸಗಿ ಮಾರಾಟಗಾರರು ಲೀಟರ್‌ಗೆ ₹ 99 ರಿಂದ 105 ರ ನಡುವೆ ಮಾರಾಟ ಮಾಡುತ್ತಿದ್ದಾರೆ.

ಬೆಲೆಯಲ್ಲಿನ ಈ ವ್ಯತ್ಯಾಸವು ಗ್ರಾಹಕರು ಪಿಎಸ್‌ಯು ನಿರ್ವಹಿಸುವ ಆಟೋ ಎಲ್‌ಪಿಜಿ ವಿತರಣಾ ಕೇಂದ್ರಗಳ (ಎಎಲ್‌ಡಿಎಸ್) ಕಡೆಗೆ ಮುಖ ಮಾಡುವಂತೆ ಮಾಡಿದೆ.

## ಪುಸ್ತಕ ಬಹುಮಾನಕ್ಕಾಗಿ ಕೃತಿಗಳ ಆಹ್ವಾನ

**ಹಾಸನ:** ಕರ್ನಾಟಕ ಸಾಹಿತ್ಯ ಅಕಾಡೆಮಿಯು 2025ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಿದೆ. ಲೇಖಕರು/ ಪ್ರಕಾಶಕರು/ ಸಾಹಿತ್ಯಾಸಕ್ತ ಸಾರ್ವಜನಿಕರು ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-560002. ಈ ವಿಳಾಸಕ್ಕೆ ರಿಜಿಸ್ಟರ್ಡ್ ಅಂಚೆ/ ಕೊರಿಯರ್ ಮೂಲಕ ಅಥವಾ ಖುದ್ದಾಗಿ 2026ರ ಜೂನ್ 30 ರೊಳಗೆ ತಲುಪುವಂತೆ ಕಳುಹಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ಅಕಾಡೆಮಿಯ ವೆಬ್ ಸೈಟ್ www.sahithy-aacademy.karnataka.gov.in ಸಂಪರ್ಕಿಸಬಹುದಾಗಿದೆ.

# ಸದ್ಯದಲ್ಲೇ ಬೇಲೂರು ತಾ.ಪಂ. ಮಳಿಗೆಗಳ ಹರಾಜು

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕು ಪಂಚಾಯಿತಿಗೆ ಸೇರಿದ ಒಟ್ಟು 20 ಮಳಿಗೆಯಲ್ಲಿ ಸದ್ಯ 16 ಮಳಿಗೆಗಳು ಅವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ ಕಾನೂನಿನ ಅನ್ವಯ ವಾಣಿಜ್ಯ ಮಳಿಗೆಗಳನ್ನು ಇ-ಟೆಂಡರ್ ಮೂಲಕ ಬಹಿರಂಗ ಹರಾಜುಗೊಳಿಸಲಾಗುತ್ತದೆ ಎಂದು ಬೇಲೂರು ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಸತೀಶ್ ಕುಮಾರ್ ತಿಳಿಸಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಪಟ್ಟಣದ ಹೃದಯ ಭಾಗದ ತಾಲೂಕು ಪಂಚಾಯಿತಿಗೆ ವರಮಾನ ಬರಲೆಂದು 20 ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಯಿತು. ಅದರಲ್ಲಿ 16 ವಾಣಿಜ್ಯ ಮಳಿಗೆಗಳು ಅವಧಿ ಪೂರ್ಣವಾಗಿ ಮೂರು ವರ್ಷ ಕಳೆದಿತ್ತು. ಕೆಲ ತಾಂತ್ರಿಕ ಹಿನ್ನೆಲೆಯಲ್ಲಿ ಹರಾಜು ನಡೆಸುವ ಪ್ರಕ್ರಿಯೆ ತಡವಾಗಿತ್ತು. ಸದ್ಯ ನಾವು ಬಂದ ಬಳಿಕ 16 ವಾಣಿಜ್ಯ ಮಳಿಗೆಗಳ ಹಿಂದಿನ ಬಾಡಿಗೆದಾರರನ್ನು ತೆರವುಗೊಳಿಸಿ ಹರಾಜು ಪ್ರಕ್ರಿಯೆಗೆ ಸಿದ್ಧಪಡಿಸಲಾಗಿದೆ ಎಂದರು.

ಒಟ್ಟು 16 ವಾಣಿಜ್ಯ ಮಳಿಗೆಗಳ ಈ ಟೆಂಡರ್ ಹರಾಜು ಕಾನೂನು ಅರ್ಥವಾಗಿರಬೇಕು ಮತ್ತು ಮೀಸಲಾತಿ ನೀಡಬೇಕು ಎಂಬ ಹಿನ್ನೆಲೆಯಲ್ಲಿ ಈಗಾಗಲೇ ಪರಿಶಿಷ್ಟ ಜಾತಿ ವರ್ಗಕ್ಕೆ ಮೂರು ಮಳಿಗೆ ಪರಿಶಿಷ್ಟ ಪಂಗಡಕ್ಕೆ ಒಂದು ಮಳಿಗೆ ಮತ್ತು ಅಂಗವಿಕಲರಿಗೆ ಒಂದು ಮಳಿಗೆ ಮೀಸಲಿಡಲಾಗಿದೆ. ಸಾರ್ವಜನಿಕರು ಈ ಟೆಂಡರ್ ಮೂಲಕ ಯಾವುದೇ ಬಹಿರಂಗ ಹರಾಜಿಗೆ ಮುಂದಾಗಬಹುದು ಇದರಲ್ಲಿ ಯಾವುದೇ ರಾಜಕೀಯ ಒತ್ತಡ ಮತ್ತು ಇನ್ನಿತರ ಶಿಪಾರಸ್ಸು ಪ್ರಕಾರ ಸರ್ಕಾರದ ನೀತಿ ನಿಯಮಗಳ ಅನ್ವಯದಲ್ಲಿ ಗೌಪ್ಯತೆಯಿಂದ ಟೆಂಡರ್ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ ಪಾರದರ್ಶಕತೆಗೆ ಹೆಚ್ಚಿನ ಒತ್ತನ್ನು ನೀಡಲು ತಾಲೂಕು ಪಂಚಾಯಿತಿ ಬದ್ಧವಾಗಿದೆ ಎಂದು ಹೇಳಿದರು.



ಒಟ್ಟು 16 ಮೂಲಗಳು ಕಳೆದ ನಾಲ್ಕು ವರ್ಷಗಳ ಹಿಂದೆ ಅವಧಿ ಮೀರಿದ್ದರು ಕೂಡ ಬಾಡಿಗೆ ಪಾವತಿ ಮಾಡದೆ 54 ಲಕ್ಷವಾಗಿತ್ತು. ಈಗಾಗಲೇ 16 ಲಕ್ಷವನ್ನು ವಸೂಲಿ ಮಾಡಿದ್ದು ಉಳಿದ 38 ಲಕ್ಷವನ್ನು ನ್ಯಾಯಾಲಯದ ಮುಖಾಂತರ ವಸೂಲಿ ಮಾಡಲಾಗುತ್ತದೆ. ಇದರಲ್ಲಿ ಯಾವುದೇ ರಾಜೀ ಸಂಧಾನ ಇಲ್ಲ ಎಂದು ಸ್ಪಷ್ಟಪಡಿಸಿದರು.

ಬಾಡಿಗೆದಾರರು ತಮ್ಮ ಬಾಕಿ ಬಾಡಿಗೆ ಮೊತ್ತವನ್ನು ಸರ್ಕಾರದ ಅನ್ವಯ ಪಾವತಿ ಮಾಡಿ ನಮ್ಮಿಂದ ಅನುಮತಿಯನ್ನು ಪಡೆದು ಟೆಂಡರ್‌ನಲ್ಲಿ ಭಾಗವಹಿಸುವ ಅವಕಾಶವಿದೆ ಯಾರು ಪಾವತಿ ಮಾಡುವುದಿಲ್ಲ ಅವರಿಗೆ ಟೆಂಡರಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ಎಂದು ಹೇಳಿದರು.

ಪ್ರತಿ ಆಸ್ತಿಗಳನ್ನು ಸಂರಕ್ಷಣೆ ಮಾಡುವ ನೆಟ್ಟಿನಲ್ಲಿ ಈ ಸ್ವತ್ತನ್ನು ಗೊಳಿಸಿ ದಾಖಲತೆಗಳನ್ನು ಪಕ್ಕ ದಾಖಲಾತಿಗಳನ್ನು ಪಂಚಾಯಿತಿಗೆ ಸೇರಿದ ಸರ್ಕಾರಿ ನೌಕರರ ಭವನದ ಪಕ್ಕದ ಮೂರು ಮಳಿಗೆಗಳು ಈಗಾಗಲೇ ಅಡಿಪಾಯವಾಗಿದ್ದು ಯಾವುದಾದರೂ ಅನುದಾನದಲ್ಲಿ ಮಳಿಗೆಗಳನ್ನು ಪೂರ್ಣಗೊಳಿಸಿ ಬಾಡಿಗೆ ನೀಡಲಾಗುತ್ತದೆ ಎಂದು ತಿಳಿಸಿದರು.

## ಇಂದಿನಿಂದ ನಿಷೇಧಾಜ್ಞೆ ಜಾರಿ

• ಪ್ರಜೋದಯ ವರದ

**ಹಾಸನ:** ಎಸ್.ಎಸ್.ಎಲ್.ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಏ.7 ರಿಂದ ಹಾಸನ ನಗರದ 6 ಕೇಂದ್ರಗಳಲ್ಲಿ ನಡೆಯಲಿದ್ದು ಮೌಲ್ಯಮಾಪನ ಕಾರ್ಯ ಸುಗಮವಾಗಿ ನಡೆಸಲು ಮೌಲ್ಯ ಮಾಪನ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಮಿತ (ಬಿಎನ್‌ಎಸ್‌ಎಸ್) 2023 ಸೆಕ್ಷನ್ 163 ರಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಮೌಲ್ಯಮಾಪನ ಕೇಂದ್ರಗಳಿಗೆ ಸಾರ್ವಜನಿಕರು, ಅನಧೀಕೃತ ವ್ಯಕ್ತಿಗಳು ಮತ್ತು ಪ್ರಚಾರಕ್ಕೆ ಬರುವ ಜನ ಪ್ರತಿನಿಧಿಗಳು ಪ್ರವೇಶವನ್ನು ನಿರ್ಭಂದಿಸಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿಯವರು ಆದೇಶಿಸಿದ್ದಾರೆ.

# ವಿಕಸಿತ ಭಾರತ: ಸಾಮೂಹಿಕ ಪ್ರಯತ್ನದಿಂದ ಪ್ರಗತಿ

• ಪ್ರಜೋದಯ ವರದಿ

**ನವದೆಹಲಿ:** ವಿಕಸಿತ ಭಾರತ ನಿರ್ಮಿಸಲು ಬಿಜೆಪಿ ಬದ್ಧವಾಗಿದೆ. ನಮ ಸಾಮೂಹಿಕ ಸಂಕಲ್ಪವು ಈ ಉದ್ದೇಶವನ್ನು ಮತ್ತಷ್ಟು ಮುನ್ನಡೆಸಲಿ ಮತ್ತು ಭಾರತವನ್ನು ಪ್ರಗತಿ ಮತ್ತು ಸಮೃದ್ಧಿಯ ಹೊಸ ಎತ್ತರಕ್ಕೆ ಕೊಂಡೊಯ್ಯಲಿ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಆಶಿಸಿದ್ದಾರೆ.






ಪಕ್ಷದ ಸಂಸ್ಥಾಪನಾ ದಿನದ ಸಂದರ್ಭದಲ್ಲಿ, ತಮ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಕನ್ನಡದಲ್ಲೇ ದೇಶಾದ್ಯಂತದ ಎಲ್ಲಾ ಬಿಜೆಪಿ ಕಾರ್ಯಕರ್ತರಿಗೆ ನನ್ನ ಹೃತ್ಪೂರ್ವಕ ಶುಭಾಶಯಗಳು ಎಂದು ಪೋಸ್ಟ್ ಮಾಡಿರುವ ಅವರು, ಬಿಜೆಪಿಯು ಜನಕಲ್ಯಾಣವನ್ನು ತನ್ನ ದೃಷ್ಟಿಕೋನದ ಮೂಲದಲ್ಲಿ ಇರಿಸುವ ಪಕ್ಷವಾಗಿದೆ. ಇದು ಕೇಂದ್ರದಲ್ಲಿ ಮತ್ತು ವಿವಿಧ ರಾಜ್ಯಗಳಲ್ಲಿ ನಮ ಕೆಲಸದಲ್ಲಿ ಪ್ರತಿಫಲಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ಭಾರತ ಮೊದಲು ತತ್ವಕ್ಕೆ ಯಾವಾಗಲೂ ಬದ್ಧವಾಗಿರುವ ನಮ ಪಕ್ಷವು ಸಮಾಜಕ್ಕೆ ಸೇವೆ ಸಲ್ಲಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ನಮ ಕಾರ್ಯಕರ್ತರಾದವರು ತಮ ನಿಸ್ವಾರ್ಥ ಸೇವೆ, ಅಚಲ ಸಮರ್ಪಣೆ ಮತ್ತು ಉತ್ತಮ ಆಡಳಿತದ ಬಗ್ಗೆ ಆಳವಾದ ಉತ್ಸಾಹಕ್ಕೆ ಹೆಸರುವಾಸಿಯಾಗಿದ್ದಾರೆ.

ನಮ ಆದರ್ಶಗಳು ಮತ್ತು ಕೆಲಸಗಳೊಂದಿಗೆ ಗರಿಷ್ಠ ಸಂಖ್ಯೆಯ ಜನರನ್ನು ಸಂಪರ್ಕಿಸಲು ಅವರು ತಳಮಟ್ಟದಲ್ಲಿ ಅವಿಶ್ರಾಂತವಾಗಿ ಶ್ರಮಿಸಿದ್ದಾರೆ. ಕಳೆದ ಹಲವಾರು ದಶಕಗಳಲ್ಲಿ ಪಕ್ಷದ ಬೆಳವಣಿಗೆಯನ್ನು ರೂಪಿಸಿದ ಸಮರ್ಪಣೆ, ತ್ಯಾಗ ಮತ್ತು ಪರಿಶ್ರಮದಿಂದ ಅಸಂಖ್ಯಾತ ಕಾರ್ಯಕರ್ತರಿಗೆ ನಾವು ಗೌರವ ಸಲ್ಲಿಸುತ್ತೇವೆ ಎಂದು ಪ್ರಧಾನಿ ಮೋದಿ ಅವರು ಹೇಳಿದ್ದಾರೆ.

# ಯುದ್ಧ ನಿಲ್ಲಿಸುವಂತೆ ನಾಯಕರಿಗೆ ಮನವಿ

• ಪ್ರಜೋದಯ ವರದಿ

**ಹಾಸನ:** ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದಿಂದ ಅಪಾರ ಸಾವು- ನೋವು ಸಂಭವಿಸುತ್ತಿದ್ದು, ಎಲ್ಲಾ ದೇಶಗಳ ನಾಯಕರು ಒಟ್ಟಾಗಿ ಶಾಂತಿ ಸ್ಥಾಪನೆಗೆ ಮುಂದಾಗಬೇಕೆಂದು ಅಂತಾರಾಷ್ಟ್ರೀಯ ಕ್ರೀಡಾಪಟು ಪುರುಷೋತ್ತಮ್ ಅವರು ಆಗ್ರಹಿಸಿದರು.



ಸುದ್ದಿಗೋಷ್ಟಿಯಲ್ಲಿ ಸೋಮವಾರ ಮಾತನಾಡಿದ ಅವರು, ರಕ್ತಪಾತದಿಂದ ದ್ವೇಷ ಹೆಚ್ಚುವುದು ಮಾತ್ರವಲ್ಲದೆ ಅಪಾರ ಹಾನಿಯುಂಟಾಗುತ್ತದೆ. ಯುದ್ಧದಿಂದ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ. ಯುದ್ಧದ ಆರಂಭದಲ್ಲೇ ಜಿಲ್ಲಾಧಿಕಾರಿ ಅವರನ್ನು ಭೇಟಿ ಮಾಡಿ ಸಂಕಷ್ಟದಲ್ಲಿರುವ ಅಮಾಯಕರನ್ನು ರಕ್ಷಿಸುವುದು ಹಾಗೂ ಒತ್ತೆಯಾಳುಗಳ ಸುರಕ್ಷಿತ ಬಿಡುಗಡೆಗಾಗಿ ಕೇಂದ್ರ ಸರ್ಕಾರದ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದ್ದೆ. ಈ ವಿಷಯ ಅಂತಾರಾಷ್ಟ್ರೀಯ ವ್ಯಾಪ್ತಿಗೆ ಸೇರಿದ್ದರಿಂದ ಸ್ಥಳೀಯ ಮಟ್ಟದಲ್ಲಿ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ ವೆಂದು ಅಧಿಕಾರಿಗಳು ತಿಳಿಸಿದರು.

ಸಂಘರ್ಷ ಶುರುವಾಗಿ ತಿಂಗಳು ಕಳೆದಿದ್ದು ನಿರಪರಾಧಿ ನಾಗರಿಕರ ಮೇಲೆ ನಿರಂತರ ದಾಳಿ ನಡೆಯುತ್ತಿದೆ. ಬಾಂಬ್ ದಾಳಿ, ಹಿಂಸಾಚಾರ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ಹೆಚ್ಚುತ್ತಿರುವುದು ಕಂಡುಬರುತ್ತಿದೆ. ತಕ್ಷಣವೇ ಹಿಂಸಾಚಾರಕ್ಕೆ ಅಂತ್ಯ ಹಾಡಲು ಜಾಗತಿಕ ಸಮುದಾಯ ಕ್ರಮ ಕೈಗೊಳ್ಳಬೇಕೆಂದು ಅವರು ಒತ್ತಾಯಿಸಿದರು.

ಯುದ್ಧ ನಿರತ ರಾಷ್ಟ್ರಗಳ ನಾಯಕರು, ಉಗ್ರ ಮನೋಭಾವ ತ್ಯಜಿಸಿ, ಸಂವಾದ ಮೂಲಕ ಸಮಸ್ಯೆಗೆ ಶಾಂತಿಯುತ ಪರಿಹಾರ ಕಂಡುಕೊಳ್ಳಬೇಕಾಗಿದೆ. ಶಸ್ತ್ರಾಸ್ತ್ರ ಬಳಕೆ ನಿಲ್ಲಿಸಿ, ಮಾನವೀಯ ಮೌಲ್ಯಗಳಿಗೆ ಆದ್ಯತೆ ಕೊಡಬೇಕಿದೆ ಎಂದು ಅವರು ಮನವಿ ಮಾಡಿದರು.

## ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಗ್ಯಾಸ್ ಕೊರತೆ: ಹೆಚ್ಚಿನ ದರ ತೆರಬೇಕಾದ ಪರಿಸ್ಥಿತಿ

# ಎಲ್‌ಪಿಜಿ ಅಭಾವ: ಆತಂಕದಲ್ಲಿ ಆಟೋ ಚಾಲಕರು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದಿಂದ ಅದರ ನೇರ ಪರಿಣಾಮವನ್ನು ದೇಶದ ಜನರು ಎದುರಿಸುವಂತಾಗಿದ್ದು, ಪಟ್ಟಣದಲ್ಲಿ ಕಳೆದ 15 ದಿನಗಳಿಂದಲೂ ಆಟೋ ಎಲ್‌ಪಿಜಿ ಅಭಾವದಿಂದ ಎಲ್‌ಪಿಜಿಗಾಗಿ ಜಾತಕ ಪಕ್ಷಿಯಂತೆ ಚಾಲಕರು ಎದುರು ನೋಡುವಂತಾಗಿದೆ.





ಸರ್ಕಾರಗಳು ಆಟೋ ಎಲ್‌ಪಿಜಿಗೆ ಯಾವುದೇ ಸಮಸ್ಯೆ ಇಲ್ಲ ಅಗತ್ಯಕ್ಕೆ ತಕ್ಕಂತೆ ಪೂರೈಸಲಾಗುತ್ತಿದೆ ಎಂದು ಹೇಳುತ್ತಿವೆ. ಆದರೆ, ಪಟ್ಟಣದಲ್ಲಿ ಮಾತ್ರ 15 ದಿನಗಳಿಂದ ಎಲ್‌ಪಿಜಿ ಇಲ್ಲದೆ ಇರುವ ಎರಡು ಬಂಕ್ ಗಳು ಮುಚ್ಚಿವೆ. ಕಳೆದ ವಾರ ಆಟೋ ಚಾಲಕರು ಪ್ರತಿಭಟನೆ ನಡೆಸಿದ ಹಿನ್ನಲೆಯಲ್ಲಿ ಒಂದು ಬಾರಿ 97.65 ರೂ.ಗೆ ಎಲ್‌ಪಿಜಿ ಗ್ಯಾಸ್ ನೀಡಲಾಗಿತ್ತು. ಆದರೆ, ಈಗ ತಾಲ್ಲೂಕಿನಲ್ಲಿ ಗ್ಯಾಸ್ ಇಲ್ಲದ ಕಾರಣ ಹಾಸನದ ಕೆಲ ಗ್ಯಾಸ್ ಬಂಕ್‌ಗಳಿಗೆ ಹೋಗಿ 87.65ರೂಗೆ ಹಾಕಿಸಿಕೊಂಡು ಬರುವ ಅನಿವಾರ್ಯತೆ ಎದುರಾಗಿದೆ.

ಆಟೋಗಳನ್ನೇ ನಂಬಿಕೊಂಡು ಜೀವನ ಕಟ್ಟಿಕೊಂಡಿರುವವರ ಬದುಕು ಈಗ ಅತಂತ್ರವಾಗಿ ಸಾಲ ಮಾಡಿ ಆಟೋ ಖರೀದಿಸಿರುವವರು ತಿಂಗಳ ಕಂತು ಕಟ್ಟಲೂ ಸಾಧ್ಯವಾಗದೆ ಪರದಾಡುವಂತಾಗಿದೆ.

ನಿತ್ಯ ಬಂಕ್‌ಗಳ ಬಳಿ ಬಂದು ನೋಡಿಕೊಂಡು ಹೋಗುವಂತಾಗಿದೆ. 15 ದಿನಕ್ಕೊಮ್ಮೆ ಬಂದರೂ ಎರಡೇ ದಿನದಲ್ಲಿ ಖಾಲಿಯಾಗುತ್ತದೆ ಮತ್ತು ಅದರ ದರವೂ ದುಪ್ಪಟ್ಟು, ಹೀಗಾದರೆ ನಾವು ನಮ್ಮ ಸಂಸಾರ ನಡೆಸುವುದು ಹೇಗಪ್ಪ ಎಂದು ಚಿಂತೆಗೀಡಾಗಿದ್ದಾರೆ. ಪ್ರಸ್ತುತ ದಿನಗಳಲ್ಲಿ ಅಲ್ಲಿ ಯುದ್ಧ ನಿಲ್ಲುವ ಸೂಚನೆಗಳಿಲ್ಲ, ಯುದ್ಧ ಅಲ್ಲಿ ಅದರ ಬಿಸಿ ಮಾತ್ರ ಇಲ್ಲಿ ಎಂದು ಬಹುತೇಕ ಆಟೋ ಚಾಲಕರು ಪರ್ಯಾಯ ಉದ್ಯೋಗದತ್ತ ಮುಖ ಮಾಡುವಂತಾಗಿದೆ. ಪಟ್ಟಣದಲ್ಲಿ ಪೆಟ್ರೋಲ್, ಡೀಸೆಲ್ ಕೊರತೆ ಇಲ್ಲದಿರುವುದರಿಂದ ಪೆಟ್ರೋಲ್‌ನಿಂದ ಓಡಿಸುವ ಆಟೋಗಳ ಚಾಲಕರು ಸ್ವಲ್ಪಮಟ್ಟಿಗೆ ಉಸಿರಾಡುವಂತಾಗಿದೆ.

> ಕೊಲ್ಲಿ ದೇಶಗಳಲ್ಲಿ ತಿಂಗಳಿಂದ ನಡೆಯುತ್ತಿರುವ ಯುದ್ಧದಿಂದ ನಮಗೆ ಸಮಯಕ್ಕೆ ಸರಿಯಾಗಿ ಆಟೋ ಗ್ಯಾಸ್ ಸಿಗದೆ ಪರ್ಯಾಯ ಉದ್ಯೋಗವಿಲ್ಲದೆ ಸಂಸಾರ ನಡೆಸಲು ಹೆಣಗಾಡುವಂತಾಗಿದೆ. ಕಳೆದ 15 ದಿನಗಳಿಂದ ಆಟೋವನ್ನು ನಿಲ್ಲಿಸಲಾಗಿದೆ. ಬಂಕ್ ಮಾಲೀಕರನ್ನು ಕೇಳಿದರೆ ಯಾವತ್ತು ಬರುತ್ತೋ ನಮಗೂ ಗೊತ್ತಿಲ್ಲ ಎನ್ನುವರು. ಬಂದರೂ ಅದರ ದರ ಸಹ ಹೆಚ್ಚಾಗಲಿದೆ ಎಂದು ಹೇಳುತ್ತಿದ್ದಾರೆ. ಹೀಗಾದರೆ ನಾವು ಆಟೋ ಓಡಿಸಲು ಆಗದು.
>
> - ರುದ್ರೇಶ್, ಆಟೋ ಚಾಲಕ.

ಮತ್ತೊಂದು ಕಡೆ ಗೃಹ ಬಳಕೆ ಎಲ್‌ಪಿಜಿಗೂ ದಿನೇ ದಿನೇ ಬೇಡಿಕೆ ಹೆಚ್ಚಾಗುತ್ತಲೆ ಇದೆ. ಈಗಲೂ ಗ್ರಾಹಕರು ತಮ್ಮ ತಮ್ಮ ಎಲ್‌ಪಿಜಿ ಏಜೆನ್ಸಿಗಳ ಕಚೇರಿಗಳ ಮುಂದೆ ಬೆಳಿಗ್ಗೆ ಎದ್ದರೆ ಸಿಲಿಂಡರ್‌ಗಾಗಿ ಕಾಯುವಂತಾಗಿದೆ. 25 ದಿನಗಳಾದರೂ ಸಿಲಿಂಡರ್ ಸಿಗದ ಕಾರಣ ಆತಂಕಗೊಂಡು ಎಲ್‌ಪಿಜಿ ತುಂಬಿರುವ ಲಾರಿ ಬರುವುದನ್ನು ಎದುರು ನೋಡಿ ಬಂದ ಕೂಡಲೇ ಮುಗಿ ಬಿದ್ದು ಪಡೆಯುವಂತಾಗಿದೆ. ಪಟ್ಟಣದಲ್ಲಿರುವ ಬಹುತೇಕ ಹೋಟೆಲ್‌ಗಳಲ್ಲಿ ಟೀ, ಕಾಫಿಗೂ ಸಿಲಿಂಡರ್ ಇಲ್ಲದೆ ಪರಿತಪಿಸುವಂತಾ ಗಿದೆ. ಲಭ್ಯವಿರುವ ಹೋಟೆಲ್‌ಗಳಲ್ಲಿ ಬೆಲೆಯೂ ಹೆಚ್ಚಳ ಮಾಡಿರುವುದರಿಂದ ಗ್ರಾಹಕರ ಜೇಬಿಗೆ ಕತ್ತರಿ ಹಾಕಿದಂತಾಗಿದೆ. ಕೆಲ ಸಣ್ಣ ಹೋಟೆಲ್‌ಗಳಲ್ಲಿ ಮತ್ತೆ ಹಳೇ ಕಾಲದ ಸೌದೆ ಒಲೆಗಳ ಮೂಲಕ ತಿಂಡಿ ಸಿದ್ಧಪಡಿಸಲಾಗುತ್ತಿದೆ. ಗ್ರಾಮೀಣ ಭಾಗದಲ್ಲಿಯೂ ಮಹಿಳೆಯರು ಶಪಿಸಿಕೊಂಡು ಸಿಲಿಂಡರ್ ಸಿಗದೆ ಸೌದೆಗಾಗಿ ಕಾಡು ಮೇಡುಗಳಲ್ಲಿ ಅಲೆಯುವಂತಾಗಿದೆ.

## ಪ್ರತಿಷ್ಠಿತ ಶಾಲೆಗೆ ಆನ್ ಲೈನ್ ಅರ್ಜಿ

**ಹಾಸನ:** ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2026-27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರತಿಷ್ಠಿತ ಶಾಲೆಗೆ 6ನೇ ತರಗತಿ ಪ್ರವೇಶ ಬಯಸುವ ಪ್ರತಿಭಾವಂತ ಪ.ಜಾತಿ/ಪ.ವರ್ಗದ ಬಾಲಕ/ಬಾಲಕಿಯರಿಂದ ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

5ನೇ ತರಗತಿಯಲ್ಲಿ ಶೇಕಡ 60ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವ ಹಾಗೂ ವಾರ್ಷಿಕ 2.50 ಲಕ್ಷ ಆದಾಯದ ಮಿತಿಯೊಳಗಿರುವ ಅರ್ಹ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ www.sw.kar.nic.in ನಲ್ಲಿ ಏ.15 ರಿಂದ ಮೇ 04 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

# ಅಮೇರಿಕಾ-ಇರಾನ್ ಮಧ್ಯೆ ಕದನ ವಿರಾಮ ಪ್ರಸ್ತಾಪ

## ಎರಡೂ ರಾಷ್ಟ್ರಗಳ ಮುಂದೆ ಪಾಕಿಸ್ತಾನದ ಪ್ರಸ್ತಾಪ | ರಾಜತಾಂತ್ರಿಕ ಮಾತುಕತೆಗೆ ಸಿದ್ಧತೆ

• ಪ್ರಜೋದಯ ವರದಿ

**ವಾಷಿಂಗ್ಟನ್:** ಪಶ್ಚಿಮ ಏಷ್ಯಾದಲ್ಲಿ ದಿನದಿಂದ ದಿನಕ್ಕೆ ಸಂಘರ್ಷ ತೀವ್ರಗೊಳ್ಳುತ್ತಿರುವ ಹೊತ್ತಲ್ಲೇ ಅಮೇರಿಕಾ ಹಾಗು ಇರಾನ್ ಎದುರು ಕದನ ವಿರಾಮದ ಕುರಿತು ಪ್ರಸ್ತಾಪಿಸಲಾಗಿದೆ ಎಂದು ವರದಿಯಾಗಿದೆ.

45 ದಿನಗಳ ಕದನ ವಿರಾಮ ಜಾರಿಗೊಳಿಸುವ ಸಂಬಂಧ ಪಾಕಿಸ್ತಾನವು ಕಾರ್ಯತಂತ್ರ ರೂಪಿಸಿದ್ದು, ಆ ಕುರಿತ ಪ್ರಸ್ತಾವನೆಯನ್ನು ಎರಡೂ ರಾಷ್ಟ್ರಗಳ ಮುಂದಿಟ್ಟಿದೆಯೆಂದು ವರದಿಯಾಗಿದೆ. ಮೊದಲ ಹಂತದಲ್ಲಿ ಯುದ್ಧವನ್ನು ಕೊನೆಗೊಳಿಸಲು ಸಮಗ್ರ ಒಪ್ಪಂದದ ಮಾತುಕತೆಗಳು ಮುಂದುವರಿಯುತ್ತವೆ. 2ನೇ ಹಂತದಲ್ಲಿ ಶಾಶ್ವತ ಪರಿಹಾರಕ್ಕಾಗಿ ರಾಜತಾಂತ್ರಿಕ ಮಾತುಕತೆಗಳನ್ನು ಮುಂದುವರಿಸುವ ಉದ್ದೇಶವನ್ನು ಹೊಂದಿದೆ ಎಂದು ತಿಳಿದು ಬಂದಿದೆ. ಆದರೆ ಈ ಕುರಿತು ಅಮೇರಿಕಾ ಸರ್ಕಾರದಿಂದ ಅಧಿಕೃತ ಮಾಹಿತಿ ಹೊರ ಬಂದಿಲ್ಲ. ಅದರ ಮಧ್ಯೆ ಇಸ್ರೇಲ್ ಮತ್ತು ಅಮೇರಿಕಾ ನಡುವಿನ ಸೇನಾ ಚಟುವಟಿಕೆಗಳು ಹೆಚ್ಚಾಗುತ್ತಿದ್ದು, ಗಲ್ಫ್ ಪ್ರದೇಶದ ಭದ್ರತೆಗೂ ಗಂಭೀರ ಸವಾಲು ಎದುರಾಗಿದೆ. ಜೊತೆಗೆ ಹೊರ್ಮುಜ್ ಜಲಸಂಧಿ ಭದ್ರತೆ, ತೈಲ ಸರಬರಾಜು ಸೇರಿ ಜಾಗತಿಕ ಮಾರುಕಟ್ಟೆಗಳ ಮೇಲೂ ಪರಿಣಾಮ ಬೀರುತ್ತಿದೆ. ತೈಲ ಬೆಲೆಗಳ ಮೇಲಿನ ಹೆಚ್ಚಳ ಜಾಗತಿಕ ಆರ್ಥಿಕತೆ ಮೇಲೂ ಒತ್ತಡ ಹೆಚ್ಚಿಸಿದೆ.



**ನಾಪತ್ತೆಯಾಗಿದ್ದ ಪೈಲಟ್ ಪತ್ತೆ**

ಅಮೇರಿಕಾ ಯುದ್ಧ ವಿಮಾನವನ್ನು ಇರಾನ್ ಹೊಡೆದುರುಳಿಸಿದ ಬಳಿಕ ನಾಪತ್ತೆಯಾಗಿದ್ದ ಪೈಲಟ್ ಅನ್ನು ಸಾಹಸಮಯ ರಕ್ಷಣಾ ಕಾರ್ಯಾಚರಣೆಯ ಮೂಲಕ ವಿಶ್ವದ ದೊಡ್ಡಣ್ಣ ಖ್ಯಾತಿಯ ಅಮೇರಿಕಾ ರಕ್ಷಣೆ ಮಾಡಿದೆ. ಅಮೇರಿಕಾದ ಎಫ್-15 ಈಗಲ್ ಯುದ್ಧ ವಿಮಾನ ವನ್ನು ಇರಾನ್‌ನ ಸೇನೆ ಹೊಡೆದುರುಳಿಸಿತ್ತು. ಅದರ ಬೆನ್ನಲ್ಲೇ ಅತ್ಯಂತ ಸಾಹಸಮಯ ಸರ್ಚ್ ಆ್ಯಂಡ್ ರೆಸ್ಕ್ಯೂ ಆಪರೇಷನ್ ಕೈಗೊಳ್ಳಲಾಗಿತ್ತು. ಅಮೇರಿಕಾ ತನ್ನ ಪೈಲಟ್ ಅನ್ನು ರಕ್ಷಿಸುವ ಕಾರ್ಯಾ ಚರಣೆಯ ಸಂದರ್ಭದಲ್ಲಿ ಇರಾನ್‌ನಲ್ಲಿ ಸಿಲುಕಿಕೊಂಡಿದ್ದ ತನ್ನದೇಯಾದ ಅತ್ಯಾಧುನಿಕ ವಿಮಾನಗಳನ್ನು ನಾಶಪಡಿಸಿತು.

ಈ ರಕ್ಷಣಾ ಕಾರ್ಯಾಚರಣೆಯಲ್ಲಿ ಅಮೇರಿಕಾ ಸೇನೆಯ ಐದು ಸರಕು ಯುದ್ಧ ವಿಮಾನಗಳನ್ನು ಬಳಸಿಕೊಳ್ಳಲಾಗಿತ್ತು. ಈ ಪೈಕಿ ಎರಡು ವಿಮಾನಗಳು ಇರಾನ್‌ನಿಂದ ಹಾರಲು ಸಾಧ್ಯ ವಾಗಲಿಲ್ಲ. ಅವುಗಳು ಇರಾನ್ ಕೈಗೆ ಸಿಗದಂತೆ ತಡೆಯುವ ನಿಟ್ಟಿನಲ್ಲಿ ಅಮೇರಿಕದ ಸೈನಿಕರೇ ಅದನ್ನು ನಾಶಪಡಿಸಿದೆ ಎದರು ವರದಿಯಾಗಿದೆ. ಸ್ಫೋಟಗೊಂಡ ವಿಮಾನಗಳು ಲಾಕ್‌ಹೀಡ್ ಮಾರ್ಟಿನ್-130 ಮಾದರಿ. ನಾಶಪಡಿಸಿದ ಸರಕು ವಿಮಾನಗಳ ಬೆಲೆ ತಲಾ 100 ಮಿಲಿಯನ್ ಡಾಲರ್ (ಅಂದಾಜು 800 ಕೋಟಿ ರೂ.) ಎಂದು ಹೇಳಲಾಗಿದೆ.

ರಕ್ಷಣಾ ಕಾರ್ಯಾಚರಣೆಗಾಗಿ ಇರಾನ್‌ನ ಮರುಭೂಮಿಯಲ್ಲಿ ಅಮೇರಿಕಾದ ಸಾರಿಗೆ ವಿಮಾನಗಳು ಇಳಿದಿದ್ದವು. ಆದರೆ ಮರುಭೂಮಿಯಲ್ಲಿ ಅಮೇರಿಕಾದ ವಿಮಾನಗಳು ಸಿಲುಕಿ ಕೊಂಡವು ಅಥವಾ ತಾಂತ್ರಿಕ ದೋಷ ಕಾಣಿಸಿಕೊಂಡಿತು. ಅದರಿಂದ ಅವುಗಳನ್ನು ಮರಳಿ ಟೇಕ್-ಆಫ್ ಮಾಡಲು ಸಾಧ್ಯವಾಗಲಿಲ್ಲ.

ಶತ್ರುಗಳ ಕೈಗೆ ರಹಸ್ಯ ತಂತ್ರಜ್ಞಾನ ಸಿಗದಂತೆ ತಡೆಯಲು ಅಮೇರಿಕಾ ತನ್ನ ಕೋಟ್ಯಾಂತರ ರೂಪಾಯಿ ಮೌಲ್ಯದ ವಿಮಾನಗಳನ್ನು ತಾನೇ ನಾಶಪಡಿಸುವ ಮಿಲಿಟರಿ ನಿಯಮವನ್ನು ಪಾಲಿಸಿಕೊಂಡು ಬಂದಿದೆ. ಶತ್ರು ರಾಷ್ಟ್ರವಾದ ಇರಾನ್‌ನ ಸೈನಿಕರು ಸಮೀಪಿಸುತ್ತಿದ್ದಂತೆ, ಅಮೇರಿಕಾದ ಸೈನಿಕರು ಅಲ್ಲಿಂದ ಹೊರಡುವ ಮುನ್ನ ತಮ್ಮದೇ ವಿಮಾನಗಳನ್ನು ಸ್ಫೋಟಿಸಿದರು. ಏಕೆಂದರೆ ಆ ವಿಮಾನಗಳಲ್ಲಿ ಅತ್ಯಂತ ರಹಸ್ಯವಾದ ತಂತ್ರಜ್ಞಾನ, ಸಂವಹನ ವ್ಯವಸ್ಥೆ ಮತ್ತು ಶಸ್ತ್ರಾಸ್ತ್ರಗಳಿದ್ದವು. ಇವು ಇರಾನ್ ಅಥವಾ ಇತರ ಶತ್ರುಗಳ ಕೈಗೆ ಸಿಗಬಾರದು ಎಂಬುದು ಅಮೇರಿಕದ ಉದ್ದೇಶವಾಗಿತ್ತು.

### ಮತ್ತೊಂದು ಜಲ ಮಾರ್ಗ ಬಂದ್ ಎಚ್ಚರಿಕೆ

ಹೊರ್ಮುಜ್ ಜಲಸಂಧಿ ಮೇಲೆ ಹಿಡಿತ ಸಾಧಿಸಿರುವ ಇರಾನ್ ಇದೀಗ ಮತ್ತೊಂದು ಪ್ರಮುಖ ಜಲಮಾರ್ಗ ಬಬ್ ಎಲ್‌ಮಂಡೇಬ್ ಸ್ಥಗಿತಗೊಳಿಸುವ ಬೆದರಿಕೆ ಹಾಕಿದೆ. ಬಬ್‌ಎಲ್‌ಮಂಡೇಬ್ ಜಲಸಂಧಿಯ ಮೂಲಕ ಸರಕು ಸಾಗಣೆಗೆ ತಡೆಯೊಡ್ಡಲಾಗುವುದು ಎಂದು ಇರಾನ್‌ನ ಸ್ಪೀಕರ್ ಮೊಹಮ್ಮದ್ ಬಘೇರ್ ಖಾಲಿಬಪ್ ಎಚ್ಚರಿಕೆ ನೀಡಿದ್ದಾರೆ. ಜಾಗತಿಕ ತೈಲ, ಎಲ್‌ಎನ್‌ಜಿ, ಗೋಧಿ, ಅಕ್ಕಿ ಮತ್ತು ರಸಗೊಬ್ಬರ ಎಷ್ಟು ಪಾಲು ಬಬ್‌ಎಲ್ ಮಂಡೇಬ್ ಜಲ ಸಂಧಿಯ ಮೂಲಕ ಹಾದುಹೋಗುತ್ತದೆ. ಯಾವ ದೇಶದ ಯಾವ ಕಂಪನಿಗಳ ಸರಕು ಗಳು ಈ ಜಲಸಂಧಿಯ ಮೂಲಕ ಸಾಗುತ್ತವೆ ಎಂದು ಖಾಲಿಬಪ್ ಪ್ರಶ್ನಿಸಿದ್ದಾರೆ. ಹೊರ್ಮುಜ್ ಜಲಸಂಧಿಯಲ್ಲಿ ನಡೆಯುತ್ತಿರುವ ಅಡೆತಡೆಗಳ ನಡುವೆಯೇ ಇರಾನ್, ಜಾಗತಿಕ ಹಡಗು ಸಂಚಾರದ ಮತ್ತೊಂದು ಪ್ರಮುಖ ಮಾರ್ಗವಾದ ಬಬ್‌ಎಲ್‌ಮಂಡೇಬ್ ಜಲಸಂಧಿಯತ್ತ ತನ್ನ ಚಿತ್ತ ಹರಿಸಿದ್ದು, ಇದು ಜಾಗತಿಕ ಇಂಧನ ಮತ್ತು ಪೂರೈಕೆ ಸರಪಳಿ ಮೇಲೆ ದುಷ್ಪರಿಣಾಮ ಬೀರುವ ಆತಂಕ ಹೆಚ್ಚಿಸಿದೆ.



## ಸಿಲಿಂಡರ್ ಕೊರತೆ: ಏಜೆನ್ಸಿ ಎದುರು ಮುಗಿಬಿದ್ದ ಗ್ರಾಹಕರು




• ಪ್ರಜೋದಯ ವರದಿ

**ಹಾಸನ:** ಗೃಹಬಳಕೆ ಇಂಡೇನ್ ಗ್ಯಾಸ್ ಸಿಲಿಂಡರ್ ಕೊರತೆ ಎದುರಿಸುತ್ತಿರುವ ನಗರದ ಜನತೆ ಬುಕ್ಕಿಂಗ್ ಮಾಡಲು ಹಾಸನಾಂಬ ಇಂಡೇನ್ ಗ್ಯಾಸ್ ಸರ್ವೀಸಸ್ ಕಚೇರಿ ಎದುರು ಸೋಮವಾರ ಮುಗಿಬಿದ್ದರು.

ಗ್ಯಾಸ್ ಏಜೆನ್ಸಿ ಎದುರು ಬೆಳಗ್ಗಿನಿಂದಲೇ ಮಹಿಳೆಯರು, ವೃದ್ಧರು ಸೇರಿ ನೂರಾರು ಮಂದಿ ಸರದಿ ಸಾಲಿನಲ್ಲಿ ನಿಂತು ಗ್ಯಾಸ್ ಸಿಲಿಂಡರ್ ಬುಕ್ಕಿಂಗ್ ಮಾಡಲು ಪ್ರಯತ್ನಿಸಿದರು. ಕೆಲವೆಡೆ ನೂಕುನುಗ್ಗಲು ಉಂಟಾಗಿ ಗ್ರಾಹಕರು ತೊಂದರೆ ಅನುಭವಿಸುವಂತಾಯಿತು. ಮೊಬೈಲ್ ಮೂಲಕ ಗ್ಯಾಸ್ ಸಿಲಿಂಡರ್ ಬುಕ್ಕಿಂಗ್ ಆಗದಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ. ಬುಕ್ಕಿಂಗ್ ಮಾಡಿದರೂ ಒಟಿಪಿ ಸಂದೇಶ ಬರದೇ ಇರುವುದರಿಂದ ಅನಿವಾರ್ಯವಾಗಿ ಕಚೇರಿಗೆ ಭೇಟಿ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಏಜೆನ್ಸಿಯವರ ಬಳಿ ವಿಚಾರಿಸಿದರೆ ಒಟಿಪಿ ತಿಳಿಸಲು ಹೇಳಲಾಗುತ್ತಿದೆ. ಒಟಿಪಿ ಸ್ವೀಕರಿಸದೇ ಇರುವುದರಿಂದ ಬುಕ್ಕಿಂಗ್ ಪ್ರಕ್ರಿಯೆ ಪೂರ್ಣಗೊಳ್ಳುತ್ತಿಲ್ಲವೆಂದು ಮಹಿಳೆಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದೂರದ ಹಳ್ಳಿಗಳಿಂದ ತಮ್ಮ ದಿನನಿತ್ಯದ ಕೆಲಸ ಕಾರ್ಯಗಳನ್ನು ಬಿಟ್ಟು ಬಂದಿದ್ದೇವೆ. ಗಂಟೆಗಳ ಕಾಲ ಕಾದರೂ ಸಮಸ್ಯೆಗೆ ಪರಿಹಾರ ಸಿಗುತ್ತಿಲ್ಲ. ಬುಕ್ಕಿಂಗ್ ಮಾಡಿದ ಗ್ರಾಹಕರಿಗೂ ಗ್ಯಾಸ್ ಸಿಲಿಂಡರ್ ವಿತರಣೆ ಆಗುತ್ತಿಲ್ಲ. ಬದಲಾಗಿ ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಹೆಚ್‌ಪಿ ಹಾಗು ಭಾರತ್ ಗ್ಯಾಸ್ ಕಂಪನಿಗಳ ಸಿಲಿಂಡರ್‌ಗಳು ಲಭ್ಯವಿದ್ದರೂ, ಇಂಡೇನ್ ಗ್ಯಾಸ್ ಮಾತ್ರ ಸಿಗುತ್ತಿಲ್ಲ ಎಂಬುದು ಜನರ ಆಕ್ರೋಶಕ್ಕೆ ಕಾರಣವಾಗಿದೆ. ಇನ್ನು ಗ್ಯಾಸ್ ಸಿಲಿಂಡರ್ ವಿತರಣೆ ಮಾಡುವವರನ್ನು ಸಂಪರ್ಕಿಸಲು ಪ್ರಯತ್ನಿಸಿದರೂ ಫೋನ್ ಕರೆಗಳನ್ನು ಸ್ವೀಕರಿಸುತ್ತಿಲ್ಲವೆಂದು ಗ್ರಾಹಕರು ದೂರಿದ್ದಾರೆ.

## ತಮಿಳುನಾಡಿನ 9 ಪೊಲೀಸರಿಗೆ ಮರಣದಂಡನೆ ಶಿಕ್ಷೆ

• ಪ್ರಜೋದಯ ವರದಿ

**ಮಧುರೈ:** ಲಾಕಪ್ ಡೆತ್ ಪ್ರಕರಣ ವೊಂದರಲ್ಲಿ 9 ಪೊಲೀಸರಿಗೆ ಮರಣ ದಂಡನೆ ವಿಧಿಸಿ ಮಧುರೈ ಜಿಲ್ಲೆಯ ನ್ಯಾಯಾಲಯ ಆದೇಶ ಪ್ರಕಟಿಸಿದೆ.

2020ರ ಜೂ.19ರಂದು ಲಾಕ್‌ಡೌನ್ ಸಮಯದಲ್ಲಿ ಅಂಗಡಿ ನಿಗದಿತ ಸಮಯದ ನಂತರವೂ ತೆರೆ ದಿದ್ದರೆಂಬ ಆರೋಪದ ಮೇಲೆ ಮೊಬೈಲ್ ಅಂಗಡಿ ನಡೆಸುತ್ತಿದ್ದ ತೂತುಕುಡಿ ಜಿಲ್ಲೆಯ ಜಯರಾಜ್ ಮತ್ತು ಅವರ ಮಗ ಬೆನಿಕ್ಸ್ ಅವರನ್ನು ಬಂಧಿಸಲಾಗಿತ್ತು. ಇಬ್ಬರು ಬಂಧನ ದಲ್ಲಿದ್ದಾಗಲೇ ಮೃತಪಟ್ಟಿದ್ದರು.

ಆರು ವರ್ಷಗಳ ಹಿಂದೆ ನಡೆದಿದ್ದ ಘಟನೆ ದೇಶವ್ಯಾಪಿ ಚರ್ಚೆಗೆ ಎಡೆ ಮಾಡಿಕೊಟ್ಟಿತ್ತು. ಪ್ರಕರಣವನ್ನು ನ್ಯಾಯಾ ಲಯ ಅಧಿಕಾರದ ದುರು ಪಯೋಗದ ಉದಾಹರಣೆ ಎಂದು ಹೇಳಿದೆ. ತಮಿಳುನಾಡಿನಲ್ಲಿ ಅನೇಕ ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳು ಇದ್ದಾರೆ. ಈ ತೀರ್ಪು ಪೊಲೀಸ ರಲ್ಲಿ ಭಯ ಹುಟ್ಟಿಸುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ತಂದೆ ಮತ್ತು ಮಗನನ್ನು ಬಟ್ಟೆ ಬಿಚ್ಚಿಸಿ ಕ್ರೂರವಾಗಿ ಹಲ್ಲೆ ಮಾಡ ಲಾಗಿತ್ತು. ಅದನ್ನು ಓದಿದರೆ ಹೃದಯ ನಡುಗುತ್ತದೆಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. 2020ರ ಜೂನ್ 19ರಂದು ಜಯರಾಜ್ ಮತ್ತು ಬೆನಿಕ್ಸ್ ಅವರನ್ನು ಸತಂಕುಳಂ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ, ನಂತರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಕೆಲವೇ ದಿನಗಳಲ್ಲಿ ಇಬ್ಬರೂ ಮೃತ ಪಟ್ಟರು. ಬಂಧಿತರ



ಸಂಬಂಧಿಕರು ಪೊಲೀಸ್ ಠಾಣೆಯಲ್ಲಿ ಇಡೀ ರಾತ್ರಿ ಹಲ್ಲೆ ನಡೆಸಲಾಗಿದೆ ಎಂದು ಆರೋಪಿಸಿ, ಗುದದ್ವಾರದಿಂದ ರಕ್ತಸ್ರಾವ ಸಂಭವಿಸಿದ್ದೂ ಸೇರಿ ಗಂಭೀರ ದೈಹಿಕ ಹಿಂಸೆಯ ಗುರುತುಗಳನ್ನು ಉಲ್ಲೇಖಿಸಿದ್ದರು.

ಮದ್ರಾಸ್ ಹೈಕೋರ್ಟ್ ನಿರ್ದೇಶನದ ಮೇರೆಗೆ, ರಾಜ್ಯದ ಸಿಬಿ-ಸಿಐಡಿಯಿಂದ ತನಿಖೆಯನ್ನು ಕೇಂದ್ರೀಯ ತನಿಖಾ ದಳ (ಸಿಬಿಐ) ವಶಕ್ಕೆ ಪಡೆದು, ಈ ಪ್ರಕರಣದಲ್ಲಿ 10 ಪೊಲೀಸರನ್ನು ಬಂಧಿಸಿತು. ಬಂಧಿತರಲ್ಲಿ ಒಬ್ಬ ಇನ್ಸ್‌ಪೆಕ್ಟರ್, ಇಬ್ಬರು ಉಪನಿರೀಕ್ಷಕರು ಹಾಗು ಕಾನ್ಸ್‌ಟೇಬಲ್‌ಗಳಿದ್ದರು.

ನಂತರ ಸಿಬಿಐ ಆರೋಪಿಗಳ ವಿರುದ್ಧ ಕೊಲೆ ಆರೋಪ ಗಳನ್ನು ದಾಖಲಿಸಿತು. ತನಿಖೆಯ ವೇಳೆ ಮಹಿಳಾ ಕಾನ್ಸ್ ಟೇಬಲ್ ಒಬ್ಬರ ಹೇಳಿಕೆ ಪ್ರಮುಖ ತಿರುವು ತಂದುಕೊಟ್ಟಿತು. ಅವರು, ತಂದೆ-ಮಗನ ಮೇಲೆ ಇಡೀ ರಾತ್ರಿ ಹಲ್ಲೆ ನಡೆದಿದ್ದು, ಠಾಣೆಯ ಮೇಜು ಮತ್ತು ಲಾಠಿಗಳ ಮೇಲೆ ರಕ್ತದ ಕಲೆಗಳು ಕಂಡುಬಂದಿದ್ದವು ಎಂದು ತನಿಖಾಧಿಕಾರಿಗಳಿಗೆ ಹೇಳಿದರೆಂದು ವರದಿಯಾಗಿದೆ.

## ತ್ರಿವಿಧ ದಾಸೋಹ ಮೂಲಕ ಬೆಳಕಾದ ಶಿವಕುಮಾರ ಸ್ವಾಮೀಜಿ

• ಪ್ರಜೋದಯ ವರದಿ

**ಹಾಸನ:** ತ್ರಿವಿಧ ದಾಸೋಹದ ಮೂಲಕ ತುಮಕೂರಿನ ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅನೇಕ ಮಕ್ಕಳ ಪಾಲಿಗೆ ಬೆಳಕಾಗಿದ್ದಾರೆಂದು ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ ತಿಳಿಸಿದರು.

ಶ್ರೀ ಮಠದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ಶ್ರೀಗಳ 119ನೇ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಸಿದ್ದಗಂಗಾ ಶ್ರೀಗಳು ನಡೆದಾಡುವ ದೇವರು ಎಂದೇ ಪ್ರಸಿದ್ಧರಾಗಿದ್ದರು. ಬಡ ಹಾಗು ಅನಾಥ ವಿದ್ಯಾರ್ಥಿಗಳ ಬದುಕಿಗೆ ಬೆಳಕಾಗಿದ್ದಾರೆಂದರು.

ಜಾತಿ-ಮತ ಭೇದವಿಲ್ಲದೆ ಎಲ್ಲಾ ವರ್ಗದ ಮಕ್ಕಳಿಗೆ ಉಚಿತ ಶಿಕ್ಷಣ, ವಸತಿ ಹಾಗು ಊಟ ಒದಗಿಸುವ ಮೂಲಕ ಅವರು ಮಾನವೀಯ ಮೌಲ್ಯಗಳನ್ನು ಜೀವಂತಗೊಳಿಸಿದ್ದಾರೆ. ಮಠದ ಆರ್ಥಿಕ ಸ್ಥಿತಿ ದುರ್ಬಲವಾಗಿದ್ದ ಸಮಯದಲ್ಲೂ ಶ್ರೀಗಳು ಅಚಲ ಧೈರ್ಯದಿಂದ ಕಾರ್ಯ ನಿರ್ವಹಿಸಿ, ಭಕ್ತರ ಮನೆ ಮನೆಗೆ ತೆರಳಿ ದವಸ-ಧಾನ್ಯ ಸಂಗ್ರಹಿಸಿ ವಿದ್ಯಾರ್ಥಿ ನಿಲಯ, ಪ್ರಸಾದ ನಿಲಯ ಮತ್ತು ಶಿಕ್ಷಣ ಸಂಸ್ಥೆಗಳನ್ನು ಯಶಸ್ವಿಯಾಗಿ ನಡೆಸಿದ್ದನ್ನು ನೆನಪಿಸಿಕೊಂಡರು.



ಗ್ರಾಮೀಣ ಭಾಗದ ಮಕ್ಕಳಿಗೆ ಶಿಕ್ಷಣದ ದೀಪ ಹಚ್ಚಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶಿವಕುಮಾರ ಸ್ವಾಮೀಜಿ ಪಾತ್ರ ಮಹತ್ವದ್ದಾಗಿದೆಯೆಂದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಎನ್.ಕುಮಾರಸ್ವಾಮಿ ಅವರು ಮಾತನಾಡಿ, ಸಿದ್ದಗಂಗಾ ಶ್ರೀಗಳು ಬಡ, ದೀನ, ದಲಿತ ಹಾಗು ಹಿಂದುಳಿದ ವರ್ಗದ ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಸಮಾಜದಲ್ಲಿ ಸಮಾನತೆಯ ಸಂದೇಶ ಸಾರಿದರು. ಅವರ ಆದರ್ಶಗಳು ಇಂದಿನ ಯುವ ಜನತೆಗೆ ಮಾರ್ಗದರ್ಶಕವಾಗಿವೆ ಎಂದು ಹೇಳಿದರು.

ಪರಿಷತ್ ಪ್ರಧಾನ ಕಾರ್ಯದರ್ಶಿ ಕಟ್ಟಾಯ ಶಿವಕುಮಾರ ಅವರು ಮಾತನಾಡಿ, 12ನೇ ಶತಮಾನದ ಶಿವ ಶರಣರ ಕಾಯಕ ಮತ್ತು ದಾಸೋಹ ತತ್ವವನ್ನು ಆಧುನಿಕ ಕಾಲದಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಿದ ಮಹಾನ್ ವ್ಯಕ್ತಿತ್ವ ಸಿದ್ದಗಂಗಾ ಸ್ವಾಮೀಜಿ. ಅವರ ನಿಸ್ವಾರ್ಥ ಸೇವೆಗೆ ಇಡೀ ಜಗತ್ತೇ ತಲೆಬಾಗಿದ್ದು, ಇಂತಹ ಮಹಾನ್ ಗುರುಗಳ ಕಾಲದಲ್ಲಿ ಬದುಕಿರುವುದು ನಮ್ಮ ಸೌಭಾಗ್ಯ ಎಂದರು.

ಪರಿಷತ್ ಕೋಶಾಧಿಕಾರಿ ರುದ್ರ ಸ್ವಾಮಿ, ಸಂಘಟನಾ ಕಾರ್ಯದರ್ಶಿ ಆನಂದ್ ಪಟೇಲ್, ಬೇಲೂರು ತಾಲ್ಲೂಕು ಅಧ್ಯಕ್ಷ ಹೆಬ್ಬಾಳು ಹಾಲಪ್ಪ, ಅರಕಲಗೂಡು ಅಧ್ಯಕ್ಷ ಅಮೃತೇಶ್, ಚನ್ನರಾಯಪಟ್ಟಣದ ಕಲ್ಪನಾ ಸಿದ್ದುರಾಜು, ಬೇಲೂರು ಪ್ರಧಾನ ಕಾರ್ಯದರ್ಶಿ ರಾಜಕುಮಾರ, ಖಜಾಂಚಿ ಧನಂಜಯ, ಸಕಲೇಶಪುರ ಕದಳಿ ಮಹಿಳಾ ವೇದಿಕೆ ಮೀನಾಕ್ಷಿ ಖಾದರ್, ಶಾರದ ಗುರುಮೂರ್ತಿ, ಭಾವನಾ, ಕಲಾವತಿ, ಪೂಜಾ, ರತ್ನಮ್ಮ, ಅನ್ನಪೂರ್ಣ ಇದ್ದರು.

## ಜನರಿಂದ ದೇವೇಗೌಡರ ಕುಟುಂಬ ತಿರಸ್ಕಾರ

» ಮೊದಲನೇ ಪುಟದಿಂದ

ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮೊದಲು ಕಾಂಗ್ರೆಸ್‌ನಲ್ಲಿದ್ದು, ಅವಕಾಶ ಗಿಟ್ಟಿಸಿಕೊಂಡರು. ಈಗ ಬಿಜೆಪಿಗೆ ಹೋಗಿ ಲಾಭ ಪಡೆದುಕೊಂಡಿದ್ದಾರೆ ಎಂದರು.

ಬಿಜೆಪಿ ಎಷ್ಟೇ ಆರೋಪ, ಅಪಪ್ರಚಾರ ಮಾಡಿದರೂ ಜನರು ಪಂಚ ಗ್ಯಾರಂಟಿ ಯೋಜನೆ ಮೆಚ್ಚಿಕೊಂಡಿದ್ದಾರೆ. ಉಪಚುನಾವಣೆಯಲ್ಲಿ ಗ್ಯಾರಂಟಿ ಮುಂದಿಟ್ಟುಕೊಂಡು ಮತ ಕೇಳುತ್ತಿದ್ದೇವೆ. ರಾಜ್ಯದಲ್ಲಿ 9 ವರ್ಷ ಆಡಳಿತ ನಡೆಸಿದ ಬಿಜೆಪಿ ಯಾವುದೇ ಅಭಿವೃದ್ಧಿ ಮಾಡಿಲ್ಲ. ಯಾವ ಮುಖ ಇಟ್ಟುಕೊಂಡು ಮತ ಕೇಳುತ್ತಿದ್ದೀರಿ ಎಂದು ಕುಟುಕಿದರು.

ನಾವು ಮಾಡಿದ ಜನಪರ, ಅಭಿವೃದ್ಧಿ ಕೆಲಸಗಳ ಆಧಾರದಲ್ಲಿ ಮತ ಕೇಳುತ್ತಿದ್ದೇವೆ. ಆದರೆ, ನನಗೆ ಬೈದು ಮತ ಕೇಳುವ ದಾರಿದ್ರ್ಯ ಬಿಜೆಪಿಗೆ ಬಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿ, ಎರಡೂ ಕ್ಷೇತ್ರದಲ್ಲೂ ಗೆದ್ದು ತೋರಿಸುತ್ತೇವೆಂದು ಸವಾಲು ಹಾಕಿದರು.

ಕಾಂಗ್ರೆಸ್ ಎಲ್ಲಾ ಜಾತಿ, ಧರ್ಮದವರನ್ನೂ ಜೊತೆಗೆ ಕೊಂಡೊಯ್ಯುವ ಪಕ್ಷ. ಜಾತಿ ಜಾತಿಗಳ ನಡುವೆ, ಧರ್ಮ ಧರ್ಮಗಳ ನಡುವೆ ವಿಭಜನೆ ತಂದು ವೋಟು ಕೇಳುವ ಕೆಟ್ಟ ರಾಜಕಾರಣವನ್ನು ನಾವು ಮಾಡುವುದಿಲ್ಲ. ಕೋಮುಗಲಭೆಗಳನ್ನು ಸಂಘಟಿಸಿ ರಾಜಕಾರಣ ಮಾಡುವುದು ಬಿಜೆಪಿಯ ಜಾಯಮಾನವೆಂದು ಹರಿಹಾಯ್ದರು.

## ಎಲ್‌ಪಿಜಿ ಬದಲು ಪೆಟ್ರೋಲ್ ಬಳಸಿ

• ಪ್ರಜೋದಯ ವರದಿ

**ದಾವಣಗೆರೆ:** ಪೆಟ್ರೋಲ್ ಸದಾಕಾಲ ಲಭ್ಯವಿರುವ ಇಂಧನ. ಸದ್ಯದ ಮಟ್ಟಿಗೆ ಆಟೋ ಚಾಲಕರು ಎಲ್‌ಪಿಜಿ ಬದಲಿಗೆ ಪೆಟ್ರೋಲ್ ಬಳಸುವುದು ಸೂಕ್ತ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಷಿ ಅವರು ಸಲಹೆ ನೀಡಿದರು. ದೇಶದಲ್ಲಿ ಸುಮಾರು 70 ದಿನಗಳಿಗೆ ಸಾಕಾಗುವಷ್ಟು ಕಚ್ಚಾ ತೈಲದ ಸಂಗ್ರಹ ಇದೆ. ನಿರಂತರವಾಗಿ ತೈಲ ಪೂರೈಕೆ ಆಗುತ್ತಿದ್ದು, ಜನರು ಆತಂಕಪಡುವ ಅಗತ್ಯವಿಲ್ಲ. ವಾಣಿಜ್ಯ ಸಿಲಿಂಡರ್‌ಗಳ ವಿತರಣೆಯನ್ನು ಶೇ.70ಕ್ಕೆ ಹೆಚ್ಚಿಸಲಾಗಿದೆ ಎಂದು ಸೋಮವಾರ ಸುದ್ದಿಗೋಷ್ಠಿ ಯಲ್ಲಿ ಮಾಹಿತಿ ನೀಡಿದರು.

## ಹೊಗೆಸೊಪ್ಪು ಖರೀದಿಗೆ ಆಗ್ರಹಿಸಿ ಅಹೋರಾತ್ರಿ ಧರಣಿ

» ಮೊದಲನೇ ಪುಟದಿಂದ

ಬೆಳೆಗಾರರ ಪರ ಧ್ವನಿ ಎತ್ತಿದರೂ ಸಚಿವರು ಉತ್ತರ ನೀಡದೆ ನಿರ್ಲಕ್ಷ್ಯಿಸುತ್ತಿದ್ದಾರೆ. ಕೇಂದ್ರ ಸರ್ಕಾರ ತಂಬಾಕು ಬೆಳೆಗಾರರನ್ನು ಬೀದಿಗೆತಳ್ಳುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಭಾರತದಲ್ಲಿ ಉತ್ಪಾದಿಸಿದ ತಂಬಾಕು ಖರೀದಿಸಲು ವಿದೇಶಿ ಕಂಪನಿಗಳಿಗೆ ಮುಕ್ತ ಮಾರುಕಟ್ಟೆ ವ್ಯವಸ್ಥೆಗೆ ಅವಕಾಶ ಮಾಡಿಕೊಡಬೇಕು. ಸರ್ಕಾರ ತಂಬಾಕು ಬೆಳೆಗಾರರ ನೆರವಿಗೆ ಬರುವ ತನಕ ಅಹೋರಾತ್ರಿ ಧರಣಿ ಮುಂದುವರಿಯಲಿದೆ ಎಂದರು. ಭಾರತೀಯ ಕಿಸಾನ್ ಸಂಘದ ಮಂಡ್ಯ ಪ್ರಾಂತ್ಯ ಅಧ್ಯಕ್ಷ ಹಾಡ್ಯ ರಮೇಶ್‌ರಾಜ್, ಸಂಘಟನಾ ಕಾರ್ಯದರ್ಶಿ ನಾರಾಯಣ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ಜಿಲ್ಲಾ ಘಟಕದ ಅಧ್ಯಕ್ಷ ಹೆಚ್.ಬಿ. ಮಲ್ಲಪ್ಪ, ಉಪಾಧ್ಯಕ್ಷ ಸಣ್ಣೇಗೌಡ, ತಾಲ್ಲೂಕು ಗೌರವಾಧ್ಯಕ್ಷ ಯೋಗಣ್ಣ,ತಾಲ್ಲೂಕು ಅಧ್ಯಕ್ಷ ಬಿ.ಸಿ. ರವಿ,ಉಪಾಧ್ಯಕ್ಷಮಂಜು ಇತರರಿದ್ದರು.

## ಪತಿಗೆ ರಕ್ಷಣೆ ಕೊಟ್ಟ ಪೊಲೀಸರ ವಿರುದ್ಧ ಮಹಿಳೆ ರಾದ್ಧಾಂತ

» ಮೊದಲನೇ ಪುಟದಿಂದ

ಪತ್ನಿ ಜೊತೆ ಬದುಕುವುದು ಅಸಾಧ್ಯವೆಂದು ರಾಜು ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದಾರೆ ಎನ್ನಲಾಗಿದೆ. ಈ ವಿಷಯ ತಿಳಿದ ಪತ್ನಿ ಮಾ.23ರಂದು ರಾಜು ಜೊತೆಗೆ ಗಲಾಟೆ ಮಾಡಿದ್ದರು. ಆಸ್ತಿಯಲ್ಲಿ ಪಾಲು ನೀಡದೆ ವಿಚ್ಛೇದನ ಹೇಗೆ ಸಾಧ್ಯವೆಂದು ಜಗಳ ಶುರು ಮಾಡಿದ್ದರು. ವಿಷಯ ತಿಳಿದು ಸ್ಥಳಕ್ಕೆ ತೆರಳಿದ್ದ ತುರ್ತು ಸೇವೆ ಪೊಲೀಸರು ರಾಜುನನ್ನು ನಗರ ಠಾಣೆಗೆ ಕರೆದು ಕೊಂಡು ಬಂದಿದ್ದರು. ಪೊಲೀಸರ ಹಿಂದೆಯೇ ಬಂದ ರಾಜು ಪತ್ನಿ ಹಾಗು ಸಂಬಂಧಿಕರು ಎನ್.ಆರ್. ವೃತ್ತದಲ್ಲಿರುವ ಪೊಲೀಸ್‌ಠಾಣೆ ಎದುರು ಪೊಲೀಸರ ಮುಂದೆಯೇ ಗಲಾಟೆ ಮಾಡಿದ್ದರು. ಬಿ.ಎಂ. ರಸ್ತೆಯಲ್ಲಿ ನಿಲ್ಲಿಸಿದ್ದ ರಾಜು ಅವರ ಕಾರಿನ ಗಾಜು ಒಡೆದು ಆತನನ್ನು ಬಿಟ್ಟು ಕಳುಹಿ ಸುವಂತೆ ಆಗ್ರಹಿಸಿದ್ದರು.

ಪೊಲೀಸರು ರಾಜು ಅವರನ್ನು ಕಳುಹಿಸಿ ಕೊಡದ ಹಿನ್ನಲೆಯಲ್ಲಿ ಮೊಬೈಲ್ ಕ್ಯಾಮರಾ ಆನ್ ಮಾಡಿಕೊಂಡು ಠಾಣೆ ಒಳಗೆ ನುಗ್ಗಿದ ಮಹಿಳೆ ಪೊಲೀಸರೇ ಆರೋಪಿಗೆ ರಕ್ಷಣೆ ನೀಡುತ್ತಿದ್ದಾರೆ. ಇಂತಹ ಪೊಲೀಸರಿಂದ ರಕ್ಷಣೆ ಹೇಗೆ ಸಾಧ್ಯವೆಂದು ಆಕ್ರೋಶಭರಿತರಾಗಿ ಮಾತನಾಡಿರುವ ವಿಡಿಯೋ ಹಂಚಿಕೆಯಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಬಿಜೆಪಿಯಲ್ಲಿ ವ್ಯಕ್ತಿಗಿಂತ ದೇಶ ಮುಖ್ಯ : ನವಿಲೆ ಅಣ್ಣಪ್ಪ

• ಪ್ರಜೋದಯ ವರದಿ

**ಹಾಸನ:** ಬಿಜೆಪಿ ಪಕ್ಷದಲ್ಲಿ ವ್ಯಕ್ತಿಗಿಂತ ದೇಶ ಮುಖ್ಯ ಎಂಬ ಸಿದ್ಧಾಂತವಿದ್ದು, ಇತರೆ ರಾಜಕೀಯ ಪಕ್ಷಗಳಿಗಿಂತ ವಿಭಿನ್ನವಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನವಿಲೆ ಅಣ್ಣಪ್ಪ ಅವರು ತಿಳಿಸಿದರು.

ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಸೋಮವಾರ ಆಯೋಜಿಸಿದ್ದ 46ನೇ ಬಿಜೆಪಿ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತೀಯ ಜನತಾ ಪಕ್ಷ ರಾಷ್ಟ್ರವಾದಿ ಚಿಂತನೆಯಿಂದ ರೂಪುಗೊಂಡ ಪಕ್ಷವಾಗಿದೆ. ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಅಧ್ಯಕ್ಷತೆಯಿಂದ ಪ್ರಾರಂಭವಾಗಿ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ನೇತೃತ್ವದಿಂದ ನಿರ್ಮಾಣಗೊಂಡಿದೆ. ಬಿಜೆಪಿ ರೂಪುಗೊಳ್ಳುವ ಪೂರ್ವದಲ್ಲಿದ್ದ ಜನಸಂಘದ ಪ್ರಾರಂಭ ಹಾಗು ಬೆಳವಣಿಗೆಯ ಪ್ರಮುಖ ವಿದ್ಯಾಮಾನಗಳನ್ನು ತಿಳಿಸಿದರು.

ಬಿಜೆಪಿ ರಾಜ್ಯ ಒಬಿಸಿ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಕುಮಾರ್ ಅವರು ಮಾತನಾಡಿ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು ಹಾಗು ಡಾ.ಶ್ಯಾಮಪ್ರಸಾದ್ ಮುಖರ್ಜಿ ಅವರ ಬಲಿದಾನವನ್ನು ಬಿಜೆಪಿ ಕಾರ್ಯಕರ್ತರು ನೆನಪಿನಲ್ಲಿಡಬೇಕು. ಬಿಜೆಪಿ ಕಾರ್ಯಕರ್ತರು ರಾಷ್ಟ್ರವಾದ, ಸಂವಿಧಾನ, ಸಾಮಾಜಿಕ ಸಾಮರಸ್ಯ, ಕೌಟುಂಬಿಕ ಭಾವನೆ, ಪರಿಸರ ಎಂಬ ಪಂಚ ಉದ್ದೇಶಗಳ ಈಡೇರಿಕೆಗಾಗಿ ಶ್ರಮಿಸಬೇಕು. ಕೇವಲ ಚುನಾವಣೆ ಗೆಲ್ಲಲು ರಣತಂತ್ರ ಹೂಡುವುದು ಬಿಜೆಪಿ ಗುರಿಯಲ್ಲ. ಬದಲಿಗೆ ಪ್ರತಿದಿನವೂ ಉದ್ದೇಶದ ಈಡೇರಿಕೆಗೆ ಶ್ರಮಿಸುವ ಸೈನಿಕರಾಗಿರಬೇಕೆಂದರು.



ಸಭೆಯಲ್ಲಿ ಹಿರಿಯ ಕಾರ್ಯಕರ್ತರಾದ ಪ್ರೇಮಣ್ಣ ಹಾಗು ನವಿಲೆ ಅಣ್ಣಪ್ಪ ಅವರನ್ನು ಗೌರವಿಸಲಾಯಿತು. ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಪ್ರಕಾಶ್, ಜಿಲ್ಲಾ ಉಪಾಧ್ಯಕ್ಷ ಎ.ಡಿ. ಚಂದ್ರಶೇಖರ್, ಜಿಲ್ಲಾ ಮಾಧ್ಯಮ ಪ್ರಮುಖ್ ಬಿ.ವೇದಾವತಿ, ಜಿಲ್ಲಾ ಕಾರ್ಯದರ್ಶಿ ಛಾಯಾ ಕೃಷ್ಣ, ರೈತಮೋರ್ಚಾ ಅಧ್ಯಕ್ಷ ನಾರಾಯಣಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಳಾದ ಅಮಿತ್ ಶೆಟ್ಟಿ, ಗಿರೀಶ್ ನಂಬೀಹಳ್ಳಿ, ನಗರಾಧ್ಯಕ್ಷ ಯೋಗೀಶ್, ಮಂಜಣ್ಣ, ಕಂಚಮಾರನಹಳ್ಳಿ ಕಾಂತರಾಜ್ ಇದ್ದರು.

## ದೆಹಲಿ ವಿಧಾನಸಭೆಯಲ್ಲಿ ಭದ್ರತಾ ಲೋಪ

**ನವದೆಹಲಿ:** ದೆಹಲಿ ವಿಧಾನಸಭೆಯಲ್ಲಿ ಭದ್ರತಾ ಲೋಪ ಉಂಟಾಗಿರುವ ಘಟನೆ ಸೋಮವಾರ ವರದಿಯಾಗಿದೆ.

ಮುಸುಕುಧಾರಿ ವ್ಯಕ್ತಿಯೊಬ್ಬ ಎಸ್‌ಯುವಿ ಕಾರಿನಲ್ಲಿ ದೆಹಲಿ ವಿಧಾನ ಸಭೆಯ ಗೇಟ್ ಮುರಿದು ಒಳನುಗ್ಗಿ ಸ್ಪೀಕರ್ ಕಚೇರಿಯ ಹೊರಭಾಗದಲ್ಲಿ ಹೂವಿನ ಬೊಕ್ಕೆ ಇಟ್ಟು ಪರಾರಿಯಾಗಿದ್ದಾನೆ. ಅದರ ಬೆನ್ನಲ್ಲೇ ರಾಷ್ಟ್ರ ರಾಜಧಾನಿಯಲ್ಲಿ ಹೈ ಅಲರ್ಟ್ ಘೋಷಿಸಲಾಯಿತು. ನಂತರ ಕಾರ್ಯಾಚರಣೆ ನಡೆಸಿದ ಪೊಲೀಸರು ಚಾಲಕ ಸೇರಿ ಮೂವರನ್ನು ಬಂಧಿಸಿದ್ದಾರೆ. ಈ ಘಟನೆಗೆ ಬಳಕೆ ಮಾಡಲಾದ ಎಸ್‌ಯುವಿ ಕಾರನ್ನು ವಶಪಡಿಸಲಾಗಿದೆ. ಭದ್ರತಾ ಸಿಬ್ಬಂದಿಗಳ ಎದುರಲ್ಲೇ ನಡೆದ ಘಟನೆಯಿಂದ ಭಾರಿ ಭದ್ರತಾ ವೈಫಲ್ಯದ ಪ್ರಶ್ನೆ ಎದುರಾಗಿದೆ.

ಸ್ಥಳಕ್ಕೆ ಧಾವಿಸಿದ ಪೊಲೀಸ್ ತಂಡಗಳು, ಬಾಂಬ್ ನಿಷ್ಕ್ರಿಯ ದಳ ತಪಾಸಣೆ ನಡೆಸಿತು. ಆದರೆ ವಿಧಾನಸಭೆ ಆವರಣದಲ್ಲಿ ಯಾವುದೇ ಅನುಮಾನಾಸ್ಪದ ವಸ್ತು ಕಂಡುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

## ಖಜಾನೆಗೆ ಮರಳಿದ ಚನ್ನಕೇಶವ ಸ್ವಾಮಿ ಆಭರಣ



• ಪ್ರಜೋದಯ ವರದಿ

**ಬೇಲೂರು:** ಐತಿಹಾಸಿಕ ಚನ್ನಕೇಶವ ಸ್ವಾಮಿ ದೇವಸ್ಥಾನದ ಜಾತ್ರಾ ಮಹೋತ್ಸವ ಮುಕ್ತಾಯವಾದ ಹಿನ್ನಲೆಯಲ್ಲಿ ಖಜಾನೆಯಿಂದ ತಂದಿದ್ದ ದೇವರ ಚಿನ್ನಾಭರಣ ವನ್ನು ಪೊಲೀಸ್ ಬಿಗಿ ಭದ್ರತೆಯಲ್ಲಿ ಸೋಮವಾರ ತಾಲ್ಲೂಕು ಕಚೇರಿಯ ಖಜಾನೆಗೆ ರವಾನಿಸಲಾಯಿತು.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರು ಮಾತನಾಡಿ, ಶ್ರೀ ಚನ್ನಕೇಶವಸ್ವಾಮಿ ಜಾತ್ರಾ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ಉತ್ಸವ ಸಮಾಪ್ತಿಯೊಂದಿಗೆ ದೇವರಿಗೆ ಅಲಂಕರಿಸಿದ್ದ ಬಂಗಾರದ ಆಭರಣಗಳನ್ನು ಸುರಕ್ಷಿತವಾಗಿ ಪೊಲೀಸರ ಸಮ್ಮುಖದಲ್ಲಿ ತಂದು ಖಜಾನೆಯಲ್ಲಿ ಮೂಲ ಸ್ಥಳಕ್ಕೆ ಇರಿಸಲಾಗುತ್ತಿದೆ. ಮುಂದಿನ ಜಾತ್ರೆವರೆಗೆ ಅವುಗಳನ್ನು ಸೀಲ್ ಮಾಡಿ ಸಂರಕ್ಷಿಸಲಾಗುವುದು ಎಂದರು.

ದೇವಾಲಯ ಹಾಗು ತಾಲ್ಲೂಕು ಕಚೇರಿ ಸಿಬ್ಬಂದಿ, ಪೊಲೀಸರು ಹಾಜರಿದ್ದರು.

## ಏ.11 ರಿಂದ ಕುಣಿಯೋಣು ಬಾರ ಬೇಸಿಗೆ ರಂಗ ಶಿಬಿರ

• ಪ್ರಜೋದಯ ವರದಿ

**ಹಾಸನ:** ರಂಗಹೃದಯ ಹಾಸನ, ಸಂಸ್ಕೃತಿಕ ಟ್ರಸ್ಟ್ ಹಾಗು ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ ವತಿಯಿಂದ ನಗರದಲ್ಲಿ ಕುಣಿಯೋಣು ಬಾರ ಎಂಬ ವಿಶೇಷ ಬೇಸಿಗೆ ರಂಗ ಶಿಬಿರವನ್ನು ಏ.11 ರಿಂದ 30ರ ವರೆಗೆ ಆಯೋಜಿಸಲಾಗಿದೆ ಎಂದು ಶಿಬಿರದ ಸಂಚಾಲಕಿ ಪೂಜಾ ರಘುನಂದನ್ ಅವರು ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.11 ರಿಂದ 30ರ ವರೆಗೆ ಪ್ರತಿದಿನ ಬೆ.10 ರಿಂದ ಸಂಜೆ 4ರ ವರೆಗೆ ನಗರದ ಹಾಸನಾಂಬ ಕಲಾಕ್ಷೇತ್ರ ಆವರಣ ಹಾಗು ಶಾಸ್ತ್ರಾಸ್ ಪಬ್ಲಿಕ್ ಶಾಲೆ ಆವರಣದಲ್ಲಿ ನಡೆಯಲಿದೆ. 5 ರಿಂದ 15 ವರ್ಷದೊಳಗಿನ ಮಕ್ಕಳಿಗೆ ಅವಕಾಶವಿದ್ದು, ಮಕ್ಕಳ ಸೃಜನಶೀಲತೆ ಮತ್ತು ವ್ಯಕ್ತಿತ್ವದ ಸಮಗ್ರ ಬೆಳವಣಿಗೆಗಾಗಿ ಆಸಕ್ತ ಪೋಷಕರು ಶಿಬಿರಕ್ಕೆ ಕಳುಹಿಸಬಹುದೆಂದು ಹೇಳಿದರು.

ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಟೈಮ್ಸ್ ಗಂಗಾಧರ್ ಅವರು ಮಾತನಾಡಿ, ಮಕ್ಕಳಿಗೆ ಹೊಸ ಕಲಿಕೆ, ಹೊಸ ಸ್ನೇಹ ಮತ್ತು ಹೊಸ ಅನುಭವ ನೀಡುವ ಶಿಬಿರಕ್ಕೆ ತಲಾ 2500 ರೂ. ಶುಲ್ಕ ನಿಗದಿಪಡಿಸಲಾಗಿದೆ. ನೇಪಥ್ಯಕ್ಕೆ ಸರಿಯುತ್ತಿರುವ ಹಸೆ ಚಿತ್ರಕಲೆಯಂತಹ ಹಳೆಯ ಕಲೆಯನ್ನು ಮಕ್ಕಳಿಗೆ ಪರಿಚಯಿಸಲಾಗುತ್ತಿದೆ. ಆ ಮೂಲಕ ಪೂರ್ವಜರು ಉಳಿಸಿದ್ದ ಕಲೆಯನ್ನು ಮುಂದಿನ ತಲೆಮಾರಿಗೆ ಪರಿಚಯಿಸಿ, ಬೆಳೆಸುವ ಕೆಲಸವನ್ನು ಶಿಬಿರದ ಮೂಲಕ ಮಾಡಲಾಗು ತ್ತಿದೆ. ಮಾಹಿತಿಗಾಗಿ 99860-78790, 76764-43338 ಅಥವಾ ಅಕ್ಷರ ಬುಕ್ ಹೌಸ್ ಮಳಿಗೆ ಸಂಪರ್ಕಿಸಲು ತಿಳಿಸಿದರು.




ಸಂಚಾಲಕ ಪ್ರದೀಪ್ ರಂಗಾಯಣ ಮಾತನಾಡಿ, ಈ ಬಾರಿ ಜಾನಪದ ರಂಗಶಿಬಿರ ಮಾಡಲಾ ಗುತ್ತಿದೆ. ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಅಭಿನಯದ ಪ್ರಾಥಮಿಕ ಪಾಠ, ನಾಟಕ ರಚನೆ, ಸಂಭಾಷಣಾ ಕೌಶಲ ಮತ್ತು ಜನಪದ ರಂಗ ಭೂಮಿಯ ತಂತ್ರಗಳನ್ನು ತಿಳಿಸಲಾ ಗುವುದು. ಜೊತೆಗೆ ಜಾನಪದ ನೃತ್ಯ, ಶಾಸ್ತ್ರೀಯ ಸಂಗೀತ, ಹಸೆ ಚಿತ್ರಕಲೆ ಹಾಗೂ ಕರಕುಶಲ ಕಲೆಯಂತಹ ಸಾಂಪ್ರದಾಯಿಕ ಕಲೆ ಪರಿಚಯವನ್ನು ಮಕ್ಕಳಿಗೆ ಮಾಡಿಕೊಡಲಾಗುತ್ತದೆ. ಶಿಬಿರದ ಭಾಗವಾಗಿ ಒಂದು ದಿನದ ಶೈಕ್ಷಣಿಕ ಪ್ರವಾಸ ಸಹ ಆಯೋಜಿಸಲಾಗಿದ್ದು, ಮಕ್ಕಳಿಗೆ ಹೊಸ ಅನುಭವ ನೀಡುವ ಜೊತೆಗೆ ಅವರ ಸಾಮಾಜಿಕ ಅರಿವು ವಿಸ್ತರಿಸುತ್ತದೆ ಎಂದರು.

ಸುದ್ದಿಗೋಷ್ಟಿಯಲ್ಲಿ ಚಿನ್ನೇಹಳ್ಳಿ ಸ್ವಾಮಿ ಇದ್ದರು.

# ಅವ್ಯವಸ್ಥೆಯ ಆಗರ ಅರಸೀಕೆರೆ ತಾತ್ಕಾಲಿಕ ಬಸ್ ನಿಲ್ದಾಣ

• ಪ್ರಜೋದಯ ವರದಿ

**ಅರಸೀಕೆರೆ:** ಹೊಸ ಬಸ್ ನಿಲ್ದಾಣ ಕಾಮಗಾರಿ ಹಿನ್ನಲೆಯಲ್ಲಿ ತಾತ್ಕಾಲಿಕವಾಗಿ ಸ್ಥಳಾಂತರವಾಗಿರುವ ನಿಲ್ದಾಣ ಅವ್ಯವಸ್ಥೆಯ ಆಗರವಾಗಿದ್ದು ಸಾರ್ವಜನಿಕರ ಗೋಳು ಕೇಳುವವರು ಯಾರೂ ಇಲ್ಲವಾಗಿದ್ದಾರೆ.

35 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ಬಸ್ ನಿಲ್ದಾಣ ನಿರ್ಮಾಣವಾಗುತ್ತಿರುವುದು ಒಳ್ಳೆಯ ಬೆಳವಣಿಗೆ. ಆದರೂ ಅಭಿವೃದ್ಧಿ ಹೆಸರಿನಲ್ಲಿ ಪ್ರಯಾಣಿಕರು ಹಾಗು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗೆ ಪರಿಹಾರ ದೊರಕಿಸಿ ಕೊಡುವವರು ಯಾರು ಎಂಬ ಪ್ರಶ್ನೆ ಉದ್ಭವವಾಗಿದೆ.

ನೂತನ ಬಸ್ ನಿಲ್ದಾಣದ ಕಾಮಗಾರಿ ಯೇನೋ ಆರಂಭವಾಗಿದೆ. ಆದರೆ ಸಾರಿಗೆ ಸಂಸ್ಥೆಯ ಬಸ್ ಡಿಪೋ ಪಕ್ಕ ಸ್ಥಳಾಂತರಿಸುವ ಮುನ್ನ ಪ್ರಯಾಣಿಕರ ಹಿತವನ್ನು ಪರಿಗಣಿಸಬೇಕಿತ್ತು. ಸ್ಥಳಾಂತರಗೊಂಡಿರುವ ಬಸ್ ನಿಲ್ದಾಣದಲ್ಲಿ ಸಮರ್ಪಕವಾಗಿ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಇಲ್ಲ. ನಿರಂತರವಾಗಿ ಬಸ್‌ಗಳು ನಿಲ್ದಾಣಕ್ಕೆ ಬಂದು ಹೋಗುವುದರಿಂದ ನಿಲ್ದಾಣದ ಆವರಣ ಸದಾ ಧೂಳಿನಿಂದ ತುಂಬಿರುತ್ತದೆ ಎಂಬುದು ಪ್ರಯಾಣಿಕರ ದೂರಾಗಿದೆ. ಇತ್ತ ಹಳೆ ಬಸ್ ನಿಲ್ದಾಣದ ಬಳಿ ಬಸ್‌ಗಳು ಹೆದ್ದಾರಿಯಲ್ಲಿ ನಿಂತು ಪ್ರಯಾಣಿಕರನ್ನು ಹತ್ತಿಸಿಕೊಳ್ಳುವುದು ಹಾಗು ಇಳಿಸುತ್ತಿರುವುದರಿಂದ ಸಹಜವಾಗಿಯೇ ಸಹಸ್ರ ಸಂಖ್ಯೆಯಲ್ಲಿ ಬಸ್ ಪ್ರಯಾಣಿಕರು ಇಲ್ಲಿಯೇ ನಿಂತು ತಮ್ಮ ಪ್ರಯಾಣವನ್ನು ಬೆಳೆಸಬೇಕಾದ ಸ್ಥಿತಿ ಇದೆ. ರಸ್ತೆ ಬದಿಯಲ್ಲೇ ಬಿಸಿಲು ಮತ್ತು ಮಳೆಗೆ ಮೈಯೊಡ್ಡಿ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.



ಹೆದ್ದಾರಿಯಲ್ಲಿ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವ ಅಥವಾ ಇಳಿಸುವ ಸಂದರ್ಭದಲ್ಲಿ ಅಪಘಾತ ಸಂಭವಿಸಿದರೆ ಅಥವಾ ಬಿಸಿಲು ಮಳೆಯಿಂದ ರಕ್ಷಣೆ ಇಲ್ಲದೆ ಪ್ರಯಾಣಿಕರಿಗೆ ಸಾವು ನೋವು ಸಂಭವಿಸಿದರೆ ಅದರ ಹೊಣೆಯನ್ನು ಯಾರು ಹೊರಬೇಕೆಂಬುದರ ಕುರಿತು ಜನಪ್ರತಿನಿಧಿಗಳು ಹಾಗು ಅಧಿಕಾರಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ಸಮರ್ಪಕ ಮೂಲಭೂತ ವ್ಯವಸ್ಥೆ ಕಲ್ಪಿಸುವವರೆಗೆ ನಗರದ ಕೃಷಿ ಉತ್ಪನ್ನ ಮಾರುಕಟ್ಟೆಯ ಆವರಣದ ಒಂದು ಬದಿಯ ಪ್ರದೇಶವನ್ನು ಬಸ್ ಸಂಚಾರಕ್ಕೆ ಬಳಸಿಕೊಂಡರೆ ಪ್ರಯಾಣಿಕರಿಗೆ ಬಿಸಿಲು ಮಳೆಯಿಂದ ರಕ್ಷಣೆ ಸಿಗುವ ಜೊತೆಗೆ ಹೆದ್ದಾರಿಯಲ್ಲಿ ಬಸ್‌ಗಾಗಿ ಕಾಯುವುದನ್ನು ತಪ್ಪಿಸಬಹುದು. ಈ ನಿಟ್ಟಿನಲ್ಲಿ ಕ್ಷೇತ್ರ ಶಾಸಕರು ಹಾಗು ಅಧಿಕಾರಿ ಗಳು ಗಮನ ಹರಿಸಲಿ ಎಂದು ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಅವರು ಆಗ್ರಹಿಸಿದ್ದಾರೆ.

> **ತರಾತುರಿಯಲ್ಲಿ ಬಸ್ ನಿಲ್ದಾಣವನ್ನು ಸ್ಥಳಾಂತರಿಸಿದ ಶಾಸಕರು ಹಾಗು ಸಾರಿಗೆ ಇಲಾಖೆ ಅಧಿಕಾರಿಗಳು ತಾತ್ಕಾಲಿಕ ನಿಲ್ದಾಣದಲ್ಲಿ ಕನಿಷ್ಟ ಮೂಲಸೌಕರ್ಯಕ್ಕೆ ಆದ್ಯತೆ ನೀಡಬೇಕಿತ್ತು. ಇಲಾಖೆ ಅಧಿಕಾರಿಗಳ ಈ ಬೇಜವಾಬ್ದಾರಿ ನಡೆಯಿಂದ ಪ್ರಯಾಣಿಕರಿಗೆ ಭಾರೀ ತೊಂದರೆಯಾಗುತ್ತಿದೆ.**
> **-ವಿವೇಕ್, ಜೆಡಿಎಸ್ ಮುಖಂಡ**

> **ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಕಾಮಗಾರಿ ನಡೆಯಬೇಕಾದರೆ ಸಣ್ಣಪುಟ್ಟ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಎಲ್ಲವನ್ನೂ ರಾಜಕೀಯ ದೃಷ್ಟಿಯಿಂದ ನೋಡುವ ಮನಸ್ಥಿತಿ ಸರಿಯಲ್ಲ. ಶಾಸಕ ಕೆ. ಎಂ.ಶಿವಲಿಂಗೇಗೌಡ ಅವರು ಕ್ಷೇತ್ರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದು ಅವರಿಗೆ ಪ್ರೋತ್ಸಾಹಿಸುವ ಕೆಲಸ ಎಲ್ಲರಿಂದ ಆಗಬೇಕು.**
> **-ಧರ್ಮಶೇಖರ್, ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ**

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK